ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 4 ಭಾನುವಾರ 2024

ಸಂಪುಟ: 44 | ಸಂಚಿಕೆ: 287 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಎಲ್.ಕೆ.ಅಡ್ವಾಣಿ ಈಗ 'ಭಾರತ ರತ್ನ'

ನವದೆಹಲಿ, ಫೆ.3– ಮಾಜಿ ಉಪ ಪ್ರಧಾನಿ ಎಲ್.ಕೆ.ಅಡ್ವಾಣಿಯ ವರಿಗೆ(96 ವರ್ಷ) ದೇಶದ ಅತ್ಯುನ್ನತ ನಾಗರಿಕ ಗೌರವವಾದ 'ಭಾರತ ರತ್ನ' ಘೋಷಣೆ ಮಾಡಲಾಗಿದೆ.

ಈ ವಿಷಯವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಟ್ವೀಟ್ ಮೂಲಕ ಹಂಚಿಕೊಂಡಿದ್ದಾರೆ. 'ಎಲ್.ಕೆ.ಅಡ್ವಾಣಿಯವರಿಗೆ 'ಭಾರತ ರತ್ನ' ಪ್ರಶಸ್ತಿ ಗೌರವ ನೀಡುತ್ತಿರುವ ವಿಚಾರವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಹಳ ಸಂತಸವಾಗುತ್ತಿದೆ. ಈ ಕುರಿತು ಅವರೊಂದಿಗೆ ದೂರವಾಣಿ ಮೂಲಕ ನಾನೇ ಖುದ್ದಾಗಿ ತಿಳಿಸಿದ್ದು, ಅದನ್ನು ಕೇಳಿ ಅವರು ಬಹಳ ಖುಷಿಪಟ್ಟರು' ಎಂದು ಪ್ರಧಾನಿ ಮೋದಿ ಟ್ವೀಟ್ ಮೂಲಕ ಹೇಳಿಕೊಂಡಿದ್ದಾರೆ.

ಕಳೆದ ತಿಂಗಳು, ಜನವರಿ 22ರಂದು ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಗೊಂಡಿತು. ರಾಮಮಂದಿರ ಹೋರಾಟದ ರೂವಾರಿ, ಬಿಜೆಪಿ ಭೀಷ್ಮ ಎಂದೇ ಜನಪ್ರಿಯರು ಅಡ್ವಾಣಿಯವರು. ಅಯೋಧ್ಯೆ ರಾಮಮಂದಿರ ಉದ್ಘಾಟನೆಗೊಂಡ ಬೆನ್ನಲ್ಲೇ ಬಿಹಾರದ ಮಾಜಿ ಮುಖ್ಯಮಂತ್ರಿ ದಿವಂಗತ ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ಘೋಷಣೆ ಮಾಡಲಾಗಿತ್ತು. ಅದಾದ ಒಂದೇ ವಾರದಲ್ಲಿ ಅಡ್ವಾಣಿಯವರಿಗೆ ಭಾರತ ರತ್ನ ಗೌರವ ಘೋಷಣೆಯಾಗಿದೆ. ಅಡ್ವಾಣಿ ಅವರು ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ 2002 ರಿಂದ 2004ರವರೆಗೆ ಉಪ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು. ಇದಕ್ಕೂ ಮೊದಲು ಕೇಂದ್ರ ಗೃಹ ಖಾತೆ ಸೇರಿದಂತೆ ಹಲವು ಸಚಿವಾಲಯಗಳ ಮುಖ್ಯಸ್ಥರಾಗಿದ್ದರು. 1970 ಮತ್ತು 2019ರ ನಡುವೆ ಸಂಸತ್ತಿನ ಉಭಯ ಸದನಗಳ ಸದಸ್ಯರಾಗಿದ್ದರು. ಎಲ್.ಕೆ.ಅಡ್ವಾಣಿ, ಬಿಜೆಪಿಯ ಸುದೀರ್ಘ ಅವಧಿಯ ಅಧ್ಯಕ್ಷರೂ ಆಗಿದ್ದರು. ಅವರು 1980 ರಲ್ಲಿ ಭಾರತೀಯ ಜನತಾ ಪಕ್ಷದ ಪ್ರಾರಂಭದಿಂದಲೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ● 6ನೇ ಪುಟಕ್ಕೆ




ಅಡ್ವಾಣಿ ದೇಶವನ್ನು ಒಂದು ಪಕ್ಷ, ಒಂದು ಕುಟುಂಬದ ಹಿಡಿತದಿಂದ ರಕ್ಷಿಸಿದ್ದಾರೆ

ಸಂಬಲ್‌ಪುರ, ಫೆ.3–ಬಿಜೆಪಿ ಹಿರಿಯ ನಾಯಕ ಮತ್ತು ಮಾಜಿ ಉಪ ಪ್ರಧಾನಿ ಲಾಲ್‌ಕೃಷ್ಣ ಅಡ್ವಾಣಿ ಅವರು ದೇಶ ಸೇವೆಗೆ ನೀಡಿದ ಅಮೂಲ್ಯ ಕೊಡುಗೆಯನ್ನು ಗುರುತಿಸಿ ಅವರಿಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನ ನೀಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಶನಿವಾರ ಪ್ರಧಾನಿ ಮೋದಿ ಹೇಳಿದ್ದಾರೆ.

ಇಂದು ಸಂಬಲ್‌ಪುರದಲ್ಲಿ ಸುಮಾರು 70,000 ಕೋಟಿ ರೂ.ಗಳ ಯೋಜನೆಗಳಿಗೆ ಚಾಲನೆ ನೀಡಿದ ನಂತರ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, 'ದೇಶ ಮೊದಲು' ಎಂಬ ಸಿದ್ಧಾಂತವನ್ನು ನಂಬುವ ಎಲ್ಲರಿಗೂ ಇಂತಹ ಗೌರವ ಸಲ್ಲಬೇಕು ಎಂದರು.

ಇಬ್ಬರು ಸಂಸದರೊಂದಿಗೆ ತನ್ನ ಪಯಣವನ್ನು ಆರಂಭಿಸಿದ ಪಕ್ಷವನ್ನು ವಿಶ್ವದ ಅತಿ ದೊಡ್ಡ ಪಕ್ಷವಾಗಿ ಪರಿವರ್ತಿಸಲು ಸಹಾಯ ಮಾಡಿದ ಪಕ್ಷದ ಕಾರ್ಯಕರ್ತನಿಗೆ ಈ ಗೌರವ ಎಂದು ಮೋದಿ ಹೇಳಿದ್ದಾರೆ. ವಿರೋಧಿಗಳು ಬಿಜೆಪಿಯನ್ನು ಅಸ್ಪೃಶ್ಯ ಎಂದು ಘೋಷಿಸಿದ ಸಮಯವನ್ನು ನೆನಪಿಸಿಕೊಂಡ ಮೋದಿ, ಅಟಲ್ ಬಿಹಾರಿ ವಾಜಪೇಯಿ ಮತ್ತು ಅಡ್ವಾಣಿ ಈ ಸಿದ್ಧಾಂತವನ್ನು ಸೋಲಿಸಲು ಮತ್ತು ಪಕ್ಷವನ್ನು ದೇಶದಲ್ಲಿ ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳೆಯಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು ಎಂದರು.



ಒಂದು ಪಕ್ಷ ಮತ್ತು ಒಂದು ಕುಟುಂಬದ ಕಪಿಮುಷ್ಟಿಯಿಂದ ದೇಶವನ್ನು ರಕ್ಷಿಸುವಲ್ಲಿ ಅಡ್ವಾಣಿ ಅವರು ವಹಿಸಿದ ಪಾತ್ರವನ್ನು ಶ್ಲಾಘಿಸಿದ ಪ್ರಧಾನಿ ಮೋದಿ, 96 ವರ್ಷದ ಬಿಜೆಪಿ ನಾಯಕ, ರಾಷ್ಟ್ರೀಯತೆಯ ಸಿದ್ಧಾಂತದೊಂದಿಗೆ ಜನರನ್ನು ಸಂಪರ್ಕಿಸುವ ಮೂಲಕ ಭಾರತೀಯ ಪ್ರಜಾಪ್ರಭುತ್ವವನ್ನು ಇನ್ನಷ್ಟು ಬಲಪಡಿಸುವ ಸವಾಲು ತೆಗೆದುಕೊಂಡಿದ್ದರು ಎಂದು ಹೇಳಿದರು. ನಾವು ಈಗ ಅವರ ತಪಸ್ಸಿನ ಫಲಿತಾಂಶವನ್ನು ನೋಡುತ್ತಿದ್ದೇವೆ. ರಾಷ್ಟ್ರಕ್ಕಾಗಿ ಅವರು ನೀಡಿದ ಕೊಡುಗೆಗಾಗಿ ನಾನು ಮತ್ತೊಮ್ಮೆ ಅಡ್ವಾಣಿ ಜೀ ಅವರನ್ನು ಅಭಿನಂದಿಸುತ್ತೇನೆ ಮತ್ತು ಅವರ ದೀರ್ಘ ಮತ್ತು ಆರೋಗ್ಯಕರ ಜೀವನಕ್ಕಾಗಿ ಪ್ರಾರ್ಥಿಸುತ್ತೇನೆ ಎಂದು ಮೋದಿ ಹೇಳಿದ್ದಾರೆ.

ನನ್ನ ಆದರ್ಶ, ತತ್ವಗಳಿಗೆ ಸಂದ ಗೌರವ: ಅಡ್ವಾಣಿ

ನವದೆಹಲಿ, ಫೆ.3– ಪ್ರತಿಷ್ಠಿತ 'ಭಾರತ ರತ್ನ' ಪ್ರಶಸ್ತಿಯನ್ನು ಒಬ್ಬ ವ್ಯಕ್ತಿಯಾಗಿ ಮಾತ್ರ ಅಲ್ಲ ಜೀವನದುದ್ದಕ್ಕೂ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಸೇವೆ ಸಲ್ಲಿಸಲು ಕಾರಣವಾದ ಆದರ್ಶಗಳು ಮತ್ತು ತತ್ವಗಳಿಗೆ ಸಂದ ಗೌರವ ಎಂದು ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅಭಿಪ್ರಾಯಪಟ್ಟಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗೆ ತಮ್ಮ ಹೆಸರನ್ನು ಘೋಷಿಸಿದ ಬೆನ್ನಲ್ಲೇ, "ಅತ್ಯಂತ ನಮ್ರತೆ ಮತ್ತು ಕೃತಜ್ಞತೆಯಿಂದ, ಇಂದು ನನಗೆ ನೀಡಲಾದ 'ಭಾರತ ರತ್ನ'ವನ್ನು ನಾನು ಸ್ವೀಕರಿಸುತ್ತೇನೆ" ಎಂದು ಅಡ್ವಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 96 ವರ್ಷದ ನಾಯಕ, ಬಿಜೆಪಿ ಅಧ್ಯಕ್ಷರಾಗಿ ಸುದೀರ್ಘ ಸೇವೆ ಸಲ್ಲಿಸಿದ ಅಡ್ವಾಣಿ ಅವರು, 14ನೇ ವಯಸ್ಸಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಸದಸ್ಯನಾಗಿ ನಿಸ್ವಾರ್ಥದಿಂದ ಯಾವುದೇ ಪ್ರತಿಫಲ ಬಯಸದೇ ಸೇವೆ ಸಲ್ಲಿಸಿದ್ದೇನೆ. ದೇಶಕ್ಕಾಗಿ ನನ್ನ ಜೀವನ ಮುಡಿಪು ಎಂದು ಹೇಳಿದ್ದಾರೆ. "ಈ ಜೀವನ ನನ್ನದಲ್ಲ, ● 6ನೇ ಪುಟಕ್ಕೆ

ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಅಧಿಕಾರಿಗಳು, ಪತ್ರಕರ್ತರ ಉತ್ಸುಕತೆ

ಬಹುತೇಕರು ಬಿಜೆಪಿ ಟಿಕೆಟ್ ಆಕಾಂಕ್ಷಿಗಳು; ಅಚ್ಚರಿ ಸಂಗತಿ

ಬೆಂಗಳೂರು, ಫೆ.3(ಕೆಎಂಶಿ)– ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಐಎಎಸ್, ಐಪಿಎಸ್ ಅಧಿಕಾರಿಗಳು ಮತ್ತು ಪತ್ರಕರ್ತರು ರಾಜಕೀಯ ಪಕ್ಷಗಳ ಬಾಗಿಲು ತಟ್ಟಿದ್ದಾರೆ. ಅಧಿಕಾರದಲ್ಲಿರುವವರು ಮತ್ತು ನಿವೃತ್ತಿ ಹೊಂದಿರುವ ಕೆಲವರು ಸಂಸತ್ ಪ್ರವೇಶಿಸಲು ಹಾತೊರೆಯುತ್ತಿದ್ದಾರೆ.

ಸುಮಾರು 14ಕ್ಕೂ ಹೆಚ್ಚು ಅಧಿಕಾರಿಗಳು ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಸ್ಪರ್ಧಿಸಲು ಮುಂದಾಗಿದ್ದಾರೆ. ಅದರಲ್ಲೂ ಬಿಜೆಪಿ ಟಿಕೆಟ್‌ಗೆ ಹೆಚ್ಚು ಆಕಾಂಕ್ಷಿಗಳಾಗಿದ್ದು, ತಮ್ಮ ಪ್ರಭಾವ ಬಳಸಿ ಟಿಕೆಟ್ ಪಡೆಯುವ ಪ್ರಯತ್ನ ಮಾಡಿದ್ದಾರೆ. ಮುಖ್ಯಮಂತ್ರಿ ಕಾರ್ಯಾಲಯ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಅಂಚಿನಲ್ಲಿರುವ ಅಧಿಕಾರಿಯೊಬ್ಬರು ಚುನಾವಣಾ ಕಣಕ್ಕಿಳಿಯಲು ಬಯಸಿದ್ದಾರೆ. ಅವರಿಗೆ ಮಾತ್ರ ಮೀಸಲಾದ ಒಂದು ಕ್ಷೇತ್ರವನ್ನು ಬಿಟ್ಟುಕೊಡಲು ಮೂರು ಪಕ್ಷಗಳಿಗೂ ಒಲವಿದೆ.

ಅವರು ಯಾವ ಪಕ್ಷದಿಂದ ಕಣಕ್ಕಿಳಿಯಲಿದ್ದಾರೆ ಎಂಬುದನ್ನು ಕಾದುನೋಡಬೇಕು. ಕಳೆದ ಕೆಲವು ಚುನಾವಣೆಗಳಲ್ಲಿ ಕಣಕ್ಕಿಳಿದು ಪರಾಭವಗೊಂಡ ಕೆಲವು ಅಧಿಕಾರಿಗಳು ಮರು ಪ್ರಯತ್ನ ಮಾಡಿದ್ದಾರೆ. ಸೇವೆಯಲ್ಲಿ ಕಾರ್ಯ ನಿರ್ವಹಿಸುವಾಗ ರಾಜಕೀಯ ಪಕ್ಷಗಳ ಮುಖಂಡರೊಂದಿಗಿನ ಒಡನಾಟವಿರುತ್ತದೆ. ಅದರಲ್ಲೂ ಕರ್ನಾಟಕ ಮೂಲದ ಅಧಿಕಾರಿಗಳಿಗೆ ರಾಜಕೀಯ ಪಕ್ಷಗಳು ಹಿಂದೆ ನೀಡಿವೆ. ಮುಂದೆಯೂ ನೀಡುವ ಸಾಧ್ಯತೆಗಳಿವೆ. ಮೂರು ಪಕ್ಷಗಳಿಗೂ ● 6ನೇ ಪುಟಕ್ಕೆ

ಕೆರಗೋಡು ಧ್ವಜ ವಿವಾದ ಪ್ರಕರಣ

ಧ್ವಜ ಸ್ತಂಭ ಸ್ಥಳಾಂತರಕ್ಕೆ ಜಾಗ ಗುರುತಿಸಲು 2 ದಿನ ಕಾಲಾವಕಾಶ

ಜಿಲ್ಲಾಧಿಕಾರಿ ಡಾ.ಕುಮಾರ್ ನೇತೃತ್ವದಲ್ಲಿ ಶಾಂತಿ ಸಭೆ



ಕೆರೆಗೋಡು ಧ್ವಜ ವಿವಾದ ಸಂಬಂಧ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ನೇತೃತ್ವದಲ್ಲಿ ಶಾಂತಿ ಸಭೆ ನಡೆಯಿತು.

ಮಂಡ್ಯ,ಫೆ.3– ಕೆರಗೋಡು ಗ್ರಾಮದ ಹನುಮ ಧ್ವಜ ವಿವಾದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಡಾ.ಕುಮಾರ್ ನೇತೃತ್ವದಲ್ಲಿ ಶಾಂತಿ ಸಭೆ ನಡೆಯಿತು. ಧ್ವಜ ಸ್ತಂಭ ಸ್ಥಳಾಂತರಕ್ಕೆ ಜಾಗ ಗುರುತಿಸಲು ಎರಡು ದಿನ ಕಾಲಾವಕಾಶ ನೀಡಲಾಯಿತು ಎಂದು ತಿಳಿದು ಬಂದಿದೆ.

ಮಾಧ್ಯಮದವರನ್ನು ಹೊರಗಿಟ್ಟು ನಡೆಸಿದ ಸಭೆಯಲ್ಲಿ ಗ್ರಾಮಸ್ಥರು ವಿವಾದಕ್ಕೆ ಮೂಲ ಕಾರಣದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ, ಮೊದಲೇ ಗ್ರಾಮಸ್ಥರನ್ನು ಕರೆಸಿ ಶಾಂತಿಸಭೆ ನಡೆಸಿ ಸ್ಥಳಾಂತರಕ್ಕೆ ಅವಕಾಶ ಮಾಡಿಕೊಟ್ಟಿದ್ದರೆ ಯಾವುದೇ ವಿವಾದ, ಸಮಸ್ಯೆ ಉಂಟಾಗುತ್ತಿರಲಿಲ್ಲ. ಆ ಕೆಲಸವನ್ನು ಜಿಲ್ಲಾಡಳಿತದಿಂದಾಗಲೀ ಅಥವಾ ಸ್ಥಳೀಯ ಶಾಸಕರು ಮಾಡಲಿಲ್ಲ ಎಂಬ ದೂರುಗಳು ಕೇಳಿ ಬಂದಿವೆ.

ಕೆಲವು ಮುಖಂಡರು ನಾವು ಯಾವುದೇ ಕಾರಣಕ್ಕೂ ಸ್ಥಳಾಂತರ ಮಾಡಲು ಬಿಡುವುದಿಲ್ಲ. ಈಗ ಇರುವ ಧ್ವಜಸ್ತಂಭದಲ್ಲಿಯೇ ಹನುಮ ಧ್ವಜ ಹಾರಿಸಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು ಎಂದು ತಿಳಿದು ಬಂದಿವೆ. ಆಗ ಜಿಲ್ಲಾಧಿಕಾರಿ ಡಾ. ಕುಮಾರ್ ಅವರು, ● 9ನೇ ಪುಟಕ್ಕೆ

ಫೆ.6ರಿಂದ 11ರವರೆಗೆ ಐತಿಹಾಸಿಕ ಸುತ್ತೂರು ಜಾತ್ರಾ ಮಹೋತ್ಸವ

■ ಅತ್ಯಾಕರ್ಷಕ ವಸ್ತುಪ್ರದರ್ಶನ ■ ಚಿತ್ರಕಲೆ ಸೇರಿದಂತೆ ನಾನಾ ಸ್ಪರ್ಧೆ ■ ದೋಣಿ ವಿಹಾರ ಸೇರಿದಂತೆ ದೇಶಿ ಆಟ ■ ದೇಶದ ಸಾಂಪ್ರದಾಯಿಕ ಸಾಹಸ ಕ್ರೀಡೆ ಕುಸ್ತಿ ■ ಕೃಷಿಕರಿಗೆ ಭರಪೂರ ಮಾಹಿತಿ ವ್ಯವಸ್ಥೆ ■ ಧಾರ್ಮಿಕತೆಯೊಂದಿಗೆ ವೈಚಾರಿಕ ಪ್ರಕ್ರಿಯೆ ಅನಾವರಣ

ಮೈಸೂರು, ಫೆ.3(ಎಂಟಿವೈ)– ಮೈಸೂರು ಭಾಗದ ಪ್ರಮುಖ ಜಾತ್ರಾ ಮಹೋತ್ಸವ, ಸುತ್ತೂರು ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಫೆ.6ರಿಂದ 11ರವರೆಗೆ ವಿಜೃಂಭಣೆಯಿಂದ ನೆರವೇರಲಿದ್ದು, ಅದಕ್ಕಾಗಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಾತ್ರಾ ಮಹೋತ್ಸವ ಸಮಿತಿಯ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್ ತಿಳಿಸಿದ್ದಾರೆ.

ನಂಜನಗೂಡು ತಾಲೂಕಿನ ಸುತ್ತೂರಿನ ಶ್ರೀಮಠದ ಆವರಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಬಿಂಬಿಸುವ ಸುತ್ತೂರು ಜಾತ್ರಾ ಮಹೋತ್ಸವಕ್ಕೆ ರಾಜ್ಯ, ಹೊರರಾಜ್ಯದಿಂದ ಲಕ್ಷಾಂತರ ಭಕ್ತರು ಆಗಮಿಸಲಿದ್ದಾರೆ. ಈ ಬಾರಿಯೂ ಅಧಿಕ ಸಂಖ್ಯೆಯ ಭಕ್ತರ ಆಗಮನದ ನಿರೀಕ್ಷೆ ಇದೆ. ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ವೈಭವಯುತವಾಗಿ ಜಾತ್ರೆ ಜರುಗಲಿದ್ದು, ಧಾರ್ಮಿಕ ಕಾರ್ಯದೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು. ಈ ಬಾರಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಹಾಗೂ ರಾಜ್ಯ ಸಚಿವರು, ಸಂಸದರು, ಶಾಸಕರು, ಗಣ್ಯರು, ವಿವಿಧ ಮಠಗಳ ಮಠಾಧೀಶರು, ಸಾಹಿತಿಗಳು ಜಾತ್ರೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಈ ವರ್ಷ 30ನೇ ರಾಜ್ಯಮಟ್ಟದ ಭಜನಾ ಮತ್ತು ಏಕತಾರಿ ಸ್ಪರ್ಧೆ ಏರ್ಪಡಿಸಲಾಗಿದೆ. ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಸುಮಾರು 750ಕ್ಕೂ ಹೆಚ್ಚು ಪುರುಷ, ಮಹಿಳಾ, ಮಕ್ಕಳ ತಂಡಗಳು ಭಾಗವಹಿಸಲಿದ್ದು, ಪ್ರತಿ ವಿಭಾಗಕ್ಕೂ ಪ್ರತ್ಯೇಕ ಬಹುಮಾನ ನೀಡಲಾಗುತ್ತದೆ ಎಂದರು.



ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ದಾಸೋಹ ಭವನದ ಉಗ್ರಾಣಕ್ಕೆ ಶನಿವಾರ ಪೂಜೆ ಸಲ್ಲಿಸಿದರು. ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಇನ್ನಿತರರು ಉಪಸ್ಥಿತರಿದ್ದರು.

ಅತ್ಯಾಕರ್ಷಕ ವಸ್ತುಪ್ರದರ್ಶನ: ಜಾತ್ರೆಯ ಪ್ರಮುಖ ಆಕರ್ಷಣೆಯಾದ ವಸ್ತು ಪ್ರದರ್ಶನದಲ್ಲಿ ಕೈಗಾರಿಕೋತ್ಪನ್ನಗಳು, ಕೈಮಗ್ಗ, ಜವಳಿ, ಕರಕುಶಲ ಉತ್ಪನ್ನಗಳು, ಗ್ರಾಮೀಣ ಉತ್ಪನ್ನಗಳು, ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ತಯಾರಿಸಿದ ಗೃಹ ಬಳಕೆ ಉತ್ಪನ್ನಗಳು ಹಾಗೂ ಗುಡಿ ಕೈಗಾರಿಕೆ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ಜೆಎಸ್‌ಎಸ್ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು ಸಿದ್ಧಪಡಿಸಿರುವ 200ಕ್ಕೂ ಹೆಚ್ಚು ಶಿಕ್ಷಣ ● 9ನೇ ಪುಟಕ್ಕೆ

'ತಣ್ಣೀರ'ನ್ನು ಜೀವಂತವಾಗೇನೊ ಸೆರೆ ಹಿಡಿದರು: ಆದರೆ, ಬಂಡೀಪುರಕ್ಕೆ ಅದರ ಕಳೇಬರ ತಂದರು!!

● ಸ್ಥಳಾಂತರದ ವೇಳೆ ಮಾರ್ಗದಲ್ಲೇ ಕೊನೆಯುಸಿರೆಳೆದ ಆನೆ ● ಆಘಾತದಿಂದ ಆನೆ ಸಾವು ● ಕಾರ್ಯಾಚರಣೆ ವೇಳೆ ಸುರಕ್ಷಿತ ಕ್ರಮ ಕೈಗೊಳ್ಳದಿರುವುದಕ್ಕೆ ಆಕ್ರೋಶ ● ರಾಂಪುರ ಕ್ಯಾಂಪ್‌ನಲ್ಲಿ ಕರ್ನಾಟಕ–ಕೇರಳ ಅಧಿಕಾರಿಗಳ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ



ಮೈಸೂರು, ಫೆ.3(ಎಂಟಿವೈ)– ಕೇರಳದ ವೈಯ್ನಾಡು ಜಿಲ್ಲೆಯ ಮಾನಂದವಾಡಿಯಲ್ಲಿ ಜೀವಂತ ಸೆರೆ ಹಿಡಿದು, ಬಂಡೀಪುರಕ್ಕೆ ಸಾಗಿಸುವಾಗ ಕಾಡಾನೆ 'ತಣ್ಣೀರು' ಮಾರ್ಗಮಧ್ಯದಲ್ಲಿಯೇ ಕೊನೆಯುಸಿರೆಳೆದಿದೆ. ಕೇರಳದ ಅರಣ್ಯ ಇಲಾಖೆ ಅಧಿಕಾರಿಗಳು ಆನೆಯ ಕಳೇಬರವನ್ನು ರಾಂಪುರ ಕ್ಯಾಂಪ್‌ಗೆ ತಂದಿಳಿಸಿದರು. ಜನಸ್ನೇಹಿಯಾಗಿದ್ದ 30–35 ವರ್ಷದ ಕಾಡಾನೆ ಹಾಸನ ಜಿಲ್ಲೆಯ ಬೇಲೂರು ಸುತ್ತಮುತ್ತಲಿನ ಕಾಡಂಚಿನ ಗ್ರಾಮಗಳಲ್ಲಿ ನೆಲೆ ಕಂಡುಕೊಂಡಿತ್ತು. ಗ್ರಾಮಸ್ಥರ ದೂರಿನ ಹಿನ್ನೆಲೆಯಲ್ಲಿ ಜ.16 ರಂದು ಕರ್ನಾಟಕ ಅರಣ್ಯ ಇಲಾಖೆ ಇದನ್ನು ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲೆಹೊಳೆ ವಲಯದಲ್ಲಿ ಬಿಡುಗಡೆ ಮಾಡಲಾಗಿತ್ತು. ಫೆ.1ರಂದು ಕೇರಳದ ಮಾನಂದವಾಡಿ ಪ್ರವೇಶಿಸಿದ್ದ ತಣ್ಣೀರು ಆನೆ, ಫೆ.2ರಂದು ಮಾನಂದವಾಡಿ ತಾಲೂಕು ಕಚೇರಿ, ಪೊಲೀಸ್ ಠಾಣಾ ಆವರಣ ಸೇರಿದಂತೆ ಇನ್ನಿತರ ಪ್ರದೇಶದಲ್ಲಿ ಅಡ್ಡಾಡುತ್ತಿದ್ದರಿಂದ ಸೆರೆ ಹಿಡಿಯಲು ನಿರ್ಧರಿಸಿ, ಸಂಜೆ.5.30ಕ್ಕೆ ಅರವಳಿಕೆ ಚುಚ್ಚುಮದ್ದು ನೀಡಲಾಗಿತ್ತು. ರಾತ್ರಿ 10.30ಕ್ಕೆ ತಣ್ಣೀರು ಆನೆಯನ್ನು ಸೆರೆ ಹಿಡಿದ ಬಳಿಕ ● 6ನೇ ಪುಟಕ್ಕೆ

ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾದರೆ ಮನು ಯುಗಕ್ಕೆ ವಾಪಸ್ಸಾಗಬೇಕಾಗುತ್ತೆ

ಮಾಜಿ ಸಚಿವೆ ಬಿ.ಟಿ.ಲಲಿತಾನಾಯಕ್ ಎಚ್ಚರಿಕೆ

ಮೈಸೂರು, ಫೆ.3(ಬಿಎಲ್‌ಯು)– ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಮಂತ್ರಿಯಾದರೆ ಮನು ಯುಗಕ್ಕೆ ಮರಳಬೇಕಾಗುತ್ತದೆ ಎಂದು ಬಿ.ಟಿ.ಲಲಿತಾನಾಯಕ್ ಎಚ್ಚರಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಜಾಗೃತ ಕರ್ನಾಟಕ ಆಯೋಜಿಸಿದ್ದ 'ಕುವೆಂಪು ಕ್ರಾಂತಿ ಕಹಳೆ–50' ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಸಂದೇಶ ವಾಚನದ ಮೂಲಕ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿದರು.

ಅಯೋಧ್ಯೆಯಲ್ಲಿ ಶ್ರೀರಾಮನ ಪಟ್ಟಾಭಿಷೇಕದ ನಂತರ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನ ಮಂತ್ರಿಯಾಗಿ ಪಟ್ಟಾಭಿಷೇಕ ನಡೆಯಲಿದೆ ಎಂದು ವಿನಯ್ ಗುರೂಜಿ ಭವಿಷ್ಯ ನುಡಿದಿದ್ದಾರೆ ಎಂದರು.

ಪಟ್ಟಾಭಿಷೇಕ ಎಂಬುದು ರಾಜ ಪ್ರಭುತ್ವದ ಪರಿಕಲ್ಪನೆ. ಇದು ಸಾಕಾರಗೊಂಡರೆ ಮನು ಯುಗಕ್ಕೆ ನಾವು ವಾಪಸ್ಸಾಗಬೇಕಾಗುತ್ತದೆ ಎಂದು ಹೇಳಿದರು.

ಕುವೆಂಪು ಅವರು ಕನ್ನಡ ಹಾಗೂ ಇಂಗ್ಲಿಷ್ ಭಾಷಾ ಸಾಹಿತ್ಯ ಕೃಷಿ ಮಾಡಿ ಪ್ರತಿಯೊಂದು ವಿಚಾರಗಳನ್ನು ಅರಿತುಕೊಂಡಿದ್ದರು. ಮೌಢ್ಯತೆ ವಿರುದ್ಧ ಹಲವು ಬರಹಗಳನ್ನು ಬರೆದಿದ್ದರು. ಇದನ್ನು ಯಾರೇ ಪ್ರಶ್ನಿಸಿದ್ದರೂ ಅದಕ್ಕೆ ತಕ್ಕದಾದ ಉತ್ತರ ಕೊಡುವ ಪ್ರೌಢಿಮೆ ಹಾಗೂ ಪಾಂಡಿತ್ಯ ಕುವೆಂಪು ಅವರಲ್ಲಿ ಮೇಳೈಸಿತ್ತು ಎಂದು ಲಲಿತಾನಾಯಕ್ ತಿಳಿಸಿದರು.

ಮೌಢ್ಯತೆ ಬಿತ್ತುವವರು ಎಂದೂ ಬದಲಾಗುವುದಿಲ್ಲ. ಅವರ ವಿಚಾರಧಾರೆಗಳು ಹಾಗೂ ತಂತ್ರ, ಮಂತ್ರಗಳು ಎಂದೆಂದೂ ಕೆಳಮಟ್ಟದಲ್ಲೆ ಇರುತ್ತವೆ. ಇದರ ವಿರುದ್ಧ ಅಕ್ಷರ ರೂಪದಲ್ಲಿ ಸಮರ ಸಾರಿದ ಕುವೆಂಪು ಅವರ ಬರಹಗಳು ಸಂವಿಧಾನದ ಮತ್ತೊಂದು ರೂಪ ಎಂದು ಅಭಿಪ್ರಾಯಪಟ್ಟರು.

ಮಂಡ್ಯದ ಕೆರಗೋಡಿನಲ್ಲಿ ರಾಷ್ಟ್ರಧ್ವಜ ಹಾರಿಸುವ ಬದಲು ಧರ್ಮ ಧ್ವಜ ಹಾರಿಸಿದರು. ಕುವೆಂಪು ಹಾಗೂ ಅಂಬೇಡ್ಕರ್ ಅವರ ಬರಹಗಳನ್ನು ಓದಿದವರು ಇಂತಹ ದಡ್ಡತನಕ್ಕೆ ಕೈ ಹಾಕುವುದಿಲ್ಲ. ದೇವರು ಹಾಗೂ ಧರ್ಮದ ವಿಚಾರಗಳನ್ನು ವಿನಾಕಾರಣ ಎಳೆದು ತರುತ್ತಿರಲಿಲ್ಲ ಎಂದು ಲಲಿತಾನಾಯಕ್ ಹೇಳಿದರು.

ಇಂತಹ ಬೆಳವಣಿಗೆಗಳಲ್ಲಿ ಸರಿ–ತಪ್ಪು ಯಾವುದೆಂದು ವಿಚಾರ ಮಾಡುವ ಶಕ್ತಿ ಕಳೆದುಕೊಂಡಿದ್ದೇವೆ ಎಂದರ್ಥ. ಸಜ್ಜನಿಕೆ ರಾಜಕಾರಣ ದೂರವಾಗಿದೆ ಎಂದರ್ಥ. ಗುಲಾಮಗಿರಿಗೆ ಹೊಂದಿಕೊಳ್ಳುತ್ತಿದ್ದೇವೇನೊ ಎಂದರ್ಥ ಎಂದು ಹೇಳಿದರು.



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಶನಿವಾರ ಜಾಗೃತ ಕರ್ನಾಟಕ ಆಯೋಜಿಸಿದ್ದ ಕುವೆಂಪು ಕ್ರಾಂತಿ ಕಹಳೆ–50 ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಬಿ.ಟಿ.ಲಲಿತಾನಾಯಕ್ ರಾಷ್ಟ್ರಕವಿ ಕುವೆಂಪು ಅವರ ಸಂದೇಶ ವಾಚನ ಮಾಡುವ ವಿಚಾರ ಸಂಕಿರಣ ಉದ್ಘಾಟಿಸಿದರು.

"ಕಾಲ ಬದಲಾಗಿದ್ದು, ಬದುಕು ಬದಲಾವಣೆಯ ಹಾದಿಯಲ್ಲಿದೆ. ಆದರೂ ಇನ್ನು ಕೂಡ ಮೌಢ್ಯತೆಯ ಬೀಜ ಹಲವೆಡೆ ಮೊಳಕೆಯೊಡೆಯುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ನಾವು ಕುವೆಂಪು ಹಾಗೂ ಅವರ ವಿಚಾರಧಾರೆಗಳನ್ನು ಮರೆತಿದ್ದೇವೆ ಅನಿಸುತ್ತದೆ. –ಬಿ.ಟಿ.ಲಲಿತಾನಾಯಕ್

ಹೆಚ್‌ಡಿಕೆಗೆ ದೇವೇಗೌಡರು ಬುದ್ಧಿವಾದ ಹೇಳಬೇಕಿತ್ತು: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಜಾತ್ಯಾತೀತ ನಿಲುವು ಹೊಂದಿದ್ದ ಹಿರಿಯ ರಾಜಕಾರಣಿ. ಆದರೆ ಮಂಡ್ಯದಲ್ಲಿ ನಡೆದ ಧ್ವಜ ವಿವಾದದ ಸಂದರ್ಭದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಕೇಸರಿ ಶಾಲು ಹಾಕಿಕೊಂಡಾಗ ಮಗನಿಗೆ ಖಡಕ್ ಆಗಿ ಬುದ್ಧಿವಾದ ಹೇಳಬೇಕಿತ್ತು ಎಂದು ಲಲಿತಾನಾಯಕ್ ಹೇಳಿದರು.

ಕುವೆಂಪು ಅವರ ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ ಮತ್ತು ವಿಚಾರ ಕ್ರಾಂತಿಗೆ ಆಹ್ವಾನ, ಕುವೆಂಪು ಅವರ ಭಾಷಣಗಳಿಗೆ 50 ವರ್ಷ ತುಂಬುತ್ತಿರುವ ನೆನಪಿನಲ್ಲಿ ಹಲವು ವಿಚಾರಗಳನ್ನು ಈ ವೇಳೆ ಮಂಡಿಸಲಾಯಿತು. ಕೆ.ವಿ.ನಾರಾಯಣ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಎಲ್.ಎನ್.ಮುಕುಂದರಾಜ್ ಕುವೆಂಪುರವರ ಎರಡು ಮಹತ್ವದ ಭಾಷಣಗಳ ಸಮಕಾಲೀನ ಆಶಯ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಪ್ರಸನ್ನ ಗೌಡ, ಜವರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

'ನಂದಿನಿ ಪಾಕ ಸ್ಪರ್ಧೆ'ಯಲ್ಲಿ ಬಾಯಲ್ಲಿ ನೀರೂರಿಸಿದ ಪನ್ನೀರ್, ಖೋವಾ ತಿನಿಸುಗಳು


'ನಂದಿನಿ ಪಾಕ ಸ್ಪರ್ಧೆ'ಯಲ್ಲಿ ಪ್ರಥಮ ಬಹುಮಾನಗಳಿಸಿದ ದೀಪಾ ಅವರಿಗೆ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಪಿ.ಎಂ.ಪ್ರಸನ್ನ ಬಹುಮಾನ ವಿತರಿಸಿದರು.

ಮೈಸೂರು,ಫೆ3(ಜಿಎ)–ನಂದಿನಿ ಪನ್ನೀರ್ ಮತ್ತು ಖೋವಾ ಬಳಸಿ ಮಹಿಳೆಯರು ಮಾಡಿದ ಬಗೆ ಬಗೆಯ ತಿನಿಸುಗಳು ಬಾಯಲ್ಲಿ ನೀರೂರುವಂತೆ ಮಾಡಿತು.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಿಂದ ಮೈಸೂರಿನ ಮಲೈಮಹದೇಶ್ವರ ರಸ್ತೆಯಲ್ಲಿರುವ ಮೆಗಾ ಡೈರಿಯಲ್ಲಿ ನಂದಿನಿ ಪನ್ನೀರ್ ಮತ್ತು ಖೋವಾ ಬಗ್ಗೆ ಅರಿವು ಮೂಡಿಸಲು ಶನಿವಾರ ಆಯೋಜಿಸಿದ್ದ 'ನಂದಿನಿ ಪಾಕ ಸ್ಪರ್ಧೆ' ಯಲ್ಲಿ ಸ್ಪರ್ಧಿಗಳು ನಂದಿನಿ ಪನ್ನೀರ್ ಮತ್ತು ಖೋವಾ ಬಳಸಿಕೊಂಡು ವಿವಿಧ ಖಾದ್ಯವನ್ನು ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

'ನಂದಿನಿ ಪಾಕ ಸ್ಪರ್ಧೆ'ಯಲ್ಲಿ ಮೈಸೂರಿನ ವಿವಿಧ ಬಡಾವಣೆ ಮತ್ತು ಕ್ಲಬ್‌ಗಳಿಂದ 30 ಮಹಿಳೆಯರು ಭಾಗವಹಿಸಿದ್ದರು. ಸ್ಪರ್ಧೆಗೆ ಅವಶ್ಯವಿರುವ ಅಡುಗೆ ಸಾಮಗ್ರಿ, ಗ್ಯಾಸ್ ಸ್ಟೌವ್, ಮಿಕ್ಸಿ ಹಾಗೂ ಖೋವಾ, ಪನ್ನಿರನ್ನು ನೀಡಲಾಗಿತು. ಸ್ಪರ್ಧಾಳುಗಳು ಮನೆಯಿಂದ ತಂದ ಸ್ವಂತ ಪಾತ್ರೆಗಳನ್ನು ಬಳಸಿಕೊಂಡು ಕೇವಲ 45 ನಿಮಿಷದ ಅವಧಿಯಲ್ಲಿ ಪನ್ನೀರ್ ಬಳಸಿಕೊಂಡು ಪನ್ನಿರ್ ಬುರ್ಜಿ, ಹನಿ ಚಿಲ್ಲಿ ಪನ್ನೀರ್, ಪನ್ನೀರ್ ಕಟ್ಲೇಟ್ ಮತ್ತು ಖೋವಾದಿಂದ ಮೀಠಾ ಬಾತ್, ಖೋವಾ ಬನಾನ ಡಿಲೈಟ್, ಖೋವಾ ಪೈನಾಪಲ್ ಫೈರ್ ಸೇರಿದಂತೆ ಬಗೆ ಬಗೆಯ ತಿನಿಸುಗಳನ್ನು ತಯಾರಿಸಿದರು.

ಸ್ಪರ್ಧೆಯಲ್ಲಿ ಮೈಸೂರಿನ ಮಾನಸಿನಗರದ ದೀಪಾ ಪ್ರಥಮ, ಕುವೆಂಪುನಗರದ ಉಮಾ ವಿವೇಕ್ ದ್ವಿತೀಯ ಮತ್ತು ತೃತೀಯ ಬಹುಮಾನವನ್ನು ನಿವೇದಿತನಗರದ ಚಾಂದಿನಿ ವಿಜಯ್ ಕುಮಾರ್ ಪಡೆದುಕೊಂಡರು. ಐವರು ಮಹಿಳೆಯರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ವಿಜೇತರಿಗೆ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಪಿ.ಎಂ.ಪ್ರಸನ್ನ ಅವರು ನಗದು ಬಹುಮಾನ ನೀಡಿ, ಅಭಿನಂದಿಸಿದರು.

ಯುವತಿಯ ಪ್ರೀತಿಸಿ ವಂಚಿಸಿದ ಖಾಸಗಿ ಹೋಟೆಲ್ ಮಾಲೀಕನ ಪುತ್ರನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಖಾಸಗಿ ಹೋಟೆಲ್ ಮಾಲೀಕನ ಪುತ್ರನಿಂದ ನೊಂದ ಯುವತಿಗೆ ನ್ಯಾಯ ಒದಗಿಸುವಂತೆ ಕರ್ನಾಟಕ ಭೀಮ್ ಸೇನೆಯು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಶನಿವಾರ ಪ್ರತಿಭಟನೆ ನಡೆಸಿತು.

ಮೈಸೂರು, ಫೆ.3(ಜಿಎ)–ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಎಟ್ರಿಯಂ ಹೋಟೆಲ್‌ನ ಮಾಲೀಕರ ಪುತ್ರ ಪೀತಮ್ ಪುರಾಣಿಕ್‌ನಿಂದ ನೊಂದ ಯುವತಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಕರ್ನಾಟಕ ಭೀಮ್ ಸೇನೆ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.

ಈ ಹೋಟೆಲ್‌ನಲ್ಲಿ ಕ್ಯಾಶಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಯುವತಿಯನ್ನು ಆ ಹೋಟೆಲ್ ಮಾಲೀಕನ ಪುತ್ರ ಪ್ರೀತಿಸಿ ಮೋಸಮಾಡಿದ್ದು, ಜಾತಿ ಹೆಸರಿನಲ್ಲಿ ಅವಾಚ್ಯ ಶಬ್ದದಿಂದ ನಿಂದಿಸಿದ್ದು, ಈ ಸಂಬಂಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ, ಪೊಲೀಸರು ಆ ಯುವಕನನ್ನು ಈವರೆಗೂ ಬಂಧಿಸಿಲ್ಲ ಎಂದು ದೂರಿದರು.

ಆ ಯುವಕನನ್ನು ಪತ್ತೆ ಮಾಡಿ ನ್ಯಾಯ ಕೊಡಿಸಬೇಕು. ಜೊತೆಗೆ ನಿರ್ಲಕ್ಷ್ಯ ತೋರುತ್ತಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಂ.ಮಂಜುನಾಥ್, ಸರ್ವೇಶ್, ಶಿವಸ್ವಾಮಿ, ದಿನೇಶ್, ಜಯಸುಧ, ಪಾರ್ವತಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಅವೈಜ್ಞಾನಿಕ ಆದೇಶ ರದ್ದತಿಗೆ ಎಂಎಲ್‌ಸಿ ಮರಿತಿಬ್ಬೇಗೌಡ ಆಗ್ರಹ


ಮರಿತಿಬ್ಬೇಗೌಡ

ಮೈಸೂರು, ಫೆ.3 (ಬಿಎಲ್‌ಯು)– ಕಾಂಯಂಗೊಂಡ ಗುತ್ತಿಗೆ ಆಧಾರದ ಶಿಕ್ಷಕ, ಉಪನ್ಯಾಸಕರ ವೇತನ ಮತ್ತು ಪಿಂಚಣಿ ಪುನರ್ ನಿಗದಿಪಡಿಸಲು ರಾಜ್ಯ ಸರ್ಕಾರ ಹೊರಡಿಸಿರುವ ಅವೈಜ್ಞಾನಿಕ ಆದೇಶ ರದ್ದು ಮಾಡುವಂತೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.


ಮೈಸೂರಿನ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಆದೇಶದಿಂದ ಕಾಂಯಂಗೊಂಡ ಗುತ್ತಿಗೆ ಆಧಾರದ ಶಿಕ್ಷಕ, ಉಪನ್ಯಾಸಕರಿಗೆ ಅನ್ಯಾಯವಾಗಲಿದೆ ಎಂದರು.

ಖಾಯಂಗೊಂಡ ಗುತ್ತಿಗೆ ಶಿಕ್ಷಕ, ಉಪನ್ಯಾಸಕರ ವೇತನ ಮತ್ತು ನಿವೃತ್ತಿ ವೇತನ ಪುನರ್ ನಿಗದಿ ಮಾಡುವ ಸಂಬಂಧ ಅಂದಿನ ವಿಧಾನಪರಿಷತ್ ಸದಸ್ಯ ಕೆ.ಟಿ. ಶ್ರೀಕಂಠೇಗೌಡರ ನೇತೃತ್ವದಲ್ಲಿ ಸರ್ಕಾರ ರಚನೆ ಮಾಡಿದ್ದ ಸಮಿತಿ ವರದಿ ನೀಡಿತ್ತು. ಆದರೆ ಸಚಿವ ಸಂಪುಟದ ಮುಂದೆ ವಿಚಾರ ಮಂಡಿಸದೆ ವೇತನ ಮತ್ತು ಪಿಂಚಣಿ ಪುನರ್ ನಿಗದಿ ಮಾಡಲು ಅಧಿಕಾರಿಗಳು ಅವೈಜ್ಞಾನಿಕ ಆದೇಶ ಹೊರಡಿಸಿದ್ದಾರೆ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ಅವೈಜ್ಞಾನಿಕವಾದ ಆದೇಶವನ್ನು ಸರ್ಕಾರ ಕೂಡಲೇ ರದ್ದು ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಸರ್ಕಾರವನ್ನು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಖಾಯಂಗೊಂಡ ಗುತ್ತಿಗೆ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜಿನ ಶಿಕ್ಷಕರು, ಮುಖ್ಯೋಪಾಧ್ಯಾಯರು, ಉಪನ್ಯಾಸಕರು, ಪ್ರಾಂಶುಪಾಲರು ನಿವೃತ್ತದಾರರ ಒಕ್ಕೂಟದ ಸಂಚಾಲಕರಾದ ಆರ್.ಗೋವಿಂದ, ಲಿಂಗರಾಜು ತೂಬಿನಕೆರೆ, ನಾಗಮಲ್ಲಪ್ಪ, ಶ್ರೀನಿವಾಸ ಮತ್ತು ಎಸ್.ಚಿದಂಬರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಾಜಿ ಶಾಸಕ ಎಚ್.ಪಿ.ಮಂಜುನಾಥ್‌ಗೆ ವಿಧಾನಪರಿಷತ್ ಸದಸ್ಯ ಸ್ಥಾನ ನೀಡಲು ಮನವಿ


ಸುದ್ದಿಗೋಷ್ಠಿಯಲ್ಲಿ ಒಕ್ಕಲಿಗ ಮುಖಂಡ ದೇವರಾಜ್ ಮಾತನಾಡಿದರು.

ಮೈಸೂರು,ಫೆ.3(ಜಿಎ)–ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಂದ ತೆರವಾದ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರನ್ನು ಆಯ್ಕೆ ಮಾಡಬೇಕು ಎಂದು ಹುಣಸೂರು ತಾಲೂಕಿನ ಒಕ್ಕಲಿಗ ಮುಖಂಡ ದೇವರಾಜ್ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರಾಗಿದ್ದ ಮಂಜುನಾಥ್ ಅವರು ಹುಣಸೂರು ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಅಲ್ಲದೆ, ಕೆಲವೇ ಓಟುಗಳ ಅಂತರದಲ್ಲಿ ಪರಾಜಿತರಾದ ಅವರಿಗೆ ಪರಿಷತ್ ಸದಸ್ಯತ್ವ ನೀಡಿ ಸೂಕ್ತ ಸ್ಥಾನಮಾನ ಒದಗಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಬಗ್ಗೆ ಚಿಂತಿಸಿ, ತಾಲೂಕಿನ ಅಭಿವೃದ್ಧಿಗೆ ಸಹಕರಿಸಬೇಕು ಎಂದರು. ಗೋಷ್ಠಿಯಲ್ಲಿ ಒಕ್ಕಲಿಗ ಸಮುದಾಯದ ಮುಖಂಡರಾದ ರಾಜು ಶಿವರಾಜೇಗೌಡ, ಸುನೀತಾ ಜಯಮ್ಮ, ಸುರೇಶ್, ಮಹೇಶ್, ಬಾಬು ಇದ್ದರು.

ರೈತರ ಸಂಪೂರ್ಣ ಸಾಲ ಮನ್ನಾಗೆ ಆಗ್ರಹ

ನಾಳೆ ಮೈಸೂರು ಡಿಸಿ ಕಚೇರಿ ಮುಂದೆ ಪ್ರತಿಭಟನೆ

"ಬರಗಾಲದಿಂದ ತತ್ತರಿಸಿರುವ ರೈತರು ಆರ್ಥಿಕ ಸಂಕಷ್ಟದಲ್ಲಿರುವ ಕಾರಣ ತೆಲಂಗಾಣ ಹಾಗೂ ಪಂಜಾಬ್ ಮಾದರಿಯಲ್ಲಿ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು. ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ 6,040 ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ 2,500 ಕೋಟಿ ಬೆಳೆ ಸಾಲ ಮನ್ನಾ ಮಾಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಿಸಬೇಕು. –ಹಳ್ಳಿಕೆರೆಹುಂಡಿ ಭಾಗ್ಯರಾಜ್.

ಮೈಸೂರು, ಫೆ.3(ಬಿಎಲ್‌ಯು)– ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ರೈತರ ಸಂಪೂರ್ಣ ಸಾಲ ಮನ್ನಾ ಘೋಷಣೆ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆಬ್ರವರಿ 5 ಸೋಮವಾರದಂದು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.


ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಮೈಸೂರಿನ ಸಿದ್ಧಾರ್ಥ ನಗರದ ಹೊಸ ಜಿಲ್ಲಾಧಿಕಾರಿ ಕಚೇರಿ ಮುಂದೆ ಅಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಪ್ರತಿಭಟನೆಯಲ್ಲಿ ನೂರಾರು ರೈತರು ಭಾಗಿಯಾಗಲಿದ್ದಾರೆ ಎಂದರು.

ಪ್ರತಿ ಟನ್ ಕಬ್ಬಿಗೆ 150 ರೂಪಾಯಿ ಹೆಚ್ಚುವರಿ ದರ ನೀಡುವುದಾಗಿ ಸರ್ಕಾರದ ಸಮಕ್ಷಮ ಸಕ್ಕರೆ ಕಾರ್ಖಾನೆಗಳು ಒಪ್ಪಿಕೊಂಡಿವೆ. ಆದರೆ ಈ ತನಕ ರಾಜ್ಯಾದ್ಯಂತ ರೈತರಿಗೆ ನೀಡಬೇಕಾದ 950 ಕೋಟಿ ರೂಪಾಯಿ ನೀಡದೆ ಮೀನಾಮೇಷ ಎಣಿಸುತ್ತಿದ್ದು, ಈ ಹಣ ಕೊಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಭಾಗ್ಯರಾಜ್ ಒತ್ತಾಯಿಸಿದರು.

ಸಕ್ಕರೆ ಕಾರ್ಖಾನೆಗಳಲ್ಲಿ ತೂಕದಲ್ಲಿ ಮೋಸವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ಸಮಿತಿ ಮಾಡಿದ್ದು, ಈ ಸಮಿತಿಗೆ ಸ್ಥಳೀಯ ರೈತ ಪ್ರತಿನಿಧಿಗಳನ್ನು ನಿಯೋಜಿಸಬೇಕು. ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಈರುಳ್ಳಿ ಬೆಳೆಗಾರರು ಈರುಳ್ಳಿ ಮಾರಾಟಕ್ಕೆ ತಮಿಳುನಾಡಿಗೆ ಹೋಗಬೇಕಿರುವ ಕಾರಣ ಮೈಸೂರಿನಲ್ಲಿ ಈರುಳ್ಳಿ ಖರೀದಿ ಕೇಂದ್ರ ಸ್ಥಾಪನೆ ಮಾಡುವಂತೆ ಮನವಿ ಮಾಡಿದರು. ಕೆಆರ್‌ಎಸ್, ಕಬಿನಿ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳಿಂದ ತಮಿಳುನಾಡಿಗೆ ನೀರು ಹರಿಸಿರುವ ಕಾರಣ ಬರಗಾಲ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಬೆಳೆ ನಷ್ಟ ಹೊಂದಿರುವ ರೈತರಿಗೆ ಎಕರೆಗೆ 25 ಸಾವಿರ ಪರಿಹಾರ ನೀಡುವಂತೆ ಭಾಗ್ಯರಾಜ್ ಸರ್ಕಾರವನ್ನು ಆಗ್ರಹಿಸಿದರು. ಸಂಘದ ಮುಖಂಡರಾದ ಮೂಡ್ಲುಪುರ ನಾಗರಾಜ್, ಆಲತ್ತೂರು ಸಿದ್ದಲಿಂಗಪ್ಪ, ಅತ್ತಹಳ್ಳಿ ಸ್ವಾಮಿರಾಜ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


2024 ಸೀಸನ್ 10ರ ಬಿಗ್ ಬಾಸ್ ವಿನ್ನರ್ ಮೈಸೂರಿನ ಕಾರ್ತಿಕ್ ಮಹೇಶ್ ಅವರನ್ನು ಮೈಸೂರಿನ ನಿವೇದಿತಾನಗರ ಪಾರ್ಕ್‌ನಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ಅಭಿನಂದಿಸಿದರು. ಚಿತ್ರದಲ್ಲಿ ಹರೀಶ್, ಬೀರೇಶ್, ಸತ್ಯಾನಂದ ವಿಟ್ಟು, ಲೋಹಿತ್ ಶಮಿ, ಸಂದೀಪ್‌ಜೈನ್, ನಾರಾಯಣ್ ಇತರರಿದ್ದಾರೆ.

ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾಗಿ ನೇಮಕ


ಹೆಚ್.ಜಿ.ಗಿರಿಧರ


ಎಸ್.ಎಸ್.ಮಹೇಶ್


ಬಿ.ಎಂ.ರಾಘವೇಂದ್ರ


ಮೈಸೂರು,ಫೆ.3(ಪಿಎಂ)– ಮೈಸೂರು ನಗರದ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾಗಿ ಹೆಚ್.ಜಿ.ಗಿರಿಧರ, ಎಸ್.ಎಸ್.ಮಹೇಶ್ (ಕೇಬಲ್) ಮತ್ತು ಬಿ.ಎಂ. ರಾಘವೇಂದ್ರ (ಬಿ.ಎಂ.ರಘು) ಅವರನ್ನು ನಿಯೋಜಿಸಲಾಗಿದೆ. ಪಕ್ಷದ ರಾಜ್ಯಾಧ್ಯಕ್ಷರ ಸೂಚನೆ ಮೇರೆಗೆ ಈ ನಿಯೋಜನೆ ಮಾಡಲಾಗಿದೆ ಎಂದು ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಪ್ರಥಮ ದರ್ಜೆ ಗುಮಾಸ್ತರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀಮತಿ ವಿ.ಗಾಯತ್ರಿ ಅವರನ್ನು ಸನ್ಮಾನಿಸಿ, ಆತ್ಮೀಯವಾಗಿ ಬೀಳ್ಕೊಡಲಾಯಿತು. ಸಂಸ್ಥೆಯ ಅಧ್ಯಕ್ಷ ಎನ್.ಶ್ರೀನಿವಾಸ, ಉಪಾಧ್ಯಕ್ಷ ಕೆ.ಜಿ.ಶಂಕರ ನಾರಾಯಣ ಶಾಸ್ತ್ರಿ, ಕಾರ್ಯದರ್ಶಿ ಬಿ.ಎಸ್.ಶ್ರೀನಾಥ್, ನಿರ್ದೇಶಕರಾದ ಬಿ.ನಾಗರಾಜು, ವಿ.ಪ್ರಕಾಶ್, ಶ್ರೀಮತಿ ಬಿ.ಕೆ.ಸೀತಾಲಕ್ಷ್ಮಿ ಮತ್ತಿತರರು ಹಾಜರಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ಕಾರ್ಯಾಗಾರ

ಮೈಸೂರು, ಫೆ.3(ಬಿಎಲ್‌ಯು)– ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತಂತೆ ಉಚಿತ ಕಾರ್ಯಾಗಾರ ಹಾಗೂ ಅರಿವು ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಮಂಗಳೂರು ನೀಟ್ ಅಕಾಡೆಮಿ ವ್ಯವಸ್ಥಾಪಕ ನಿರ್ದೇಶಕ ಪಟೇಲ್ ಎಸ್.ರಮೇಶ್ ಗೌಡ ತಿಳಿಸಿದ್ದಾರೆ. ಮೈಸೂರಿನ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಕಾರ್ಯಾಗಾರ ಆಯೋಜಿಸುವ ಬಗ್ಗೆ ಶೀಘ್ರವೇ ದಿನಾಂಕ ಪ್ರಕಟಿಸಲಾಗುವುದು ಎಂದರು. ಎನ್‌ಇಇಟಿ, ಕೆಸಿಇಟಿ, ಜೆಇಇ (ಐಐಟಿ) ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗಿಯಾಗುವವರು ಈ ಕಾರ್ಯಾಗಾರದ ಪ್ರಯೋಜನ ಪಡೆಯಬಹುದು ಸಲಹೆ ನೀಡಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ರೇವಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.2.2024 ಭಾನುವಾರ, ಮಳೆ ನಕ್ಷತ್ರ: ಶ್ರವಣ 24.1.2024ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ,
ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಪರಂಪರೆ:** ಗಿರಿಜಾ ಕಲ್ಯಾಣ ಪೂಜಾ ಮಹೋತ್ಸವ, ಸ್ಥಳ: ಗಣಪತಿ ದೇವಸ್ಥಾನದ ರಜತ್ ಸಭಾಂಗಣ, ಐ ಬ್ಲಾಕ್, ರಾಮಕೃಷ್ಣನಗರ, ಬೆಳಗ್ಗೆ 8ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆ.9ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕಲಾಧಾರೆ ಕಲ್ಚರಲ್ ಟ್ರಸ್ಟ್, ಮಾಸ್ಟರ್ ಎನ್ ಬ್ಲಾಸ್ಟರ್ ಡ್ಯಾನ್ಸ್ ಗ್ರೂಪ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು) :** ಸಂಸ್ಥೆಯ 23ನೇ ವರ್ಷದ ಅಂಗವಾಗಿ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಸ್ಪರ್ಧೆ, ರಾತ್ರಿ 7 ಗಂಟೆಗೆ ಸಮಾರೋಪ ಸಮಾರಂಭ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ನೃಪತುಂಗ ಶಾಲೆ ಸಮೀಪ.

■ **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಡಿಪಾರ್ಟ್‌ಮೆಂಟ್ ಆಫ್ ಕ್ರಿಟಿಕಲ್ ಕೇರ್ ಮೆಡಿಸಿನ್:** ಜೆಎಸ್‌ಎಸ್ ಕೇರ್–2024 ಸಿಎಂಇ ಕಾರ್ಯಕ್ರಮ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆ.10.30ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್ ಹಾಗೂ ಸುಜೋಕ್ ಮತ್ತು ಅಕ್ಯೂಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಬಿ.ಕೆ.ಪಿ. ಕನ್ವೆನ್ಷನ್ ಹಾಲ್, ಬೆಳಗ್ಗೆ 10.30 ರಿಂದ.

■ **ಮೈಸೂರು ವಿವಿ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ, ಭಾರತೀಯ ರಂಗ ಶಿಕ್ಷಣ ಕೇಂದ್ರ, ರಂಗಾಯಣ, ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ :** 'ರಂಗ ಸಂಯುಕ್ತ', ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ, ಓ.ಎಲ್. ನಾಗಭೂಷಣಸ್ವಾಮಿ ಅವರಿಂದ ಸಾಹಿತ್ಯ ಕುರಿತು ಉಪನ್ಯಾಸ, ಸ್ಥಳ: ಬಿ.ವಿ.ಕಾರಂತ ರಂಗ ಚಾವಡಿ, ರಂಗಾಯಣ, ಬೆಳಗ್ಗೆ 10.30 ರಿಂದ.

■ **ಬಸವ ಸಮಿತಿ:** ಶರಣ ಶಂಗಮ, ಕನ್ನಡ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ ಅವರಿಂದ ಕಲಾವಿದ ಶರಣ ಬಹುರೂಪಿ ಚೌಡಯ್ಯ: ಕಾಯಕ–ಕೊಡುಗೆ ಕುರಿತು ಉಪನ್ಯಾಸ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಹಿನಕಲ್, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ನಗರ ಕನ್ನಡ ಸಾಹಿತ್ಯ ಪರಿಷತ್ತು:** ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ರಥಕ್ಕೆ ಚಾಲನೆ, ಚಾಲನೆ ನೀಡುವವರು: ಶಾಸಕ ಕೆ.ಹರೀಶ್‌ಗೌಡ, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಅಧ್ಯಕ್ಷತೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸ್ಥಳ: ಕುವೆಂಪುರವರ ಪ್ರತಿಮೆ ಎದುರು, ಮಾನಸಗಂಗೋತ್ರಿ, ಬೋಗಾದಿ–ಗದ್ದಿಗೆ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಕಲಾ ಕಾರಂಜಿ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಅಧ್ಯಕ್ಷತೆ: ಗುತ್ತಿಗೆದಾರ ವಿ.ಮೋಹನ್‌ಕುಮಾರ್, ಉದ್ಘಾಟನೆ: ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್, ಮುಖ್ಯ ಅತಿಥಿಗಳು: ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಭಾಗ್ಯ ಮಾದೇಶ್, ಮಾತೃಮಂಡಳಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಕಲಾಸುರುಚಿ ಶಶಿಧರ ಡೋಂಗ್ರೆ, ಸ್ಥಳ: ಮಾತೃಮಂಡಳಿ ಶಿಶು ವಿಕಾಸ ಕೇಂದ್ರ, ಗೋಕುಲಂ 3ನೇ ಹಂತ, ಸಂಜೆ 4ಕ್ಕೆ.

■ **ಶ್ರೀ ಮೌನೇಶ ಸಂಗೀತ ಮತ್ತು ಸಾಂಸ್ಕೃತಿಕ ಅಕಾಡೆಮಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ವಾರ್ಷಿಕೋತ್ಸವ, ದಿವಂಗತ ಮಡಿಕೇರಿ ನಾಗೇಂದ್ರ ಮತ್ತು ಸಿ.ಅಶ್ವಥ್ ಅವರ ಸಂಸ್ಮರಣಾ ದಿನಾಚರಣೆ ಅಂಗವಾಗಿ ಅಕಾಡೆಮಿ ವಿದ್ಯಾರ್ಥಿಗಳಿಂದ ಕೀಬೋರ್ಡ್, ಗಿಟಾರ್ ವಾದನ, ನೃತ್ಯ ಮತ್ತು ಸುಗಮ ಸಂಗೀತ ಕಾರ್ಯಕ್ರಮ, ಉಪಸ್ಥಿತರು: ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಲಯನ್ ನಾಗರಾಜಚಾರ್, ಸಾಧಕರಿಗೆ ಸನ್ಮಾನ : ಹಿರಿಯ ಗಾಯಕಿ ಶ್ರೀಮತಿ ಇಂದಿರಾಣಿ ಅನಂತರಾವ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30 ರಿಂದ.

■ **ಶ್ರೀ ನೃತ್ಯಾನಿಕೇತನ, ಭರತನಾಟ್ಯ ಮತ್ತು ಕುಚಿಪುಡಿ ನೃತ್ಯ ಶಾಲೆ :** ಕು. ಕೆ. ಶ್ರೀವಲ್ಲಿ ಅವರ ಭರತನಾಟ್ಯ ರಂಗ ಪ್ರವೇಶ, ಉಪಸ್ಥಿತರು : ನೃತ್ಯಗಿರಿ ನಿರ್ದೇಶಕರಾದ ವಿದುಷಿ ಕೃಪಾ ಫಡ್ಕೆ, ಸೃಜನ ಕಲಾಮಂದಿರದ ವಿದುಷಿ ಎಂ.ಎ. ಜ್ಯೋತಿ, ನೃತ್ಯ ನಿರ್ದೇಶಕ ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿ ರಾವ್, ವಿದುಷಿ ಪ್ರಸನ್ನಲಕ್ಷ್ಮಿ ಕಲಾದಾರ್–ನಟುವಾಂಗ, ವಿದ್ವಾನ್ ನವೀನ್ ಎಂ.ಎಸ್. ಅಂದಗಾರ್ ಅವರಿಂದ ಗಾಯನ, ವಿದ್ವಾನ್ ವಿ. ಶ್ಯಾಮ್–ಮೃದಂಗ, ವಿದ್ವಾನ್ ಕೆ.ಎಸ್. ಗಣೇಶ್ –ಕೊಳಲು, ಸ್ಥಳ: ಗಾನಭಾರತಿ ರಮಾಗೋವಿಂದ ಸಭಾಂಗಣ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಅದಮ್ಯ ರಂಗಶಾಲೆ:** ಗಾಂಧಿ ಸದ್ಭಾವನಾ ಪ್ರಶಸ್ತಿ ಹಾಗೂ ಅದಮ್ಯ ಚೇತನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮಹಾಕವಯತ್ರಿ ಡಾ.ಲತಾ ರಾಜಶೇಖರ್, ಅಧ್ಯಕ್ಷತೆ : ವಿಶ್ರಾಂತ ಉಪನಿರ್ದೇಶಕ ಮ.ಗು. ಸದಾನಂದಯ್ಯ, ಅಭಿನಂದನಾ ನುಡಿ: ಅದಮ್ಯ ರಂಗಶಾಲೆ ಕಾರ್ಯದರ್ಶಿ ಟಿ. ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು: ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎನ್. ಸಂತೋಷ್ ಕುಮಾರ್, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ :** ಶ್ರೀ ಪುರಂದರದಾಸರ ಮತ್ತು ತ್ಯಾಗರಾಜರ ಆರಾಧನೆಯ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಟಿ.ಸಿ. ಸುಭಾಷಿಣಿ, ಸಿ.ಎಸ್. ಪ್ರಜ್ಞಾ ಮತ್ತು ಎಸ್. ಶ್ರೇಯಾ ಅವರಿಂದ ಗಾಯನ, ಶ್ರೀವತ್ಸ–ಪಿಟೀಲು, ಸ್ಕಂದ ಭಾರದ್ವಾಜ್–ಮೃದಂಗ, ವಿನಾಯಕ ದೇವಸ್ಥಾನ, ವಿಜಯನಗರ 2ನೇ ಹಂತ, ಸಂಜೆ 6ರಿಂದ 8.30 ರವರೆಗೆ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ಬೆಂಗಳೂರಿನ ರಂಗದಾಸೋಹ ತಂಡದ ಕಲಾವಿದರಿಂದ 'ನೀ ಒಥೆಲೋವಾದರೆ, ನಾ ಇಯಾಗೊ' ನಾಟಕ ಪ್ರದರ್ಶನ, ನಿರ್ದೇಶನ : ಎನ್.ಸಿ. ಮಹೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ:** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ 'ಕಾಕನಕೋಟೆ' ನಾಟಕ ಪ್ರದರ್ಶನ, ನಿರ್ದೇಶನ: ಎಸ್. ರಾಮನಾಥ, ಸ್ಥಳ: ವನರಂಗ ಬಯಲು ರಂಗಮಂದಿರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ–ಸೈಬರ್ ಸುರಕ್ಷೆ:ವಾರದ ಮಾತು, ಪ್ರಸ್ತುತಿ–ಸತೀಶ್ ವಿ.ಪ್ರಾಯೋಜಕರು cybermitra.in ಮೈಸೂರು, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಸಂಗಮೇಶ ಸವದತ್ತಿಮಠ್, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–"ಡಯಾಬಿಟಿಸ್ ಚಿಕಿತ್ಸೆ ಮತ್ತು ನಿರ್ವಹಣೆಯಲ್ಲಿ ಉಪಯೋಗಿಸಲಾಗುವ ವಿವಿಧ ವಿದ್ಯುನ್ಮಾನ ಉಪಕರಣಗಳು ಕುರಿತು ಡಾ. ಲಕ್ಷ್ಮೀನಾಗೇಂದ್ರ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಪಾಲಹಳ್ಳೀ ಶ್ರೀಶಾರದ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಬಾಂಬೆ ಸಹೋದರಿಯರು, 12.45ಜನಪದ ಸಂಗೀತ–ಕೆರೆತೊಣ್ಣೂರು ಗ್ರಾಮದ ಸ್ವಾಮಿಗೌಡ ಮತ್ತು ಸಂಗಡಿಗರು, 1.20 ಭಾವಗೀತೆ–ಎನ್.ಶ್ರೀನಾಥ್, 4.00 ಯಕ್ಷಗಾನ ತಾಳ ಮದ್ದಲೆ –ಸಂಪೂರ್ಣ ಮಹಾಭಾರತ ಸರಣಿ, ಪ್ರಸಂಗ–ಕಟಿಲೋಪಾಯ, ಪ್ರಸ್ತುತಿ–ಐಲಾ, ಉಪ್ಪುಳದ ಶ್ರೀ ದುರ್ಗಾ ಪರಮೇಶ್ವರಿ ಯಕ್ಷಗಾನ ಕಲಾ ಸಂಘದ ಕಲಾವಿದರು, 6.50 ಕೃಷಿರಂಗ–ಕರುಗಳ ಸಾಕಾಣಿಕೆ ಕುರಿತು ಡಾ.ವೈ.ಡಿ.ರಾಜಣ್ಣ ಅವರೊಂದಿಗೆ ಸಂದರ್ಶನ, 8.00 "ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ"–ಶಿಲ್ಪಿ ಮೈಸೂರಿನ ಅರುಣ್ ಯೋಗಿರಾಜ್ ಅವರೊಡನೆ ಸಂವಾದ, ಬಾನುಲಿ ಸರಣಿ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಸುಪ್ರಿಯೋ ಮೈತ್ರೋ–ದ್ರುಪದ್ ದಮಾರ್

ಅವೈಜ್ಞಾನಿಕ ಹಂಪ್ಸ್‌ಗಳಿಗೆ ಬಲಿಯಾದ ಅಮಾಯಕರ ಮನೆಯಲ್ಲಿ ಕರಾಳ ಮೌನ

- ಆಧಾರ, ಆಶ್ರಯ ಕಳೆದುಕೊಂಡ ಕುಟುಂಬದ ಸದಸ್ಯರು ಇದೀಗ ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ
- ಬಯಸದವರಿಗೆ 'ಭಾಗ್ಯ' ಕರುಣಿಸುವ ಮಹನೀಯರಿಗೆ ಈ ದುರಂತದ ಸಂತ್ರಸ್ತರು ಕಾಣುತ್ತಿಲ್ಲವೇ!



ಅಪಘಾತವಾದ ಮಾನಸಗಂಗೋತ್ರಿಯ ಮುಖ್ಯ ದ್ವಾರದ ಎದುರಿನ ರಸ್ತೆಯಲ್ಲಿ ಯಶ್ವಂತ್ ಸ್ನೇಹಿತರು ಬ್ಯಾರಿಕೇಡ್‌ಗಳಿಗೆ ಇಲ್ಲಿ ಬಲಿಯಾದ ಮೂವರ ಭಾವಚಿತ್ರ ಅಳವಡಿಸಿ ಶ್ರದ್ಧಾಂಜಲಿ ಜೊತೆಗೆ ನ್ಯಾಯಕ್ಕೆ ಆಗ್ರಹಿಸಿದ್ದಾರೆ.

ಇದೆಂತಾ ದುರಾವಸ್ಥೆಯಲ್ಲಿದ್ದೇವೆ...?

ಮೂವರು ಅಮಾಯಕರು ಅವೈಜ್ಞಾನಿಕ ರೋಡ್ ಹಂಪ್ಸ್‌ಗೆ ಬಲಿಯಾಗಿದ್ದರೂ ಟುಟಕ್-ಪಿಟಿಕ್ ಎನ್ನದ ಜನಪ್ರತಿನಿಧಿಗಳು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೆ ಕಾಲಹರಣ ಮಾಡುತ್ತಿರುವ ಮೈಸೂರು ನಗರ ಪೊಲೀಸರು, ತಪ್ಪು ಮಾಡಿಯೂ ಪಾಪ ಪ್ರಜ್ಞೆ ಇಲ್ಲದೆ ಕುಟಕಿಕಾಗಿರುವ ಪಾಲಿಕೆ ಅಧಿಕಾರಿಗಳನ್ನು ಗಮನಿಸಿದರೆ ಇದೆಂತಾ ದುರಾವಸ್ಥೆಯ ಸಮಾಜದಲ್ಲಿದ್ದೇವೆ ಎಂದು ದುಃಖವಾಗುತ್ತದೆ.

ಸಾಂಸ್ಕೃತಿಕ ನಗರಿಯಲ್ಲಿ ಅಧಿಕಾರಕ್ಕೆ, ಸ್ಥಾನ ಮಾನಕ್ಕೆ ಹೆಣಗಾಡುವ ಜನ ಪ್ರತಿನಿಧಿಗಳು, ಆಡಳಿತದ ಚುಕ್ಕಾಣಿ ಹಿಡಿದಿರುವ ಅಧಿಕಾರಿಗಳು ನೊಂದವರ ಪಾಲಿಗೆ ಮಾತ್ರ ಇದ್ದರೂ ಇಲ್ಲದಂತೆ ಮರೆಯಾಗಿದ್ದಾರೆ. ಮಾನವೀಯತೆ ಎಂಬುದೇ ಇವರಲ್ಲಿ ಸತ್ತು ಹೋಗಿರುವಂತೆ ಗೋಚರವಾಗುತ್ತಿದೆ. ಜಾತಿ, ಅಧಿಕಾರ, ಸ್ವಾರ್ಥ ಸಾಧನೆಗಾಗಿ ತಿಕ್ಕಾಟ ನಡೆಸುವವರಿಗೆ ಅಮಾಯಕರ ಮೇಲೆ ಕರುಣೆ ಹುಟ್ಟುತ್ತಿಲ್ಲವೇ? ಪೊಲೀಸರು, ಅಧಿಕಾರಿಗಳು ಪ್ರಾಮಾಣಿಕತೆ ಎಂಬುದರ ಅರ್ಥವನ್ನು ಮರೆತು ಕಾಟಾಚಾರಕ್ಕೆ ಕೆಲಸ ಮಾಡುತ್ತಿದ್ದಾರೆಯೇ? ಈ ಎಲ್ಲಾ ಪ್ರಶ್ನೆಗಳು ಮೈಸೂರಿನ ಪ್ರಜ್ಞಾವಂತ ನಾಗರಿಕರನ್ನು ಕಾಡುತ್ತಿವೆ.

ಮೈಸೂರು, ಫೆ.3 (ಜಿಎ)– ಅಮಾಯಕ ಮೂವರ ಬದುಕಿಗೆ ಶಾಶ್ವತ ಬ್ರೇಕ್ ಹಾಕಿದ ಅವೈಜ್ಞಾನಿಕ ರೋಡ್ ಹಂಪ್ಸ್... ಇವರ ಮೂರು ಕುಟುಂಬಗಳನ್ನು ಕರಾಳ ಕತ್ತಲೆಯೊಳಗೆ ನೂಕಿದೆ...!

ತಂಗಿ ನಿಶ್ಚಿತಾರ್ಥಕ್ಕೆ ಸಿದ್ಧತೆ ನಡೆಸಿದ್ದ ಅಣ್ಣ, ತರಕಾರಿ ಮಾರಾಟ ಮಾಡಿ ಹೆಣ್ಣು ಮಕ್ಕಳ ಬಾಳಿಗೆ ದಾರಿ ದೀಪವಾಗಿದ್ದ ಅಪ್ಪ, ಮನೆಗೆ ಆಧಾರವೇ ಆಗಿದ್ದ ಮಗನನ್ನು ಕಳೆದುಕೊಂಡ ಕುಟುಂಬಗಳು ಅಕ್ಷರಶಃ ಕಂಗಾಲಾಗಿವೆ. ಮೈಸೂರು ನಗರಪಾಲಿಕೆ ಅಧಿಕಾರಿಗಳ ಮೈಗಳ್ಳತನ, ಅಸಡ್ಡೆ, ಬೇಜವಾಬ್ದಾರಿ, ಅಜ್ಞಾನದಿಂದ ಕಣ್ಣೀರಲ್ಲಿ ಕೈ ತೊಳೆಯುವಂತಾಗಿದೆ...

ನಗರಪಾಲಿಕೆ ವಲಯ ಕಚೇರಿ–4ರ ವ್ಯಾಪ್ತಿಯ ಮೈಸೂರು ವಿಶ್ವವಿದ್ಯಾನಿಲಯ ಮುಖ್ಯದ್ವಾರದ ಎದುರಿನ ಮೈಸೂರು–ಬೋಗಾದಿ ಮುಖ್ಯರಸ್ತೆಯಲ್ಲಿ ನಿರ್ಮಿಸಿದ್ದ ರಸ್ತೆ ಹಂಪ್ಸ್‌ಗಳು, ಮೂರು ಕುಟುಂಬವನ್ನು ಸಂಕಷ್ಟಕ್ಕೆ ದೂಡಿವೆ. ರಾತ್ರೋರಾತ್ರಿ ಯಾರದೋ ಬುದ್ಧಿಗೇಡಿತನಕ್ಕೆ ಬಲಿಯಾದ ಜೀವಗಳನ್ನೇ ನಂಬಿದ್ದವರ ನೂರಾರು ಕನಸುಗಳು ಕಮರಿಹೋಗಿವೆ.

ಅವೈಜ್ಞಾನಿಕವಾಗಿ ರೋಡ್ ಹಂಪ್ಸ್‌ಗೆ ಬಲಿಯಾದ ಮರಟಿಕ್ಯಾತಹಳ್ಳಿಯ ಆರ್.ಯಶ್ವಂತ್ (27), ಕೊಡಗಿನ ಶಿವನ್(24) ಮತ್ತು ಹೆಚ್.ಡಿ.ಕೋಟೆ ತಾಲೂಕಿನ ಕೆ.ಎಂ.ಹುಂಡಿ ಗ್ರಾಮದ ಕುಮಾರ್(48) ಕುಟುಂಬಗಳು ಅತೀವ ಸಂಕಷ್ಟದಲ್ಲಿದ್ದು, ನೋವು, ಕಣ್ಣೀರು, ಕಷ್ಟ-ಸಂಕಷ್ಟದಲ್ಲಿ ಮುಳುಗಿಹೋಗಿವೆ.

ತಂಗಿಗಿಲ್ಲ ಅಣ್ಣನ ತವರು ಉಡುಗೊರೆ!: ಹೌದು... ತನ್ನ ತಂಗಿಯ ಮದುವೆ ನಿಶ್ಚಿತಾರ್ಥದ ತಯಾರಿಯಲ್ಲಿದ್ದ ಮರಟಿಕ್ಯಾತಹಳ್ಳಿ ಯಶ್ವಂತ್, ಇನ್ನಿಲ್ಲದಿರುವುದು ತಂಗಿಗೆ ಅಣ್ಣನ ತವರು ಊಡುಗೊರೆಯನ್ನೇ ಇಲ್ಲವಾಗಿಸಿದೆ. ಏಜೆನ್ಸಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯಶ್ವಂತ್ ಜನವರಿ 27ರ ರಾತ್ರಿ 11ರ ಸುಮಾರಿಗೆ ಮನೆಗೆ ತೆರಳುವಾಗ ಯಮ ಸ್ವರೂಪದಂತೆ ಕಾದಿದ್ದ ಹಂಪ್ಸ್, ಇನ್ನೆಂದೂ ಬಾರದ ಲೋಕಕ್ಕೆ ಕರೆದೊಯ್ದಿದೆ.

ಇತ್ತ ಮಗನಿಗಾಗಿ ಕಾಯುತ್ತಿದ್ದ ತಾಯಿ, ಪತಿಗಾಗಿ ಕಾದಿದ್ದ ಪತ್ನಿ, ಅಣ್ಣನಿಗಾಗಿ ಎದುರು ನೋಡುತ್ತಿದ್ದ ತಂಗಿ, ಅಪ್ಪನ ಬರುವಿಕೆಗಾಗಿ ಚಡಪಡಿಸುತ್ತಿದ್ದ ಮುದ್ದು ಮಗಳಿಗೆ



ಮೃತ ಕುಮಾರ್ ಪತ್ನಿ ಹಾಗೂ ಪುತ್ರಿಯರು.

ಯಶ್ವಂತ್ ಇನ್ನು ನೆನಪು ಮಾತ್ರ. ನನ್ನನ್ನು ಎತ್ತಿ ಮುದ್ದಾಡಲು ಅಪ್ಪ ಬರುತ್ತಾನೆ... ತಂದೆ ತರುತ್ತಾನೆ ಎಂದು ಫೋಟೋ ಮುಂದೆ ಕಾದಿರುವ ಮುಗ್ಧ ಮಗುವಿನ ಚಡಪಡಿಕೆ ಕಲ್ಲು ಹೃದಯವನ್ನು ಕರಗಿಸುವಂತಿದೆ...

ಅಕ್ಕ–ತಂಗಿ ಭವಿಷ್ಯ ಅತಂತ್ರ: ಮನೆಯಲ್ಲಿ ಕಾಯಿಲೆಯಿಂದ ಬಸವಳಿದಿರುವ ಹಿರಿಯ ಜೀವಗಳಾದ ತಾಯಿ–ತಂದೆ ಆರೈಕೆ, ಪತ್ನಿಯೊಂದಿಗೆ ಸಹಬಾಳ್ವೆ ಜೊತೆಗೆ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ದೊಡ್ಡ ಸ್ಥಾನದಲ್ಲಿ ನೋಡಬೇಕು ಎನ್ನುವ ಕನಸಿನೊಂದಿಗೆ ಹಗಲು–ರಾತ್ರಿ ತರಕಾರಿ ವ್ಯಾಪಾರ ಮಾಡಿ, ಕುಟುಂಬ ಆಧಾರವೇ ಆಗಿದ್ದ ಹೆಚ್.ಡಿ.ಕೋಟೆಯ ತಾಲೂಕಿನ ಕೃಷ್ಣಯ್ಯನ ಹುಂಡಿ ಗ್ರಾಮದ ಕುಮಾರ್, ರೋಡ್ ಹಂಪ್ಸ್‌ಗೆ ಬಲಿಯಾಗಿರುವುದು ಅಕ್ಕ–ತಂಗಿಯ ಭವಿಷ್ಯವನ್ನು ಅತಂತ್ರವಾಗಿಸಿದೆ.

ಜ.27ರ ಸಂಜೆ ಎಂ.ಜಿ ರಸ್ತೆ ಮಾರುಕಟ್ಟೆಯಲ್ಲಿ ತರಕಾರಿ ತರಲು ಬಾಡಿಗೆ ಆಪೆ ಆಟೋದಲ್ಲಿ ಹೊರಟ್ಟಿದ್ದರು. ರಸ್ತೆಯಲ್ಲಿ ಏಕಾಏಕಿ ಎದುರಾದ ಹೆಮ್ಮಾರಿ ಹಂಪ್ಸ್ ನಿಂದ ನಿಯಂತ್ರಣ ತಪ್ಪಿದ ಆಪೆ ಆಟೋ ಎದುರಿಗೆ ಬಂದ ಕಾರಿಗೆ ಅಪ್ಪಳಿಸಿದ ಪರಿಣಾಮ ಗಂಭೀರ ಗಾಯಗೊಂಡಿದ್ದ ಕುಮಾರ್, ಚಿಕಿತ್ಸೆ ಫಲಕಾರಿಯಾಗದೆ ಇಹಲೋಕ ತ್ಯಜಿಸಿದರು. ಮನೆಯ ಆಧಾರ ಸ್ತಂಭವನ್ನು ಕಳೆದುಕೊಂಡಿರುವ ಕುಟುಂಬ ದುಃಖದಲ್ಲಿ ಮುಳುಗಿದ್ದು, ಬಿ.ಎ ಹಾಗೂ ಎಸ್‌ಎಸ್‌ಎಲ್ ಓದುತ್ತಿರುವ ಅಕ್ಕ–ತಂಗಿಯ ಉಜ್ವಲ ಭವಿಷ್ಯ ಅತಂತ್ರವಾಗಿದೆ. ಮಗನನ್ನು ಕಳೆದುಕೊಂಡ ಹಿರಿಯ ಜೀವಗಳು, ಪತಿಯನ್ನು



ಕುಟುಂಬದೊಂದಿಗೆ ಯಶ್ವಂತ್ ಕೊನೇ ಸೆಲ್ಫಿ

ಕಳೆದುಕೊಂಡ ಪತ್ನಿ ಕಂಗಾಲಾಗಿದ್ದಾರೆ.

ಕೊಡಗಿನ ಶಿವನ್ ಇನ್ನು ನೆನಪು ಮಾತ್ರ: ಮೈಸೂರು ವಿವಿ ಎದುರಿನ ಪಾಲಿಕೆಯ ಅವೈಜ್ಞಾನಿಕ ಹಂಪ್ಸ್ ಬಲಿಯಾದ ಕೊಡಗಿನ ವಿರಾಜಪೇಟೆಯ ಕಂಡಂಗಾಲ ಗ್ರಾಮದ ಶಿವನ್ ಇನ್ನು ನೆನಪು ಮಾತ್ರ. ಮೈಸೂರಿನ ಸರಸ್ವತಿಪುರಂನಲ್ಲಿ ಬಾಡಿಗೆ ರೂಂ ಪಡೆದು, ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಶಿವನ್, ಕುಟುಂಬದ ಆಧಾರವೂ ಆಗಿದ್ದರು. ಒಬ್ಬನೇ ಮಗನನ್ನು ಕಳೆದುಕೊಂಡ ತಂದೆ–ತಾಯಿ ವಿಚಲಿತರಾದರೆ, ತಮ್ಮನನ್ನು ಕಳೆದುಕೊಂಡ ಅಕ್ಕ, ಅಣ್ಣನನ್ನು ಕಳೆದುಕೊಂಡ ತಂಗಿ ಚಿಂತೆಯಲ್ಲಿ ಮುಳುಗಿದ್ದಾರೆ.

ನ್ಯಾಯಕೊಡಿ: ಅವೈಜ್ಞಾನಿಕ ರೋಡ್ ಹಂಪ್ಸ್‌ಗೆ ಬಲಿಯಾದ ಯಶ್ವಂತ್, ಕುಮಾರ್ ಹಾಗೂ ಶಿವನ್ ಸಾವಿಗೆ ಪಾಲಿಕೆ ಅಧಿಕಾರಿಗಳೇ ಹೊಣೆ. ಇವರ ಸಾವಿಗೆ ಅಧಿಕಾರಿಗಳೇ ಪರಿಹಾರ ಕೊಡಲಿ ಎಂಬ ಪ್ಲೆಕ್ಸ್ ಅನ್ನು ಹಂಪ್ಸ್ ನಿರ್ಮಿಸಿದ್ದ ಸ್ಥಳದಲ್ಲಿರುವ ಬ್ಯಾರಿಕೇಡ್‌ಗೆ ಕಟ್ಟುವ ಮೂಲಕ ಸಾವಿನ ಪರಿಹಾರಕ್ಕೆ ಹಲವರು ಆಗ್ರಹಿಸಿದ್ದಾರೆ.

ಮುಡಾದ ಉದ್ದೇಶಿತ ಗುಂಪು ವಸತಿ ಯೋಜನೆ ಯಾರ ಪ್ರಯೋಜನಕ್ಕೆ?

- ಸದರಿ ಯೋಜನೆ ಡಿಪಿಆರ್ ಅನುಮೋದನೆಗೂ ಮೊದಲು ಹಿಂದಿನ ಗುಂಪು ವಸತಿ ಯೋಜನೆ ಬಗ್ಗೆ ಶ್ವೇತಪತ್ರ ಹೊರಡಿಸಲಿ
- ಸಿಐಟಿಬಿ ಅಧ್ಯಕ್ಷರಾಗಿದ್ದ ಡಿ.ಮಾದೇಗೌಡರ ಅವಧಿಯಿಂದ ಈವರೆಗಿನ ನಿರ್ಮಾಣವನ್ನೂ ಅದು ಒಳಗೊಂಡಿರಲಿ

ಡಾ.ಕೆ.ಬಿ.ಗಣಪತಿ,
ಹಿರಿಯ ಪತ್ರಕರ್ತರು

ಮೈಸೂರು,ಫೆ.3– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವಿವಿಧ ಬಡಾವಣೆ ಹಾಗೂ ವಿವಿಧ ಹಂತದಲ್ಲಿ ಗುಂಪು ವಸತಿ ಯೋಜನೆ ಕೈಗೆತ್ತಿಕೊಳ್ಳಲು ಮುಂದಾಗಿರುವುದು ಅಂತಹ ಒಳ್ಳೆಯ ಬೆಳವಣಿಗೆಯಲ್ಲ. ಕಡಿಮೆ, ಮಧ್ಯಮ ಮತ್ತು ಹೆಚ್ಚಿನ ಆದಾಯದ ವರ್ಗದ ಜನತೆ ಇಂತಹ ಯೋಜನೆಯಿಂದ ಈಗಾಗಲೇ ಕಹಿ ಅನುಭವ ಹೊಂದಿರುವ ಹಿನ್ನೆಲೆಯಲ್ಲಿ ಪ್ರಸ್ತುತದ ಮುಡಾ ಕ್ರಮ (ಮುಡಾದಿಂದ ಸರ್ಕಾರಕ್ಕೆ ಡಿಪಿಆರ್ ಸಲ್ಲಿಕೆ) ಸೂಕ್ತವಲ್ಲ.

ಈ ಹಿಂದೆ ಡಿ.ಮಾದೇಗೌಡರು ಸಿಐಟಿಬಿ ಅಧ್ಯಕ್ಷರಾಗಿದ್ದಾಗ (1986–1988) ಇದೇ ರೀತಿಯ ಯೋಜನೆ ಕೈಗೆತ್ತಿಕೊಳ್ಳಲಾಯಿತು. ಜೊತೆಗೆ ದೊಡ್ಡ ಮಟ್ಟದಲ್ಲಿ ಫಲಾನುಭವಿಗಳನ್ನು ನ್ಯಾಯ ಸಮ್ಮತವಾಗಿ ಆಯ್ಕೆ ಮಾಡಲಾಯಿತು. ಅದಾಗ್ಯೂ, ಬಹುಬೇಗನೆ ಈ ಯೋಜನೆಯನ್ನು ಭ್ರಷ್ಟಾಚಾರ ಆವರಿಸಿಕೊಳ್ಳಲಾರಂಭಿಸಿತು. ನನಗೆ ಈಗಲೂ ನೆನಪಿದೆ; ವಿವೇಕಾನಂದ ವೃತ್ತದ ಸಮೀಪ ಎಂಐಜಿ ಮನೆ ಖರೀದಿಸಿದ್ದ ಮಧ್ಯಮ ಆದಾಯ ವರ್ಗದ ವಿಧವೆಯೊಬ್ಬರ ಸಹಾಯಕ್ಕೆ ಧಾವಿಸಬೇಕಾಯಿತು. ಆ ಮನೆ ಒಳಚರಂಡಿ ಸಂಪರ್ಕ ಅಥವಾ ವಿದ್ಯುತ್ ಸಂಪರ್ಕವನ್ನೇ ಒಳಗೊಂಡಿರಲಿಲ್ಲ. ಅಲ್ಲದೆ, ಕಿಟಕಿ ಮತ್ತು ಬಾಗಿಲುಗಳನ್ನು ಬದಲಾಯಿಸಬೇಕಾದ ಅನಿವಾರ್ಯತೆ ಇದ್ದ ಹಿನ್ನೆಲೆಯಲ್ಲಿ ಸದರಿ ಮಹಿಳೆಯು ಹೆಚ್ಚುವರಿ ಹಣ ವ್ಯಯಿಸುವ ಸನ್ನಿವೇಶ ಸೃಷ್ಟಿಯಾಯಿತು.

ಕೊಳಚೆ ನಿರ್ಮೂಲನಾ ಮಂಡಳಿ



ಮತ್ತು ಇನ್ನಿತರ ಸರ್ಕಾರಿ ಸಂಸ್ಥೆಗಳು ಗುಂಪು ವಸತಿ ಹಾಗೂ ಬಹುಮಹಡಿ ಅಪಾರ್ಟ್‌ಮೆಂಟ್ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಈ ಸಂದರ್ಭದಲ್ಲಿ ಈಗಾಗಲೇ ಕೈ ಸುಟ್ಟುಕೊಂಡಿರುವ ಮುಡಾ ಈ ಯೋಜನೆಗೆ ಮತ್ತೆ ಕೈ ಹಾಕುತ್ತಿರುವುದು ಅಚ್ಚರಿಯೇ. ವರದಿಗಳ ಪ್ರಕಾರ ಈ ಗುಂಪು ವಸತಿ ಯೋಜನೆಗಳ ಮೂಲಕ ನಗರವು ಮಹತ್ತರ ಬೆಳವಣಿಗೆಯನ್ನೇನೂ ಕಾಣಲು ಸಾಧ್ಯವಾಗಿಲ್ಲ.

ಮುಡಾದ ಗುಂಪು ವಸತಿ ಯೋಜನೆಗಳು ಅತ್ಯಂತ ಸಂಕೀರ್ಣ ಹಾಗೂ ಜಟಿಲವೂ ಆಗಿದ್ದು, ಮತ್ತೆ ಇಂತಹ ಯೋಜನೆಗೆ ಕೈ ಹಾಕಿದರೆ ಹಿಂದೆ ಅನುಭವಿಸಿದಂತೆ ಇದರಲ್ಲಿ ಒಳಗೊಳ್ಳುವ ಹಲವಾರು ಏಜೆನ್ಸಿಗಳ ಭ್ರಷ್ಟಾಚಾರ ಹಾಗೂ ದೂರುಗಳನ್ನು ಎದುರಿಸಬೇಕಾಗುತ್ತದೆ. ಈ ಅನುಷ್ಠಾನ ಸಂಬಂಧ ಹಣಕಾಸಿನ ಸಮಸ್ಯೆಗಳ ಹೊರತಾಗಿ ನಿಗದಿತ ಅವಧಿಯಲ್ಲಿ ಯೋಜನೆ ಪೂರ್ಣಗೊಳಿಸಲು ಹಲವು ಸವಾಲುಗಳೂ ಇವೆ. ಈ ಹಿಂದೆ ಮುಡಾ ನಿಗದಿತ ಸಮಯಕ್ಕೆ ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಿದ ಉದಾಹರಣೆಯೇ ಇಲ್ಲ. ಭವಿಷ್ಯದಲ್ಲದರೂ ನಿಗದಿತ ಸಮಯಕ್ಕೆ ವಿತರಣೆ ಮಾಡುತ್ತದೆ ಎಂಬುದಕ್ಕೆ ಯಾವ ಖಾತರಿಯೂ ಇಲ್ಲ. ಫಲಾನುಭವಿಗಳು ಸಕಾಲದಲ್ಲಿ ಬೇಡಿಕೆಗೆ ಅನುಗುಣವಾಗಿ ಶುಲ್ಕ ಪಾವತಿ ಮಾಡಿರಬಹುದು. ಆದರೆ ಮನೆಗಳನ್ನು ಸಮಯಕ್ಕೆ ಸರಿಯಾಗಿ ವಿತರಣೆ ಮಾಡಿದ ನಿದರ್ಶನವಿಲ್ಲ. ಇದು ಮುಡಾ ಗುಂಪು ವಸತಿ ಯೋಜನೆಯ ಫಲಾನುಭವಿಗಳ ಕಹಿ ಅನುಭವ.

ಗುಂಪು ವಸತಿ ಯೋಜನೆಯ ಸಂಕೀರ್ಣತೆಯನ್ನು ಅರ್ಥೈಸಿಕೊಂಡು ನಾನಾ ಅಳತೆಯ ನಿವೇಶನಗಳ ಹಂಚಿಕೆಗೆ ಮುಡಾ ಮುಂದಾಗುವುದು ಉತ್ತಮ ಮಾರ್ಗವಾಗಿದೆ. ವಸತಿ ಆಕಾಂಕ್ಷಿಗಳಿಗೆ ಅನುಕೂಲ ಕಲ್ಪಿಸಲು ಇದು ಸೂಕ್ತವಾಗಿದೆ. ಫಲಾನುಭವಿಗಳ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ವಿವಿಧ ವಿಸ್ತೀರ್ಣದ ನಿವೇಶನ ವಿತರಣೆಗೆ ಯೋಜನೆ ರೂಪಿಸಬೇಕಿದೆ. ಈ ಹಿಂದಿನ ಸಿಐಟಿಬಿ (ಈಗಿನ ಮುಡಾ) ರೀತಿಯಲ್ಲಿ ಮನೆ ನಿರ್ಮಾಣ ಕೈಗೆತ್ತಿಕೊಳ್ಳುವ ಯೋಜನೆಯನ್ನು ಮುಡಾ ಕೈಬಿಡಬೇಕು. ಆಗೆಲ್ಲಾ ಖಾಸಗಿ ಬಡಾವಣೆಗಳು ಮತ್ತು ಬಿಲ್ಡರ್ಸ್ ಪರಿಕಲ್ಪನೆ ರೂಢಿಯಲ್ಲಿ ಇರಲಿಲ್ಲ.

ಮುಡಾ ತನ್ನ ಗುಂಪು ವಸತಿ ಯೋಜನೆಯಡಿ ಫಲಾನುಭವಿಗಳಿಗೆ ಮನೆ ವಿತರಣೆಯಲ್ಲಿ ಪ್ರಸ್ತುತ ವಿಫಲವಾಗಿದೆ. ಜೊತೆಗೆ ಈಗ ಯಶಸ್ವಿಯಾಗುವ ಯಾವುದೇ ಖಾತರಿಯೂ ಇಲ್ಲ. ಅದೇನೇ ಇರಲಿ, ಸರ್ಕಾರ ಗುಂಪು ವಸತಿ ಯೋಜನೆಗೆ ಅನುಮೋದಿಸಿದರೆ ಈ ವೇಳೆ ತನ್ನ ಬುದ್ಧಿವಂತಿಕೆ ಪ್ರದರ್ಶಿಸಬೇಕು. ಯೋಜನೆಯನ್ನು ಒಡಂಬಡಿಕೆ ಆಧಾರದಲ್ಲಿ ಖಾಸಗಿ ಬಿಲ್ಡರ್‌ಗಳಿಗೆ ನೀಡುವಲ್ಲಿ ಸರ್ಕಾರದ ಉತ್ತಮ ನಿರ್ಧಾರ ಅಡಗಿದೆ. ಅಂತೆಯೇ ಈ ಯೋಜನೆಯಲ್ಲಿ ಭೂಮಿ ಒದಗಿಸುವುದು, ಫಲಾನುಭವಿಗಳನ್ನು ಗುರುತಿಸುವುದು ಮತ್ತು ಮನೆಗಳನ್ನು ವಿತರಿಸುವುದಕ್ಕೆ ಮಾತ್ರ ಮುಡಾ ತನ್ನ ಪಾತ್ರವನ್ನು ಸೀಮಿತಗೊಳಿಸಿಕೊಳ್ಳಬೇಕಿದೆ.

ಕಣಿಯನ ಹುಂಡಿಯ 465.06 ಹೆಕ್ಟೇರ್ ಭೂಮಿ ಮೀಸಲು ಅರಣ್ಯ

ಅರಣ್ಯ ಇಲಾಖೆ ನಿರ್ಧಾರ

ಮೈಸೂರು, ಫೆ.3–ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಹೋಬಳಿಯ ಕಣಿಯನ ಹುಂಡಿ ಗ್ರಾಮದ 465.06 ಹೆಕ್ಟೇರ್ ಭೂಮಿಯನ್ನು ಮೀಸಲು ಅರಣ್ಯವಾಗಿಸಲು ಅರಣ್ಯ ಇಲಾಖೆ ನಿರ್ಧರಿಸಿದೆ.

ಸುಪ್ರೀಂಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರವು ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಎಂಬ ತಾತ್ಕಾಲಿಕ ಹುದ್ದೆಯನ್ನು ಸೃಷ್ಟಿಸಿ, ಅದಕ್ಕೆ ನಿವೃತ್ತ ಕೆಎಎಸ್ ಅಧಿಕಾರಿ ಶ್ರೀಮತಿ ರೇಣುಕಾಂಬ ಅವರನ್ನು ನೇಮಿಸಿದ್ದು, ಅವರು ಕಣಿಯನ ಹುಂಡಿ ಗ್ರಾಮದ 465.06 ಹೆಕ್ಟೇರ್ ಭೂಮಿಯನ್ನು ಮೀಸಲು ಅರಣ್ಯವನ್ನಾಗಿ ರಚಿಸಲು ನಿರ್ಧರಿಸಲಾಗಿದೆ ಎಂದು ಉದ್ಘೋಷಣೆ ಮಾಡಿದ್ದಾರೆ.

ಇದರಿಂದಾಗಿ ಈ ಭೂ ಪ್ರದೇಶದಲ್ಲಿ ಕರ್ನಾಟಕ ಅಧಿನಿಯಮ 17ನೇ ಪ್ರಕರಣದ ಪ್ರಕಾರ ಅಂತಿಮ ಅಧಿಸೂಚನೆ ಹೊರಡಿಸುವವರೆಗೆ ಯಾವುದೇ ಹೊಸ ಮನೆ ಕಟ್ಟುವಂತಿಲ್ಲ. ಅಥವಾ ತೋಟಗಾರಿಕೆಯನ್ನು ಮಾಡುವಂತಿಲ್ಲ. ಈ ಭೂಪ್ರದೇಶದಲ್ಲಿ ಬೇಸಾಯಕ್ಕಾಗಿ ಅಥವಾ ಬೇರೆ ಉದ್ದೇಶಕ್ಕಾಗಿ ಹೊಸ ತೆರವು ಮಾಡತಕ್ಕದ್ದಲ್ಲ. ಈ ಭೂಮಿಯಲ್ಲಿ ವ್ಯಾಪಾರ ಅಥವಾ ಇನ್ಯಾವುದೇ ಉದ್ದೇಶಗಳಿಗಾಗಿ ಯಾವುದೇ ಮರವನ್ನು ಕಡಿಯುವಂತಿಲ್ಲ. ರಾಜ್ಯ ಸರ್ಕಾರದ ಮಂಜೂರಾತಿ ಇಲ್ಲದೇ ಸದರಿ ಭೂಮಿಗೆ ಸಂಬಂಧಿಸಿದಂತೆ ಯಾವುದೇ ಪಟ್ಟಾ ಅಧಿಭೋಗದ ಹಕ್ಕನ್ನು ಮಂಜೂರು ಮಾಡತಕ್ಕದ್ದಲ್ಲ. ಒಂದು ವೇಳೆ ಮಂಜೂರಾತಿ ಇಲ್ಲದೇ ನೀಡಲಾದ ಯಾವುದೇ ಪಟ್ಟಾ ಅಥವಾ ಅಧಿಭೋಗದ ಹಕ್ಕು ಅಸಿಂಧುವಾಗುತ್ತದೆ ಎಂದು ಉದ್ಘೋಷಣೆಯಲ್ಲಿ ತಿಳಿಸಲಾಗಿದೆ.

ಈ ಘೋಷಣೆಯಲ್ಲಿ ಸೇರಿಸಲಾಗಿರುವ ಯಾವುದೇ ಭೂಮಿಯಲ್ಲಿ ಅಥವಾ ಭೂಮಿಯ ಮೇಲೆ ಇಲ್ಲವೇ ಅರಣ್ಯ ಉತ್ಪನ್ನಗಳ ಮೇಲೆ ಯಾವುದೇ ಹಕ್ಕನ್ನು ಸ್ಥಾಪಿಸುವ ಯಾವುದೇ ದಾವೆಯನ್ನು ಸಿವಿಲ್ ನ್ಯಾಯಾಲಯಗಳು ಪುರಸ್ಕರಿಸುವಂತಿಲ್ಲ. ಆದ್ದರಿಂದ ಸದರಿ ಭೂಮಿಗಳಲ್ಲಿ ಅಥವಾ ಯಾವುದೇ ಅರಣ್ಯ ಉತ್ಪನ್ನಗಳ ಮೇಲೆ ಹಕ್ಕು ಸಾಧಿಸುವ ವ್ಯಕ್ತಿಗಳು 2024ರ ಜ.25ರಿಂದ 3 ತಿಂಗಳ ಒಳಗೆ ಅಶೋಕಪುರಂನ ಅರಣ್ಯ ಭವನದಲ್ಲಿರುವ ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನು ಖುದ್ದಾಗಿ ಅಥವಾ ಲಿಖಿತ ಹೇಳಿಕೆಯಲ್ಲಿ ಪ್ರತಿಪಾದಿಸಿದ ಹಕ್ಕುಗಳ ಸ್ವರೂಪ ತಿಳಿಯಲು ಮತ್ತು ಅದಕ್ಕೆ ಆಧಾರವಾದ ಎಲ್ಲಾ ದಾಖಲೆಗಳನ್ನು ಮಂಡಿಸುವಂತೆ ಸೂಚಿಸಲಾಗಿದೆ. ಅಧಿಕೃತ ರಾಜ್ಯ ಪತ್ರದಲ್ಲಿ 17ನೇ ಪ್ರಕರಣದ ಪ್ರಕಾರ ಹೊರಡಿಸುವ ಅಧಿಸೂಚನೆ ಮೂಲಕ ಈ ಭೂಮಿಯನ್ನು ಮೀಸಲು ಅರಣ್ಯ ಎಂದು ಘೋಷಿಸಿದ ಮೇಲೆ ಯಾವುದೇ ವ್ಯಕ್ತಿಗಳಿಗೆ ಇರುವಂತಹ ಎಲ್ಲಾ ಹಕ್ಕುಗಳೂ ಅಂತ್ಯಗೊಳ್ಳುತ್ತವೆ ಎಂದು ಉದ್ಘೋಷಣೆಯಲ್ಲಿ ತಿಳಿಸಲಾಗಿದೆ.

ಪಿತೂರಿಗೆ ಬಲಿಯಾಗಿ ನಾನು, ಪ್ರೀತಂಗೌಡ ವಿಷಕಂಠರಾಗಿದ್ದೇವೆ: ಸಿ.ಟಿ.ರವಿ

ಹಾಸನ: ಚಿಕ್ಕಮಗಳೂರಿನಲ್ಲಿ ನಾನು ಹಾಗೂ ಹಾಸನದಲ್ಲಿ ಪ್ರೀತಂಗೌಡ ಕೆಲಸ ಮಾಡಿಯೂ ರಾಜಕೀಯ ಪಿತೂರಿಗೆ ಬಲಿಯಾಗಿದ್ದೇವೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದ್ದಾರೆ.

ಹಾಸನ ನಗರದ ಸೀತಾರಾಮಾಂಜನೇಯ ಸಭಾಭವನದಲ್ಲಿ ನಡೆದ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಅವರು ಮಾತನಾಡಿದ್ದಾರೆ. ಈ ವೇಳೆ ನಮ್ಮನ್ನು ಕೆಲಸ ಮಾಡಿಲ್ಲ ಎಂದು ಯಾರೂ ದೂರುವುದಿಲ್ಲ. ಆದರೂ ನಾವಿಬ್ಬರೂ ರಾಜಕೀಯ ಪಿತೂರಿಗೆ ಬಲಿಯಾಗಿದ್ದೇವೆ ಎಂದು ಹೇಳಿದ್ದಾರೆ.

ಚಿಕ್ಕಮಗಳೂರಿನಲ್ಲಿ ಜೆಡಿಎಸ್ 2018ರ ಚುನಾವಣೆಯಲ್ಲಿ 40 ಸಾವಿರ ವೋಟು ಪಡೆದಿತ್ತು. ಕಳೆದ ಚುನಾವಣೆಯಲ್ಲಿ ಕೇವಲ 1700 ವೋಟು ಪಡೆದಿದೆ. ಹಾಗೆಯೇ ಹಾಸನದಲ್ಲಿ ಕಾಂಗ್ರೆಸ್ ಅಂದು 38 ಸಾವಿರ ಮತ ಪಡೆದಿತ್ತು. ಈಗ 4 ಸಾವಿರ ಮತ ಮಾತ್ರ ಗಳಿಸಿದೆ. ಹೀಗಾಗಿ ರಾಜಕೀಯ ಪಿತೂರಿ ಹೇಗೆ ನಡೆದಿದೆ ಎಂದು ಬಿಡಿಸಿ ಹೇಳಬೇಕಿಲ್ಲ. ಸಂಬಂಧ ಕೆಡಬಾರದು ಎಂದು ನಾವು ವಿಷಕಂಠರಾಗಿದ್ದೇವೆ ಎಂದು ಪರೋಕ್ಷವಾಗಿ ಜೆಡಿಎಸ್ ವಿರುದ್ಧವೂ ಅಸಮಾಧಾನ ಹೊರ ಹಾಕಿದ್ದಾರೆ.

ಈಗಲೇ ಎಲ್ಲವನ್ನೂ ಬಿಡಿಸಿ ಹೇಳಲು ಆಗುವುದಿಲ್ಲ. ಎಲ್ಲಿ, ಏನು, ಹೇಗೆ, ಪಿತೂರಿ ನಡೆಯಿತು ಎಂದು ಗೊತ್ತು. ಎಲ್ಲವನ್ನೂ ಹೊಟ್ಟೆಯಲ್ಲಿ ಇಟ್ಟುಕೊಂಡಿದ್ದೇವೆ. ನಾವು ಅಷ್ಟು ಅಮಾಯಕರಲ್ಲ. ನಾವು ತತ್ವದ ಮೇಲೆ ನಂಬಿಕೆ ಇಟ್ಟವರು. ನಾನು ದೇಶ ಮೊದಲು ಎಂದು ಕೆಲಸ ಮಾಡ್ತಿದ್ದೇನೆ. ಮೋದಿ ಅವರ ಚಿತ್ರ ಕಣ್ಮುಂದೆ ಬರಬೇಕು. ಆ ಕಾರಣಕ್ಕಾಗಿ ಎಲ್ಲವನ್ನೂ ಸಹಿಸಿಕೊಂಡಿದ್ದೇನೆ ಎಂದಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕಳೆದ 10 ವರ್ಷಗಳಿಂದ ಪ್ರಧಾನಿ ಮೋದಿ ಎಲ್ಲೆಡೆ ಮಾಡಿರುವ ಕೆಲಸ ಕಾರ್ಯಗಳನ್ನು ಜನತೆಗೆ ಮುಟ್ಟಿಸುವ ಮೂಲಕ ಬಿಜೆಪಿ ಗೆಲ್ಲಲು ಪ್ರತಿಯೊಬ್ಬರೂ ಶ್ರಮಿಸಬೇಕು ಎಂದರು.

ರೈತರಿಗೆ ಆರು ದಿನಗಳ ತರಬೇತಿ ಕಾರ್ಯಕ್ರಮ

ಮೈಸೂರು,ಫೆ.3–ಜಿಲ್ಲಾ ಕೃಷಿ ತರಬೇತಿ ಕೇಂದ್ರ, ನಾಗನಹಳ್ಳಿಯಲ್ಲಿ ಫೆ.5 ರಿಂದ ಫೆ.10ರವರೆಗೆ 'ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ' ವಿಷಯದ ಬಗ್ಗೆ ರೈತ, ರೈತಮಹಿಳೆಯರಿಗೆ 6 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತ, ರೈತಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಒದಗಿಸಲಾಗಿದ್ದು, ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರನ್ನು ಸಹಾಯಕ ಕೃಷಿ ನಿರ್ದೇಶಕರ ದೂ.ಸಂ: 8277 933179ಗೆ ಕರೆಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸತಕ್ಕದ್ದು. ಕೇವಲ ಮೈಸೂರು ಜಿಲ್ಲೆಯ 30 ರೈತ, ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು, ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗಭೂಮಿ ಸೌಹಾರ್ದತೆ, ಸಹಬಾಳ್ವೆ ಪ್ರಜ್ಞೆ ಮೂಡಿಸುತ್ತೆ

ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ ಅಭಿಮತ

ಮೈಸೂರು,ಫೆ.3(ಪಿಎಂ)– ಎಲ್ಲರೊಳಗೆ ನಾನೂ ಒಬ್ಬ ಎಂಬ ಪ್ರಜ್ಞೆ ಹೊಂದಿರಬೇಕು. ಅದನ್ನು ರಂಗಭೂಮಿ ಕಲಿಸುತ್ತದೆ. ರಂಗಭೂಮಿ ನಮಗೆ ಸೌಹಾರ್ದತೆ, ಸಹಬಾಳ್ವೆ ಮತ್ತು ಸಮಷ್ಟಿ ಪ್ರಜ್ಞೆ ಮೂಡಿಸುತ್ತದೆ ಎಂದು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಹೇಳಿದರು.

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನಕ ಕಲೆಗಳ ವಿವಿ ಸಂಯುಕ್ತಾಶ್ರಯದಲ್ಲಿ ಫೆ.9ರವರೆಗೆ ಹಮ್ಮಿಕೊಂಡಿರುವ 'ರಂಗಸಂಯುಕ್ತ–ರಂಗಭೂಮಿ, ಅದರ ಪೂರಕ ಕಲೆಗಳು' ಕುರಿತ ಉಪನ್ಯಾಸ ಮಾಲಿಕೆಯಲ್ಲಿ ಶನಿವಾರ 'ಅಭಿವ್ಯಕ್ತಿ' ಕುರಿತು ಅವರು ಮಾತನಾಡಿದರು.



ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ್ (ಜನ್ನಿ) ಮಾತನಾಡಿದರು.

ಎಲ್ಲರ ನಡೆ–ನುಡಿಯ ಹಾದಿಯಲ್ಲಿ ನಡೆಯುವುದು ಒಂದು ಸೂಕ್ಷ್ಮತೆ. ಆ ಸೂಕ್ಷ್ಮತೆಯನ್ನು ನಿಖರವಾಗಿ ಕ್ಷಣ ಕ್ಷಣಕ್ಕೂ ಕಲಿಸುವುದು ರಂಗಭೂಮಿ. ಬೇರೆ ಎಲ್ಲಾ ಕಲಾ ಪ್ರಕಾರಗಳೂ ತನ್ನದೇ ಮಿತಿ ಹೊಂದಿರುತ್ತವೆ. ಆದರೆ ರಂಗಭೂಮಿಯಲ್ಲಿ ಮಿತಿಯನ್ನು ಮೀರಬಹುದು. ಮೀರುವಂತಹ ಬಹಳ ದೊಡ್ಡ ಬಯಲು ರಂಗಭೂಮಿ ಎಂದರು.

ರಂಗಭೂಮಿಯ ಆವರಣವೇ ಒಂದು ಬಯಲಾಗಿದ್ದು, ಬಹಳ ವಿಸ್ತಾರವಾದುದು. ಆದರೆ ಅಲ್ಲಿ ಬೀಳಬಾರದು. ಅಂದರೆ ನಮ್ಮ ನಡೆಯಲ್ಲಿ ಎಚ್ಚರ ಹೊಂದಿರಬೇಕು. ಎಲ್ಲರೊಳಗೆ ನಾನೂ ಒಬ್ಬ ಎಂಬ ಪ್ರಜ್ಞೆ ಹೊಂದಿರಬೇಕು. ನಾನತ್ವ ಬಿಟ್ಟು ನಾವತ್ವ ಕಟ್ಟಿಕೊಂಡು ಸಮನ್ವಯತೆಯಿಂದ ಸಾಗಬೇಕು. ಎಲ್ಲರ ಮಧ್ಯೆ, ಎಲ್ಲರದ್ದರ ನಡುವೆ ತಿಳುವಳಿಕೆ ಬೀಜ ಬಿತ್ತಿ ಬೆಳೆಯಬೇಕು ಎಂದು ತಿಳಿಸಿದರು.

ಅಭಿವ್ಯಕ್ತಿ ಎನ್ನುವುದು ಎಲ್ಲಾ ಜೀವಿಗಳಲ್ಲಿ ಇರುತ್ತದೆ. ಅದು ಎಲ್ಲರ ಹಕ್ಕು. ಪ್ರಸ್ತುತದಲ್ಲಿ ಸಂವಿಧಾನ ನಮಗೆ ಅಭಿವ್ಯಕ್ತಿಯ ಹಕ್ಕು ಕಲ್ಪಿಸಿದೆ. ತಮ್ಮ ಅನಿಸಿಕೆ ಹೇಳಿಕೊಳ್ಳಲು ಪ್ರತಿಯೊಬ್ಬರಿಗೂ ಹಕ್ಕಿದೆ. ಆದರೆ ಈ ದೇಶದ ಬಹುಸಂಖ್ಯಾತರಲ್ಲಿ ಎಷ್ಟೋ ಜನಕ್ಕೆ ಅಭಿವ್ಯಕ್ತಿ ತಮ್ಮ ಹಕ್ಕು ಎಂಬುದೇ ಗೊತ್ತಿಲ್ಲ ಎಂದು ಹೆಚ್.ಜನಾರ್ಧನ್ (ಜನ್ನಿ) ವಿಷಾದಿಸಿದರು.





ಮೈಸೂರು ಎಪಿಎಂಸಿ ಮಾಜಿ ಸದಸ್ಯರು ಹಾಗೂ ಶ್ರೀನಿಧಿ ಸ್ಟೀಲ್ ಅಂಡ್ ಸಿಮೆಂಟ್ ಕಂಪನಿ ಮಾಲೀಕರಾದ ಕೋಟೆಹುಂಡಿ ಮಹದೇವು ಅವರು ವಿವಿಧ ಸೇವಾ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡರು. ಬಂಬೂಬಜಾರ್‌ನಲ್ಲಿರುವ ಕಿವುಡ ಮತ್ತು ಮೂಕ ಮಕ್ಕಳ ವಿಶೇಷ ಶಾಲೆಯ ಮಕ್ಕಳಿಗೆ ಸಿಹಿಊಟ ಬಡಿಸಿ, ಸಮವಸ್ತ್ರ ನೀಡಿದರು. ಶಾಸಕ ಜಿ.ಟಿ.ದೇವೇಗೌಡರವರ ಆಪ್ತರಾದ ಕೋಟೆಹುಂಡಿ ಮಹದೇವು ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಧನಗಹಳ್ಳಿ, ಜಯಪುರ, ದೊಡ್ಡಮಾರಗೌಡನಹಳ್ಳಿ, ಗೋಪಾಲಪುರ, ಸಿಂಧುವಳ್ಳಿ, ಉದ್ಬೂರು ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಸದಸ್ಯರು ಮತ್ತು ಜೆಡಿಎಸ್ ಮುಖಂಡರು, ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರು, ಕೋಟೆಹುಂಡಿ ಮಹದೇವು ಅಭಿಮಾನಿಗಳ ಬಳಗದ ಸದಸ್ಯರು ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

ಅಡ್ವಾಣಿಗೆ ಭಾರತ ರತ್ನ: ಪ್ರಜ್ಞಾವಂತ ನಾಗರಿಕರ ವೇದಿಕೆ ಸಿಹಿ ಹಂಚಿ ಸಂಭ್ರಮ



ಮೈಸೂರಿನ ಪ್ರಜ್ಞಾವಂತ ನಾಗರಿಕರ ವೇದಿಕೆ ಕಾರ್ಯಕರ್ತರು ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿ ಹಂಚಿ, ಅಡ್ವಾಣಿ ಪರ ಘೋಷಣೆ ಕೂಗಿ ಸಂಭ್ರಮ ವ್ಯಕ್ತಪಡಿಸಿದರು.

ಮೈಸೂರು: ದೇಶದ ಹಿರಿಯ ರಾಜಕೀಯ ಮುತ್ಸದ್ದಿ ಲಾಲ್ ಕೃಷ್ಣ ಅಡ್ವಾಣಿಯವರಿಗೆ ಭಾರತರತ್ನ ಲಭಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಮೈಸೂರಿನ ಪ್ರಜ್ಞಾವಂತ ನಾಗರಿಕರ ವೇದಿಕೆ, ಅಗ್ರಹಾರದ ನೂರೊಂದು ಗಣಪತಿ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿ ಹಂಚಿ, ಅಡ್ವಾಣಿ ಪರ ಘೋಷಣೆ ಕೂಗಿ ಸಂಭ್ರಮ ವ್ಯಕ್ತಪಡಿಸಿತು.

ಈ ವೇಳೆ ಬಿಜೆಪಿ ಮುಖಂಡ ರಾಕೇಶ್ ಭಟ್ ಮಾತನಾಡಿ ಬ್ರಿಟಿಷ್ ಹಾಗೂ ಮೊಘಲರ ಆಡಳಿತದಲ್ಲಿ ನಲುಗಿದ್ದ ಭಾರತ ಸ್ವಾತಂತ್ರ್ಯದ ನಂತರ ತನ್ನ ಮೂಲ ಅಸ್ಮಿತೆಯೊಂದಿಗೆ ಗುರುತಿಸಿಕೊಳ್ಳಲು ತವಕಿಸುತ್ತಿತ್ತು. ಅಂತಹ ಸಂದರ್ಭದಲ್ಲಿ ಜನರ ಭಾವನೆಗೆ ಬೆಲೆ ಕೊಟ್ಟು ಹೋರಾಟಕ್ಕಿಳಿದು ದೇಶಾದ್ಯಂತ ರಥಯಾತ್ರೆ ನಡೆಸಿದಂತಹವರು ಅಡ್ವಾಣಿಯವರು. ಅವರ ಸುದೀರ್ಘ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ಅವರಿಗೆ 'ಭಾರತರತ್ನ' ನೀಡಿರುವುದು ನಿಜಕ್ಕೂ ಸಮಸ್ತ ಭಾರತೀಯರಿಗೆ ಸಂತಸ ತಂದಿದೆ ಎಂದು ನುಡಿದರು. ಈ ವೇಳೆ ನಿಕಟಪೂರ್ವ ಪಾಲಿಕೆ ಸದಸ್ಯರಾದ ಮಾ.ವಿ.ರಾಮ್‌ಪ್ರಸಾದ್, ಕೆ.ಜೆ.ರಮೇಶ್, ಅಪೂರ್ವ ಸುರೇಶ್, ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕರಾದ ಎಂ ಆರ್ ಬಾಲಕೃಷ್ಣ, ಬಿಜೆಪಿ ಮುಖಂಡರಾದ ರಾಕೇಶ್ ಭಟ್, ಕಡಕೋಳ ಜಗದೀಶ್, ಅಜಯ್ ಶಾಸ್ತ್ರಿ, ಸುಚೇಂದ್ರ, ಹೊಯ್ಸಳ ಕರ್ನಾಟಕ ನಿರ್ದೇಶಕರಾದ ರಂಗನಾಥ್, ವಿಜಯ್ ಕುಮಾರ್, ಚಕ್ರಪಾಣಿ, ಆನಂದ್ ಇನ್ನಿತರರಿದ್ದರು.

ರಾಮರಥದ ಸಾರಥಿಗೆ 'ಭಾರತರತ್ನ'

ಮೈಸೂರು: ಭಾರತದ ಸಂಸತ್‌ಗೆ ಬಹು ದೊಡ್ಡ ಘನತೆ ತಂದುಕೊಟ್ಟ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿದ ದೇಶ ಕಂಡ ಶ್ರೇಷ್ಠ ರಾಜಕಾರಣಿ ಮಾಜಿ ಉಪ ಪ್ರಧಾನಿ ಲಾಲ್‌ಕೃಷ್ಣ ಅಡ್ವಾಣಿಯವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಭಾರತರತ್ನ' ಲಭಿಸಿರುವುದು ಕೋಟ್ಯಾಂತರ ಭಾರತೀಯರಿಗೆ ಅತೀವ ಹರ್ಷವನ್ನುಂಟು ಮಾಡಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜ್‌ಗೌಡ ತಿಳಿಸಿದ್ದಾರೆ.

ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆಗಾಗಿ ತಮ್ಮ ಇಡೀ ಜೀವನವನ್ನು ಸಮರ್ಪಿಸಿಕೊಂಡ ತಪಸ್ವೀ ರಾಜಕಾರಣಿ, ಬಿಜೆಪಿ ಕಂಡ ಶ್ರೇಷ್ಠ ನೇತಾರ ಲಾಲ್‌ಕೃಷ್ಣ ಅಡ್ವಾಣಿಜೀ ಅವರು ತಮ್ಮ ಸಾಧನೆ ಹಾಗೂ ಹೋರಾಟಕ್ಕೆ ಜೀವತಾವಧಿಯಲ್ಲೇ 'ಭಾರತರತ್ನ' ಪಡೆಯುತ್ತಿರುವುದು ವಿಶೇಷವಾಗಿದೆ. ಇಂಥಾ ಮಹತ್ವದ ನಿರ್ಧಾರ ಕೈಗೊಂಡ ಪ್ರಧಾನಿ ನರೇಂದ್ರ ಮೋದಿಜೀ ಅವರ ಸರ್ಕಾರಕ್ಕೆ ಅನಂತ ಧನ್ಯವಾದಗಳನ್ನು ಸಲ್ಲಿಸುವುದಾಗಿ ಹೇಳಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಂದೆ : "ಮಗ ಪರೀಕ್ಷೆಗೆ ಏಕೆ ಹೋಗಿಲ್ಲ?"
ಮಗ : "ಪ್ರಶ್ನೆ ಪತ್ರಿಕೆ ಬಹಳ ಕಷ್ಟ ಇತ್ತು ಅಂತಾ...!"
ತಂದೆ : "ಇಲ್ಲೇ ಕುಳಿತು ಅದು ಹೇಗೆ ಹೇಳ್ತೀಯಾ ಕಷ್ಟ ಇತ್ತು ಅಂತಾ?"
ಮಗ : "ಏಕೆಂದರೆ ಎರಡು ದಿನ ಮೊದಲೇ ಲೀಕ್ ಆದ ಪ್ರಶ್ನೆ ಪತ್ರಿಕೆ ನನಗೂ ಸಿಕ್ಕಿತ್ತು!"

ಮೈಸೂರು ಮಿತ್ರ

ಭಾನುವಾರ, 4 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಶಾಸನಗಳು ಸಾಯುತ್ತವೆ, ಗ್ರಂಥಗಳಿಗೆ ಸಾವಿಲ್ಲ –ಒಲಿವರ್ ಲಿಟ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಿಶ್ವದಲ್ಲಿ ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರು ಜಾಸ್ತಿ

ನಿಮ್ಮ ಪತ್ರಗಳು

ಲೋಕಸೇವಾ ಆಯೋಗದಲ್ಲಿನ ಜಟಾಪಟಿ

ಮಾನ್ಯರೆ,

ಸಾಂವಿಧಾನಿಕ ಸಂಸ್ಥೆಯಾದ ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ನಡೆಯುತ್ತಿರುವ ಇತ್ತೀಚಿನ ಬೆಳವಣಿಗೆಗಳು ಕುತೂಹಲಕಾರಿಯಾಗಿದೆ. ಆಯೋಗದ ಅಧ್ಯಕ್ಷ ಮತ್ತು ಕಾರ್ಯದರ್ಶಿ ನಡುವೆ ನಡೆಯುತ್ತಿರುವ ಶೀಥಲ ಸಮರ ಆಯೋಗದ ಪ್ರಮುಖ ಕಾರ್ಯಗಳಿಗೆ ಅಡ್ಡಿಯಾಗಿದೆ. ರಾಜ್ಯ ಲೋಕಸೇವಾ ಆಯೋಗದ ಬಗೆಗಿನ ದೂರುಗಳು ದಶಕಗಳ ಕಾಲದಿಂದಲೂ ಕೇಳಿ ಬರುತ್ತಿದೆ. ಅಲ್ಲಿ ನಡೆಯುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಪರಿಕ್ಷಾ ಅಕ್ರಮ, ಮುಂತಾದವು ಆಯೋಗದ ವರ್ಚಸ್ಸನ್ನು ಸಾಕಷ್ಟು ಹಾಳುಮಾಡಿದೆ. ಲೋಕಸೇವಾ ಆಯೋಗದ ಅಧ್ಯಕ್ಷರನ್ನು ರಾಜ್ಯಪಾಲರು ಸಚಿವ ಸಂಪುಟದ ಸಲಹೆಯ ಮೇರೆಗೆ ನೇಮಕ ಮಾಡುತ್ತಾರೆ. ಇದೊಂದು ರಾಜಕೀಯ ನೇಮಕಾತಿಯಾಗಿದ್ದು, ಪ್ರಭಾವಿ ವ್ಯಕ್ತಿಗಳು ಆಳುವ ಪಕ್ಷದ ಅಥವಾ ಮುಖ್ಯಮಂತ್ರಿಯ ಕೃಪಾಕಟಾಕ್ಷದಿಂದ ಈ ಹುದ್ದೆಗೆ ನೇಮಕಗೊಳ್ಳುತ್ತಾರೆ. ಆದರೆ, ಆಯೋಗದ ಕಾರ್ಯದರ್ಶಿಯಾಗಿ ಸಾಮಾನ್ಯವಾಗಿ ಐಎಎಸ್ ಅಥವಾ ಕೆಎಎಸ್ ಅಧಿಕಾರಿಗಳಾಗಿದ್ದು, ಆಯೋಗದ ಸಾರಥಿಯಂತೆ ಇವರು ಕೆಲಸ ಮಾಡುತ್ತಾರೆ.

ಆಯೋಗದಲ್ಲಿ ಈಗ ಬುಗಿಲೆದ್ದಿರುವ ವಿವಾದ ಏನೆಂದರೆ, ಆಯೋಗದ ಕಾರ್ಯದರ್ಶಿ ಕೆ.ಎಸ್.ಲತಾಕುಮಾರಿ, ರಾಜ್ಯಪಾಲರಿಗೆ ಪತ್ರ ಬರೆದು ಆಯೋಗದ ಅಧ್ಯಕ್ಷ ಮತ್ತು ನಾಲ್ಕು ಮಂದಿ ಸದಸ್ಯರನ್ನು ವಜಾ ಮಾಡುವಂತೆ ಒತ್ತಾಯಿಸಿದ್ದಾರೆ. ಲೋಕ ಸೇವಾ ಆಯೋಗದ ಕಾರ್ಯದರ್ಶಿಯೊಬ್ಬರು ಅಧ್ಯಕ್ಷ ಮತ್ತು ಇತರ ಕೆಲವು ಸದಸ್ಯರನ್ನು ವಜಾಗೊಳಿಸುವಂತೆ ಕೋರಿರುವುದು ರಾಜ್ಯದ ಇತಿಹಾಸದಲ್ಲಿ ಇದೇ ಮೊದಲಾಗಿದೆ. ಆಯ್ಕೆ ಪಟ್ಟಿಗೆ ಅನುಮೋದನೆ ನೀಡದಿರುವ ಮೂಲಕ ಅಧ್ಯಕ್ಷ ಮತ್ತು ಇತರ ಸದಸ್ಯರು ಕರ್ತವ್ಯ ಲೋಪ ಎಸಗಿದ್ದಾರೆಂದು ಆಯೋಗದ ಕಾರ್ಯದರ್ಶಿ ದೂರಿದ್ದಾರೆ. ಲೋಕಸೇವಾ ಆಯೋಗದ ಒಳಜಗಳ ಹಾದಿ ರಂಪ ಬೀದಿ ರಂಪವಾಗಿರುವುದು ದುರದೃಷ್ಟಕರವಾಗಿದೆ. ರಾಜ್ಯ ಸರ್ಕಾರದ ಮದ್ಯ ಪ್ರವೇಶಕ್ಕೆ ಇದು ಸಕಾಲವಾಗಿದೆ.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕಟ್ಟುನಿಟ್ಟಿನ ಕ್ರಮವಿದ್ದರೂ, ಪರೀಕ್ಷಾ ಕೇಂದ್ರದಲ್ಲಿ ಅಕ್ರಮದ ಜಾಲ

ಮಾನ್ಯರೆ,

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಎರಡು ದಿನಗಳ ಕಾಲ ರಾಜ್ಯದಲ್ಲಿ ನಡೆದ ಕರ್ನಾಟಕ ಸರ್ಕಾರದ ವಿವಿಧ ನಿಗಮ ಮಂಡಳಿಗಳಲ್ಲಿ ಖಾಲಿ ಇರುವ ಎಫ್‌ಡಿಎ ಮತ್ತು ಎಸ್‌ಡಿಎ ಹುದ್ದೆಗಳ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ. ಮೊದಲನೇ ದಿನದ ಎಫ್‌ಡಿಎ ಹುದ್ದೆಗೆ ನಡೆದ ಲಿಖಿತ ಪರೀಕ್ಷೆಯಲ್ಲಿ ಕಲ್ಬುರ್ಗಿ ಪರೀಕ್ಷಾ ಕೇಂದ್ರವೊಂದರಲ್ಲಿ ಬ್ಲೂಟೂತ್ ಬಳಕೆ ಮಾಡಿ ಪರೀಕ್ಷೆ ಬರೆಯುತ್ತಿದ್ದ ವ್ಯಕ್ತಿಗಳನ್ನು ಪತ್ತೆ ಮಾಡಿ ಪೊಲೀಸ್ ವಶಕ್ಕೆ ನೀಡಲಾಗಿದೆ. ಸರ್ಕಾರ ಇಂತಹ ಕಾನೂನು ಬಾಹಿರ ಘಟನೆಗಳು ನಡೆಯಬಾರದು ಎಂದು ಎಷ್ಟೇ ಸೂಕ್ತ ಪೂರ್ವ ನಿಯೋಜಿತ ಕಟ್ಟುನಿಟ್ಟಿನ ಕ್ರಮಗಳನ್ನು ವಹಿಸಿದರೂ ಹೇಗೇ ಇಂತಹ ಅಕ್ರಮಗಳು ನಡೆಯುತ್ತದೆ ಎಂಬುದೇ ಅಚ್ಚರಿಯ ವಿಷಯವಾಗಿದೆ. ಸಿಕ್ಕಿ ಬಿದ್ದ ಆರೋಪಿಗಳನ್ನು ಸೂಕ್ಷ್ಮತೆಯಿಂದ ತನಿಖೆ ಮಾಡಿ ಇದರ ಹಿಂದೆ ಇರುವ ಅಕ್ರಮದ ಜಾಲವನ್ನು ಬೇಧಿಸಿ ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸಿ ಹಾಗೂ ಪ್ರಮಾಣಿಕವಾಗಿ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳು ಆತಂಕಕ್ಕೆ ಒಳಗಾಗದೇ ಇರುವ ರೀತಿಯಲ್ಲಿ ಶೀಘ್ರವಾಗಿ ನ್ಯಾಯವನ್ನು ಒದಗಿಸಬೇಕಾಗಿದೆ.

– ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ

ಆಡುವ ಮಾತುಗಳ ಬಗ್ಗೆ ಎಚ್ಚರವಿರಲಿ

ಮಾನ್ಯರೆ,

ಇತ್ತೀಚೆಗೆ ಕೆಲವು ರಾಜಕೀಯ ಪಕ್ಷಗಳ ನಾಯಕರುಗಳು ಆಡುತ್ತಿರುವ ಮಾತುಗಳು ನಾಗರಿಕ ಸಮಾಜ ತಲೆ ತಗ್ಗಿಸುವಂತಹದ್ದು. ಕಳೆದ ವಾರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಂಘಟನೆಯೊಂದು ಆಯೋಜಿಸಿದ್ದ ಬಹಿರಂಗ ಸಭೆಯಲ್ಲಿ ದೇಶದ ಪ್ರಥಮ ಪ್ರಜೆ ಗೌರವಾನ್ವಿತ ರಾಷ್ಟ್ರಪತಿ ಅವರನ್ನು ಅವಳು–ಇವಳು ಎಂದು ಏಕವಚನ ಪ್ರಯೋಗಿಸಿದ್ದು, ಮುಖ್ಯಮಂತ್ರಿ ಹುದ್ದೆಯಲ್ಲಿರುವವರಿಗೆ ಗೌರವವಾದುದ್ದಲ್ಲ.

ಇದಕ್ಕೆ ಪ್ರತಿಯಾಗಿ ನಾವೇನು ಕಡಿಮೆ ಇಲ್ಲ ಎಂಬಂತೆ ರಾಜ್ಯದ ಬಿಜೆಪಿ ನಾಯಕರೊಬ್ಬರು, ಸಿದ್ದರಾಮಯ್ಯ ಅವರನ್ನು ಕುರಿತು, ಅವನೊಬ್ಬ '.........' ಎಂದು ಬಹಿರಂಗವಾಗಿ ಹೇಳಿರುವುದು, ಸಾರ್ವಜನಿಕರ ಜೀವನದಲ್ಲಿರುವ ನಾವು ಹೇಗೆ ನಡೆದುಕೊಳ್ಳಬೇಕು ಎಂಬ ಕನಿಷ್ಠ ಜ್ಞಾನವೂ ಇಲ್ಲವಾಯಿತೆ? ರಾಜಕಾರಣದಲ್ಲಿ ಆರೋಪ ಮತ್ತು ಪ್ರತ್ಯಾರೋಪ ಸಹಜ. ಆದರೆ ಅದು ಅತಿರೇಕಕ್ಕೆ ಹೋದಾಗ ಸಾರ್ವಜನಿಕರು ನಿಮ್ಮ ಮೇಲಿಟ್ಟಿರುವ ಗೌರವನ್ನೇ ಹಾಳುಮಾಡಿಕೊಳ್ಳುವಿರಿ. ಕೆಲವು ದೃಶ್ಯ ಮಾಧ್ಯಮಗಳಂತೂ ಇಂತಹ ಕೆಲಸಕ್ಕೆ ಬಾರದ ಘಟನೆಗಳನ್ನು ಆಗಾಗ್ಗೆ ಪ್ರಸಾರ ಮಾಡುವ ಮೂಲಕ ನಿಮ್ಮನ್ನು ಸಾರ್ವಜನಿಕವಾಗಿ ವಿಲನ್ ಮಾಡಲು ಹೊರಟಿವೆ. ಇನ್ನು ಮುಂದಾದರೂ, ಸಾರ್ವಜನಿಕರ ಮುಂದೆ ನೀವುಗಳು ಆಡುವ ಮಾತುಗಳ ಬಗ್ಗೆ ಎಚ್ಚರವಿರಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ರಸ್ತೆ ಡುಬ್ಬಗಳಿಗೆ ಆಗಾಗ ಬಿಳಿ ಬಣ್ಣವನ್ನು ಬಳಿಯುತ್ತಿರಬೇಕು

ಮಾನ್ಯರೆ,

ರಸ್ತೆಯಲ್ಲಿ ಅಪಘಾತವನ್ನು ತಡೆಗಟ್ಟಲು ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದು. ಅದರಲ್ಲಿ ಕೆಲವು ಯಶಸ್ವಿಯಾಗಿದೆ ವಾಹನದ ವೇಗದ ಮಿತಿಯನ್ನು ತಡೆಯಲು ರಸ್ತೆಗಳಲ್ಲಿ ಹಲವಾರು ಕಡೆ ಡುಬ್ಬಗಳನ್ನು ನಿರ್ಮಿಸಿ ಬಿಳಿಪಟ್ಟೆಯನ್ನು ಡುಬ್ಬದ ಮೇಲೆ ಬಳೆದಿರುತಾರೆ. ಇದರಿಂದ ಸವಾರರಿಗೂ ವೇಗದ ಮಿತಿ ಕಡಿಮೆ ಮಾಡಲು ಅನುಕೂಲವಾಗುತ್ತದೆ. ಅಪಘಾತವು ತಡೆಗಟ್ಟಿದಂತಾಗುತ್ತದೆ. ಆದರೆ ಪ್ರಮುಖ ರಸ್ತೆಗಳಲ್ಲಿ ವಾಹನಗಳು ಹೆಚ್ಚಾಗಿ ಓಡಾಡುವುದರಿಂದ ಡುಬ್ಬದ ಮೇಲಿನ ಬಿಳಿ ಪಟ್ಟೆ ಮಾಸಿಹೋಗುತ್ತದೆ.ಇದರಿಂದ ವಾಹನ ಸವಾರರಿಗೆ ಡುಬ್ಬ ಬಂದಾಗ ಅಪಘಾತ ಆಗುವ ಸಂಭವವಿರುತ್ತದೆ. ಆದ್ದರಿಂದ ಪ್ರಮುಖ ರಸ್ತೆಗಳನ್ನು ಆಗಾಗ ಪರೀಕ್ಷಿಸಿ ಬಿಳಿ ಪಟ್ಟೆಯನ್ನು ಡುಬ್ಬದ ಮೇಲೆ ಬಳಿಯುತ್ತಿರಬೇಕು. ಇದರಿಂದಲೂ ಸಹ ಅಪಘಾತವನ್ನು ತಡೆಗಟ್ಟಬಹುದು. ಸಾರ್ವಜನಿಕರು ಯಾವುದೇ ಕುಂದು ಕೊರತೆ ಇದ್ದರೂ ಗಮನಕ್ಕೆ ತಂದರೆ ಅಪಘಾತವು ಸಾವು ನೋವುಗಳು ತಡೆಗಟ್ಟಿದಂತಾಗುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

ಗಂಧನಹಳ್ಳಿ ಜಹಗೀರುದಾರ್ ಕೃಷ್ಣರಾವ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ಇಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ನಾಲ್ವಡಿ ಕೃಷ್ಣರಾಜ ಒಡೆಯರೂ ಸೇರಿದಂತೆ ಸುಮಾರು ಎರಡು ಶತಮಾನಗಳ ದೀರ್ಘ ಕಾಲ ಮೈಸೂರು ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತ ಬಂದಿದ್ದ ಒಂದೇ ಪೀಳಿಗೆಯವರು ಕಡಿಮೆಯೇ ಎನ್ನಬೇಕು. ನಿಷ್ಠಾವಂತರಾಗಿ ಧೈರ್ಯ, ಪ್ರಾಮಾಣಿಕತೆಯಿಂದ, ಸೇನೆಯಲ್ಲಿ ಸಾಹಸ–ಪರಾಕ್ರಮ ತೋರಿಸಿ ಈ ಮನೆತನದವರು ಸೇವೆ ಸಲ್ಲಿಸಿ ತಮ್ಮ ಒಡೆಯರ ಹಾಗೂ ಬ್ರಿಟಿಷರ ಮೆಚ್ಚುಗೆ ಗಳಿಸಿದರು. ಇವರೆಂದರೆ ಖ್ಯಾತರಾಗಿದ್ದ ಗಂಧನಹಳ್ಳಿಯ ಜಹಗೀರುದಾರರು.

ಅವರುಗಳ ಪೈಕಿ ಕೊನೆಯ ಜಹಗೀರುದಾರರು ಕೃಷ್ಣರಾವ್. ವೆಂಕಟರಾವ್ ಅವರ ಪುತ್ರರಾದ ಇವರು ಶಿಕ್ಷಣ ಮುಗಿಸಿ ಬೊಂಬಾಯಿ ರಾಜ್ಯದಲ್ಲಿ ಕಂದಾಯ ಇಲಾಖೆ ಸೇವೆಗೆ ಸೇರಿದರು. ತಮ್ಮ ತಂದೆಯವರು ನಿಧನರಾದ ನಂತರ ವಂಶಪಾರಂಪರ್ಯವಾಗಿ ಬಂದಿದ್ದ ಜಹಗೀರಿನ ಜವಾಬ್ದಾರಿಯನ್ನು ವಹಿಸಿಕೊಂಡರು. ಗ್ರಾಮೀಣ ಜನರ ಬಗ್ಗೆ ಪ್ರಾತಿಪರ ನಿಲುವು ಹೊಂದಿದ್ದ ಅವರು ಜಹಗೀರಿನ ಗ್ರಾಮಗಳಲ್ಲಿ ಉತ್ತಮ ರಸ್ತೆಗಳು, ಗಾಡಿ ರಸ್ತೆಗಳ ಉತ್ತಮ ನಿರ್ವಹಣೆ, ಗ್ರಾಮಗಳ ಮಕ್ಕಳಿಗಾಗಿ ಶಾಲೆಗಳ ಸ್ಥಾಪನೆ, ಗ್ರಾಮಗಳ ಜನರ ಆರೋಗ್ಯ ಕಾಪಾಡಲು ಆಯುರ್ವೇದ ವೈದ್ಯರು, ಗರ್ಭಿಣಿ ಸ್ತ್ರೀಯರ ಸಹಾಯಕ್ಕಾಗಿ ಶುಶ್ರೂಷಕಿಯರು, ಮಕ್ಕಳ ಕ್ಷೇಮಪಾಲನೆ ಇತ್ಯಾದಿ ಅನುಕೂಲಗಳನ್ನು ಮಾಡಿಕೊಟ್ಟರು. ಗ್ರಾಮದವರ ಸಹಾಯದಿಂದ ಗಂಧನಹಳ್ಳಿಯಲ್ಲಿ ಮಾರುತಿ ದೇವಸ್ಥಾನ ಮತ್ತು ದೆಗ್ಗನಹಳ್ಳಿಯಲ್ಲಿ ಬಸವೇಶ್ವರ ದೇವಸ್ಥಾನ ಕಟ್ಟಿಸಿ ಕೊಟ್ಟರು. ತಮ್ಮ ಸೇವಾ ಕಾರ್ಯಗಳಿಂದ ಗ್ರಾಮಗಳ ಜನತೆಯ ಗೌರವ–ವಿಶ್ವಾಸಗಳನ್ನು ಗಳಿಸಿದರು. ಜಹಗೀರುದಾರರಾಗಿ ಇವರು ಹೊಂದಿದ್ದ ದೂರ ದೃಷ್ಟಿ, ರೈತರೊಂದಿಗೆ ಹೊಂದಿದ್ದ ಬಾಂಧವ್ಯ ಮತ್ತು ಅಲ್ಲಿ ಉಂಟಾಗಿದ್ದ ಸುಮಧುರ ವಾತಾವರಣವನ್ನು ಮೆಚ್ಚಿದ ಸರ್ಕಾರ ಇವರಿಗೆ ಜಿಲ್ಲಾಧಿಕಾರಿಗಳ ಅಧಿಕಾರವನ್ನು ಕೊಟ್ಟು, ಕಂದಾಯ ವ್ಯವಹಾರಗಳನ್ನು ನೋಡಿಕೊಳ್ಳುವಂತೆ ನೇಮಿಸಿತು.

ಜಹಗೀರಿನ ಆಡಳಿತ ನಿರ್ವಹಣೆಯಲ್ಲಿಯೂ ಅವರು ಇಂತಹುದೇ ಸೌಹಾರ್ದ ಮನೋಭಾವದಿಂದ ವರ್ತಿಸಿ ಕಾಲಕಾಲಕ್ಕೆ ಕಂದಾಯ ಪಾವತಿ, ಸಮರ್ಪಕ ಲೆಕ್ಕಾಚಾರ, ಗ್ರಾಮದ ಕೆರೆಗಳ ಶುಚಿತ್ವ ಇತ್ಯಾದಿ ಕಾರ್ಯಗಳಲ್ಲಿ ಗ್ರಾಮಸ್ಥರ ಸಹಕಾರ–ಸಹಾಯ ಪಡೆದು ಕಾರ್ಯನಿರ್ವಹಿಸಿ ಮಾದರಿಯ ಜಹಗೀರುದಾರರು ಎಂದು ಹೆಸರು ಪಡೆದರು.

ಕೃಷ್ಣರಾಜಸಾಗರ ಅಣೆಕಟ್ಟು ಕಟ್ಟುವಾಗ ಗಂಧನಹಳ್ಳಿಯ ಒಂದು ಗ್ರಾಮ ದೆಗ್ಗನಹಳ್ಳಿಯ ಜಮೀನುಗಳು ನೀರಿನಲ್ಲಿ ಮುಳುಗಡೆಯಾಗಿ ರೈತರು ಜಮೀನನ್ನು ಕಳೆದುಕೊಳ್ಳಬೇಕಾಯಿತು. ಆಗ ಸುಮಾರು 350 ಎಕರೆ ಕೃಷಿ ಭೂಮಿ ನೀರಿನಲ್ಲಿ ಮುಳುಗಿತು. ಸರ್ಕಾರ ಜಮೀನು ಕಳೆದುಕೊಂಡ ರೈತರ ಪುನರ್ವಸತಿ ಕಾರ್ಯದ ಹೊಣೆಗಾರಿಕೆಯನ್ನು ಕೃಷ್ಣರಾಯರಿಗೆ ವಹಿಸಿತು. ತಮ್ಮ ಜಹಗೀರುದಾರರಲ್ಲಿ ಅಪಾರ ನಂಬಿಕೆಯಿದ್ದ ಆ ಗ್ರಾಮದ ಜನ ತಮಗೆ ಸರ್ಕಾರ ಕೊಡುವ ಪರಿಹಾರ ಧನ ಹಾಗೂ ಭೂಮಿಯ ಹಂಚಿಕೆಯ ಕಾರ್ಯವನ್ನು ಕೃಷ್ಣರಾವ್ ಅವರಿಗೇ ವಹಿಸುವಂತೆ ಸರ್ಕಾರವನ್ನು ಕೋರಿದರು. ಸರ್ಕಾರ ಆ ಜನರ ಪುನರ್ವಸತಿಗಾಗಿ ಎತ್ತರದ ಜಾಗದಲ್ಲಿ ಭೂಮಿಯನ್ನು ವಶಕ್ಕೆ ತೆಗೆದುಕೊಂಡಿತು. ಜಹಗೀರುದಾರ ಕೃಷ್ಣರಾಯರು ತಮ್ಮ ಖರ್ಚಿನಲ್ಲಿ ಅವರಿಗೆ ಅಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರಲ್ಲದೆ ಜಮೀನಿನ ಹಂಚಿಕೆಯೂ ತಾರತಮ್ಯವಿಲ್ಲದೆ ನಡೆಯುವಂತೆ ನೋಡಿಕೊಂಡರು. ಅಲ್ಲದೆ ಅಲ್ಲಿ ವಾಸಿಸುವವರಿಗೆ ಬಾವಿಗಳು ಮತ್ತು ಚರಂಡಿ ಸೌಲಭ್ಯ ಕಲ್ಪಿಸಿಕೊಟ್ಟು, ನೆರವಾದರು.

ಅವರ ಕಳಂಕ ರಹಿತ ಸೇವೆಯನ್ನು ಮೆಚ್ಚಿದ ಮಹಾರಾಜರ ಸರ್ಕಾರ, ಕೃಷ್ಣರಾವ್ ಅವರನ್ನು ಮೈಸೂರು ನಗರದ ಬ್ರಾಂಚ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿತು. ಅಧಿಕೃತ ನ್ಯಾಯಾಧೀಶರುಗಳು ನೇಮಕವಾಗುವವರೆಗೆ ಅವರು ಸುಮಾರು ಇಪ್ಪತ್ತು ವರ್ಷಗಳು ಈ ಗೌರವ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದರು. ಅಂದು ಮಹಾರಾಜರು ನಡೆಸುವ ದರ್ಬಾರುಗಳಿಗೆ ಬರುವವರು 'ಕಮ್ಮರ್ ಬಂದ್', ಅಂದರೆ ಸೊಂಟಪಟ್ಟಿ ತಪ್ಪದೆ ಕಟ್ಟಿಕೊಂಡು ಬರಬೇಕಿತ್ತು. ಆದರೆ ಮಹಾರಾಜರು ಕೃಷ್ಣರಾವ್ ಅವರಿಗೆ ವಿನಾಯಿತಿ ನೀಡಿದರು. ಇದಲ್ಲದೆ 'ಕರಹಾರ', ಅಂದರೆ ಕಂಠೀಹಾರ ಒಂದನ್ನು ಕೊಟ್ಟು ಗೌರವಿಸಿದರು.

1956ರಲ್ಲಿ ಜಹಗೀರ್ ಮತ್ತು ಇನಾಂ ಪದ್ಧತಿಗಳು ರದ್ದಾಗಿ, ಅವರೂ ತಮ್ಮ ಜಹಗೀರನ್ನು ಕಳೆದುಕೊಳ್ಳಬೇಕಾಯಿತು. ಕೃಷ್ಣರಾವ್ ಸುಮಾರು ಐದು ದಶಕಗಳವರೆಗೆ ಜಹಗೀರ್‌ದಾರರಾಗಿದ್ದು, ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿ ಜನರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. 93 ವರ್ಷಗಳವರೆಗೆ ಬದುಕಿದ್ದು 1969ರಲ್ಲಿ ನಿಧನರಾದರು. ಇವರ ಪೂರ್ವಜರು ಮೂಲತಃ ಅಂದು ಬೊಂಬಾಯಿ ಪ್ರೆಸಿಡೆನ್ಸಿಗೆ ಸೇರಿದ್ದ ಬಿಜಾಪುರ ಜಿಲ್ಲೆಯವರು. ಆದಿಲ್‌ಶಾಹಿ ಸಾಮ್ರಾಜ್ಯದ ಬಾದ್‌ಷಾ ಕೈಕೆಳಗೆ ಕರ್ತವ್ಯ ನಿರ್ವಹಿಸಿದ್ದರು. ಆಗಲೇ ಇನಾಂ ಒಂದು ಅವರಿಗೆ ಮಂಜೂರಾಗಿತ್ತು. ಇವರುಗಳ ಪೈಕಿ ವೆಂಕಟರಾವ್ ಎಂಬುವರು ಮೈಸೂರು ಸೀಮೆಗೆ ಸ್ಥಳಾಂತರಗೊಂಡು ಇಮ್ಮಡಿ ಕೃಷ್ಣರಾಜ ಒಡೆಯರ ಅವಧಿಯಲ್ಲಿ (1734–1766) ರಾಜ್ಯದ ಸೇವೆಗೆ ಸೇರಿದರು.

ಮೈಸೂರು ಸೈನ್ಯದಲ್ಲಿ ಹಲವಾರು ಹುದ್ದೆಗಳಲ್ಲಿ ಅವರ ಗಮನಾರ್ಹ ಸೇವೆಯನ್ನು ಗಮನಿಸಿದ ಮಹಾರಾಜರು ವೆಂಕಟರಾವ್ ಅವರನ್ನು ಎರಡನೇ ಮುಖ್ಯ ಮಂತ್ರಿಯನ್ನಾಗಿ, ಅಂದರೆ ದಿವಾನ್ ಪದವಿಯಲ್ಲಿ ನೇಮಿಸಿದರು. ಆಗ ಹೈದರ್ ಆಲಿ ಮಹಾರಾಜರ ಕೆಳಗೆ ಸೈನ್ಯದ ಮುಖ್ಯಸ್ಥನಾಗಿದ್ದ. ವೆಂಕಟರಾವ್ ಹೈದರ್ ಕೈ ಕೆಳಗೆ ಸೇವೆ ಸಲ್ಲಿಸುತ್ತಾ ಅವನ ಜೊತೆ ಹಲವಾರು ಭಾಗಗಳಿಗೆ ಹೋಗಿ ಅಲ್ಲಿನ ದಂಗೆಗಳನ್ನು ಅಡಗಿಸುವುದರ ಜೊತೆಗೆ ಪಾಳೇಗಾರರ ಸೊಕ್ಕನ್ನು ಮುರಿಯಲು ನೆರವಾದರು. ಖಂಡೇರಾವ್ ಹೈದರ್ ವಿರುದ್ಧ ದಂಗೆ ಎದ್ದಾಗ ಅವನನ್ನು ಸೆರೆ ಹಿಡಿಯಲು ವೆಂಕಟರಾವ್ ಹೈದರಾಲಿಗೆ ನೆರವಾದರು. ಮರಾಠರ ಮಾಧವರಾವ್ ಮೈಸೂರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ವೆಂಕಟರಾವ್ ಅವನ ಪ್ರಯತ್ನವನ್ನು ವಿಫಲಗೊಳಿಸಿದರು (1761). ಅವರು ಹೈದರ್ ಜೊತೆ ಹೋಗಿದ್ದಾಗ ಆನವಟ್ಟಿಯಲ್ಲಿ ಎರಡು ಸೈನ್ಯಗಳ ಘರ್ಷಣೆಯಲ್ಲಿ ಖಡ್ಗವನ್ನು ಹಿಡಿದು ಹೋರಾಡುತ್ತಿದ್ದ ವೆಂಕಟರಾವ್ ಹತರಾದರು.

ಆ ವೇಳೆಗೆ ಅವರ ಹಿರಿಯ ಮಗ ಬಾಲಾಜಿರಾವ್ ಮೈಸೂರಿನ ಸೈನ್ಯ ಸೇರಿದ್ದರು. ತಮ್ಮ ತಂದೆಯ ನೇತೃತ್ವದಲ್ಲಿ ನಡೆದ ಪಾಳೇಗಾರರ ವಿರುದ್ಧದ ಕಾರ್ಯಾಚರಣೆಗಳಲ್ಲಿ ಅವರೂ ಭಾಗವಹಿಸಿದ್ದರು. ಊಟ್ಟಂಪಾಳಿಯಂನ ರಾಮನಾಯಕ್ ದಿಂಡಿಗಲ್ಲಿನಲ್ಲಿ ಉಪಟಳ ಪ್ರಾರಂಭಿಸಿದಾಗ ಅದನ್ನು ತುಳಿದು ಹಾಕುವುದಕ್ಕಾಗಿ ಬಾಲಾಜಿರಾವ್ ಅವರನ್ನು ಕಳುಹಿಸಲಾಯಿತು. ಅವರು ಅಲ್ಲಿಗೆ ಹೋಗಿ ಅವನ ದಂಗೆಯನ್ನು ಅಡಗಿಸಿ, ಅವನ ಪ್ರದೇಶವನ್ನೆಲ್ಲಾ ಮೈಸೂರು ರಾಜ್ಯಕ್ಕೆ ಸೇರಿಸಿದರು. ಆದರೆ ದುರದೃಷ್ಟವಶಾತ್ ಧಾರಾಪುರದ ಬಳಿಯ ಕಾರ್ಯಾಚರಣೆಯ ಅಂತಿಮ ಘಟ್ಟದಲ್ಲಿ ಅವರು ಸಾವಿಗೆ ಸಿಕ್ಕಿದರು. ಅವರ ಧೈರ್ಯ ಸಾಹಸಗಳನ್ನು ಮೆಚ್ಚಿ ಅವರ ಪುತ್ರ ಶ್ರೀನಿವಾಸರಾವ್ ಅವರಿಗೆ ದಿಂಡಿಗಲ್ ಬಳಿಯ ಗ್ರಾಮಗಳನ್ನು ಇನಾಂ ನೀಡಲಾಯಿತು. ಈ ಇನಾಂ ಗ್ರಾಮಗಳನ್ನು ಅವರ ಸಂತತಿಯವರು ಈಚಿನವರೆಗೆ ಅನುಭವಿಸಿಕೊಂಡು ಬಂದರು.

ಶ್ರೀನಿವಾಸರಾವ್ ಸೇವೆಗೆ ಸೇರಿದಾಗ ಇನ್ನೂ ಚಿಕ್ಕವರು. ಕ್ರಮೇಣ ಅಭಿವೃದ್ಧಿ ಸಾಧಿಸಿಕೊಂಡು ಬಂದು ತಾತ ದಿವಾನ್ ವೆಂಕಟರಾವ್ ಪಡೆದಿದ್ದ ದಿವಾನರ ಹುದ್ದೆಯನ್ನು ತಾವೂ ಗಳಿಸಿದರು. ವೆಂಕಟರಾವ್ ವೈನಾಡು ಮತ್ತು ಕ್ಯಾಲಿಕಟ್ಟಿನಲ್ಲಿ ಎದ್ದ ದಂಗೆಯನ್ನು ಅಡಗಿಸಿದ್ದಕ್ಕಾಗಿ ಅವರನ್ನು 1773ರಲ್ಲಿ ಕ್ಯಾಲಿಕಟ್ಟಿನ ಫೌಜುದಾರರನ್ನಾಗಿ ನೇಮಿಸಲಾಯಿತು.

ದಿವಾನ್ ವೆಂಕಟರಾವ್ ಅವರ ಎರಡನೇ ಪುತ್ರ ಅಣ್ಣಾಜಿರಾವ್ 1770ರಲ್ಲಿ ಮೈಸೂರು ಸಂಸ್ಥಾನದ ಸವಾರ್ ಕಚೇರಿಯಲ್ಲಿ ಶಿರಸ್ತೇದಾರರಾಗಿ ನೇಮಕಗೊಂಡರು. ಅದೇ ಅವಧಿಯಲ್ಲಿ ಅವರ ತಮ್ಮ ರಾಮರಾವ್ ಜಿಲ್ಲಾ ಕಚೇರಿಯ ಶಿರಸ್ತೇದಾರರಾದರು. ಇಬ್ಬರು ಸಹೋದರರೂ ಹೈದರಾಲಿಯ ಜೊತೆ ಮರಾಠರು, ಕರ್ನಾಟಕದ ನವಾಬರು ಮತ್ತು ಚಿತ್ರದುರ್ಗದ ಪಾಳೇಗಾರರ ಮೇಲಿನ (1779) ಯುದ್ಧಗಳಲ್ಲಿ ಭಾಗವಹಿಸಿದರು. ಅಣ್ಣಾಜಿರಾವ್ ಅವರ ಶೌರ್ಯವನ್ನು ಮೆಚ್ಚಿದ ಹೈದರ್ ಅವರಿಗೆ ಬೆಲೆ ಬಾಳುವ ಖಡ್ಗವೊಂದನ್ನು ಉಡುಗೊರೆಯಾಗಿ ನೀಡಿದ. ಹೈದರ್ ನಿಧನಾನಂತರ ಟಿಪ್ಪು ಸುಲ್ತಾನ್ ಅಧಿಕಾರದಲ್ಲಿದ್ದಾಗಲೂ ಅಣ್ಣಾಜಿರಾವ್ ಸವಾರ್ ಕಚೇರಿಯ ಶಿರಸ್ತೇದಾರರಾಗಿ ಮುಂದುವರಿದರು (1782). ಆ ಅವಧಿಯಲ್ಲಿ ನಡೆದ ಯುದ್ಧಗಳಲ್ಲಿ ಭಾಗವಹಿಸಿ ಶೌರ್ಯ ತೋರಿದರು. ಅವರ ಸಾಹಸವನ್ನು ಮೆಚ್ಚಿದ ಟೀಪು ಅವರಿಗೆ 'ಶಂಷೀರ್ ಬಹದ್ದೂರ್' ಬಿರುದು ನೀಡಿದ (1797).

ಟಿಪ್ಪುವಿನ ನಂತರ ಮುಮ್ಮಡಿ ಕೃಷ್ಣರಾಜರ ಅವಧಿಯಲ್ಲೂ ಅಣ್ಣಾಜಿರಾವ್ ಅವರ ಸೇವೆಯನ್ನು ಮುಂದುವರಿಸಲಾಯಿತು. ಸವಾರ್ ಕಚೇರಿಯ ಶಿರಸ್ತೇದಾರ್ ಹುದ್ದೆಯಲ್ಲಿಯೇ ಅವರನ್ನು ಮುಂದುವರಿಸಲಾದರೂ ಭಕ್ಷಿಯ ಪೂರ್ಣ ಅಧಿಕಾರವನ್ನು ಅವರಿಗೆ ವಹಿಸಲಾಯಿತು. ದಿವಾನ್ ಪೂರ್ಣಯ್ಯನವರು ಅಣ್ಣಾಜಿರಾವ್ ಅವರನ್ನು ಅರಗೂರಿನ ಪಾಳೇಗಾರ ಕೃಷ್ಣಪ್ಪ ನಾಯಕನನ್ನು ಹತೋಟಿಗೆ ತರಲು ಸೈನ್ಯ ಸಮೇತ ಕಳುಹಿಸಿದರು. ತೀವ್ರವಾಗಿ ನಡೆದ ಹೋರಾಟದಲ್ಲಿ ಶತ್ರು ಹಾರಿಸಿದ ಬುಲೆಟ್ ಒಂದು ಅವರ ಪೇಟದೊಳಕ್ಕೆ ಸೇರಿ ಅವರನ್ನು ರಕ್ಷಿಸಿತು. ಪಾಳೇಗಾರ ಸೆರೆ ಸಿಕ್ಕಿಬಿದ್ದ. ದಿವಾನ್ ಪೂರ್ಣಯ್ಯನವರು ಅಣ್ಣಾಜಿರಾವ್ ಅವರ ಶೌರ್ಯವನ್ನು ಮೆಚ್ಚಿ ಗೌರವಿಸಿದರು.

ನಂತರ ಅಣ್ಣಾಜಿರಾವ್ ಜನರಲ್ ವೆಲ್ಲೆಸ್ಲಿ ಜೊತೆಯಲ್ಲಿ ಶಿವಮೊಗ್ಗ ನಗರದ ನಾಯಕ ಸಿಂಧಿಯಾ ಮತ್ತು ಸಾಯಿರಾವ್ ಘಾಟ್ಕೆ ವಿರುದ್ಧದ ಕಾರ್ಯಾಚರಣೆಯಲ್ಲಿ ಭಾಗವಹಿಸಿ ವೆಲ್ಲೆಸ್ಲಿ ಅವರ ಮೆಚ್ಚುಗೆಗೆ ಪಾತ್ರರಾದರು. ಮೈಸೂರಿಗೆ ಹಿಂತಿರುಗಿದ ವೆಲ್ಲೆಸ್ಲಿ ಮಹಾರಾಜರು ಮತ್ತು ಮೈಸೂರಿನ ಬ್ರಿಟಿಷ್ ರೆಸಿಡೆಂಟರಿಗೆ ಅಣ್ಣಾಜಿರಾವ್ ಅವರ ಶೌರ್ಯದ ಬಗ್ಗೆ ಹೇಳಿದಾಗ ಸಂತೋಷಗೊಂಡ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ಅಣ್ಣಾಜಿರಾವ್ ಅವರ ವೇತನವನ್ನು ಹೆಚ್ಚಿಸಿ ಗೌರವಿಸಿದರು. ಬ್ರಿಟಿಷ್ ರೆಜಿಮೆಂಟಿನ ಸೈನಿಕರು ತಮ್ಮ ಅಧಿಕಾರಿಗಳ ವಿರುದ್ಧವೇ ದಂಗೆ ಎದ್ದಾಗ ಅಣ್ಣಾಜಿರಾವ್ ಅವರನ್ನು ಚಿತ್ರದುರ್ಗದಿಂದ ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದ ಸೈನಿಕರನ್ನು ತಡೆಯಲು ಕಳುಹಿಸಲಾಯಿತು. ಅವರು ದಂಗೆ ಎದ್ದ ಸೈನಿಕರನ್ನು ಹಿಂತಿರುಗುವಂತೆ ಮಾಡಿ ಪಿತೂರಿ ವ್ಯಾಪಿಸದಂತೆ ಅಡಗಿಸಿದರು. ಅವರ ಕಾರ್ಯವನ್ನು ಮೆಚ್ಚಿದ ರೆಸಿಡೆಂಟ್ ಕರ್ನಲ್ ಡೇವಿಸ್ ಅವರನ್ನು ವಿಶೇಷವಾಗಿ ಗೌರವಿಸಿದ (1809).

ಪೂರ್ಣಯ್ಯನವರ ನಿವೃತ್ತಿಯ ನಂತರ ಅಣ್ಣಾಜಿರಾಯರನ್ನು ಮಹಾರಾಜರು ಭಕ್ಷಿಯನ್ನಾಗಿ ನೇಮಿಸಿ ಅವರ ಪುತ್ರ ಬಾಲಾಜಿರಾವ್ ಅವರನ್ನು ಸವಾರ್ ಕಚೇರಿಯ ಶಿರಸ್ತೇದಾರರನ್ನಾಗಿ ನೇಮಿಸಿದರು.

ಎರಡನೆಯ ಪುತ್ರರಾದ ಕೃಷ್ಣರಾವ್ ಕೂಡ ಅರಮನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮೊದಲಿಗೆ ಮೂರು ವರ್ಷ ತರಬೇತಿ ಹುದ್ದೆಯಲ್ಲಿದ್ದ ನಂತರ ಅವರನ್ನು ರೆಜಿಮೆಂಟ್‌ದಾರ್ ಸೇವೆಗೆ ನೇಮಿಸಲಾಯಿತು. ಯುವಕರಾದ ಕೃಷ್ಣರಾವ್ ಅವರು, ಜಾನ್ ಮಾಲ್ಕಮ್ ಮತ್ತು ಸರ್ ಥಾಮಸ್ ಹೈಸ್ಲಾಪ್ ನೇತೃತ್ವದ ಬ್ರಿಟಿಷ್ ಸೈನ್ಯದ ಜೊತೆಯಲ್ಲಿ ಉತ್ತರ ಭಾರತದ ಕಡೆ ಹೋಗಿ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವುಗಳಲ್ಲಿ ಒಂದು ಮರಾಠರ ವಿರುದ್ಧ ನಡೆದ ಕಾಳಗ. ಈ ಮಹೀದ್ಪುರ ಯುದ್ಧದಲ್ಲಿ ಮರಾಠರ ಸೈನ್ಯ ಸೋತು ಹೋಳ್ಕರ್ ಓಡಿಹೋದ. ಕೃಷ್ಣರಾವ್ ಅವರಿಗೆ ತೀವ್ರ ರೀತಿಯ ಗಾಯವಾಗಿ ಗುಂಡೊಂದು ಅವರ ತೊಡೆಯನ್ನು ಹೊಕ್ಕಿತ್ತು. ಶತ್ರುಗಳಿಂದ ವಶ ಮಾಡಿಕೊಂಡಿದ್ದ ಪಲ್ಲಕ್ಕಿಯಲ್ಲಿ ಸೈನಿಕರು ಅವರನ್ನು ಯುದ್ಧ ಜಾಗದಿಂದ ಹೊತ್ತುಕೊಂಡು ಹೋಗಿ ರಕ್ಷಿಸಿದರು. ತಮ್ಮ ಸಾಹಸದ ಹೋರಾಟದಿಂದ ಕೃಷ್ಣರಾವ್ ಬ್ರಿಟಿಷ್ ಸೈನ್ಯದ ಜಯಕ್ಕೆ ಕಾರಣರಾಗಿದ್ದರು.

ಈ ವಿಷಯವನ್ನು ಕ್ಯಾಪ್ಟನ್ ಗ್ರಾಂಟ್ ಮಹಾರಾಜರಿಗೆ ಮುಕ್ತ ಕಂಠದಲ್ಲಿ ಪ್ರಶಂಸಿಸಿ ಹೇಳಿದಾಗ ಅವರು ಕೃಷ್ಣರಾವ್ ಅವರ ವೇತನವನ್ನು ಹೆಚ್ಚಿಸಿದ್ದಲ್ಲದೆ ಅವರಿಗೆ ಸೊಗಸಾದ ಪೇಟ, ಮುತ್ತಿನ ಹಾರ, ಖಿಲ್ಲತ್ತನ್ನು ದಯಪಾಲಿಸಿ, ಚೌರಿಯ ಮರ್ಯಾದೆಯನ್ನು ಮಂಜೂರು ಮಾಡಿದರು. ಜೊತೆಗೆ ಎಡತೊರೆ ತಾಲೂಕಿನ ಗಂಧನಹಳ್ಳಿ ಮತ್ತಿತರ ಗ್ರಾಮಗಳನ್ನು ಒಳಗೊಂಡ ಜಹಗೀರನ್ನು ನೀಡಿ ಗೌರವಿಸಿದರು (1819).

1824ರಲ್ಲಿ ಮಹಾರಾಜರ ಆಜ್ಞೆಯ ಮೇರೆಗೆ ಭಕ್ಷಿ ಅಣ್ಣಾಜಿರಾವ್ ಮತ್ತು ರೆಜಿಮೆಂಟ್ದಾರ್ ಕೃಷ್ಣರಾವ್ ಕ್ಯಾಪ್ಟನ್ ರೋಷ್ಫೋರ್ಟ್ ಅವರ ಬ್ರಿಟಿಷ್ ಸೈನ್ಯದ ಜೊತೆ ಹೋಗಿ ಕಿತ್ತೂರು ಕೋಟೆಯನ್ನು ವಶಕ್ಕೆ ತೆಗೆದುಕೊಂಡರು. ಎರಡು ವರ್ಷಗಳ ನಂತರ (1826) ಅಣ್ಣಾಜಿರಾವ್ ನಿವೃತ್ತಿ ಹೊಂದಿ, 1833ರಲ್ಲಿ ನಿಧನರಾದರು.

ಈ ಅವಧಿಯಲ್ಲಿ ರಾಜ್ಯದ ಪಶ್ಚಿಮ ಭಾಗಗಳಲ್ಲಿ ಪರಿಸ್ಥಿತಿ ಹದಗೆಟ್ಟಿತ್ತು. ಮಂದಗದ್ದೆ, ಲಕ್ಕವಳ್ಳಿ ಮತ್ತಿತರ ಸುತ್ತಮುತ್ತಲ ಪ್ರದೇಶಗಳಲ್ಲಿ ಅಲ್ಲಿನ ಪಾಳೇಗಾರರು ಲೂಟಿಯಲ್ಲಿ ತೊಡಗಿದ್ದರು. ಮಹಾರಾಜರ ಆಜ್ಞೆಯಂತೆ ಕೃಷ್ಣರಾಯರು ಲೂಟಿಯನ್ನು ಯಶಸ್ವಿಯಾಗಿ ತಪ್ಪಿಸಿ ಮರಳಿದರು. ಮಹಾರಾಜರು ಕೃಷ್ಣರಾಯರ ಸಾಹಸವನ್ನು ಎಲ್ಲರೆದುರು ಪ್ರಶಂಸಿಸಿದರು.

ಬ್ರಿಟಿಷರ ಅಧಿಕಾರಾವಧಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎದ್ದ ದಂಗೆಯನ್ನು ಅಡಗಿಸಲು ಕೃಷ್ಣರಾವ್ ಅವರನ್ನು ಕರ್ನಲ್ ಬ್ರಿಗ್ಸ್ ಅವರ ಕೈಕೆಳಗೆ ಹಾಗೂ 1857–58ರ ಸಿಪಾಯಿ ದಂಗೆ ಸಂದರ್ಭದಲ್ಲಿ ಕರ್ನೂಲ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಿಲಿಟರಿ ಕಾರ್ಯಾಚರಣೆಗಳಿಗೆ ನಿಯುಕ್ತಿಗೊಳಿಸಲಾಯಿತು. ಸೇವೆಯಲ್ಲಿದ್ದಾಗಲೇ ಕೃಷ್ಣರಾವ್ 1861ರಲ್ಲಿ ನಿಧನರಾದರು.

ಕೃಷ್ಣರಾವ್ ಅವರ ಪುತ್ರ ವೆಂಕಟರಾವ್ ಚಿಕ್ಕವರಿದ್ದಾಗಲೇ ಮಿಲಿಟರಿಗೆ ಸೇರಿದ್ದು 1857–58ರಲ್ಲಿನ ಸಿಪಾಯಿ ದಂಗೆಯ ವಿರುದ್ಧದ ಹೋರಾಟದಲ್ಲಿ ತಮ್ಮ ತಂದೆಯವರ ಜೊತೆ ಪಾಲ್ಗೊಂಡಿದ್ದರು. ಕರ್ನೂಲ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲದೆ ಇತರ ಕಡೆಗಳಲ್ಲಿಯೂ ಅವರು ಸೇವೆ ಸಲ್ಲಿಸಿದ್ದರು. ಸೈನ್ಯದಲ್ಲಿ ಅವರ ಸೇವೆಯನ್ನು ಮೆಚ್ಚಿದ್ದ ಕಮಿಷನರ್ ರಸೆಲ್ ಅವರಿಗೆ ಒಂದು 'ಪೇಶ್ ಕುಷ್' (ಸೊಂಟದ ಪಟ್ಟಿಯಲ್ಲಿ ಸಿಕ್ಕಿಸಿಕೊಳ್ಳುವ ದೊಡ್ಡ ಕತ್ತಿ) ಒಂದನ್ನು ಕೊಡುಗೆ ನೀಡಿದ್ದ. ಮೈಸೂರು ಅಶ್ವದಳದಲ್ಲಿ ವೆಂಕಟರಾವ್ ಸ್ವಲ್ಪ ಕಾಲ ರಸಲ್ದಾರರಾಗಿ ಸೇವೆ ಸಲ್ಲಿಸಿದ್ದರು. ಬೇಗನೇ ನಿವೃತ್ತಿ ಪಡೆದಿದ್ದ ಅವರು 1917ರಲ್ಲಿ ಕಾಲವಾದರು. ವೆಂಕಟರಾವ್ ಪುತ್ರರೇ ಮೇಲೆ ಹೇಳಿದ ಕೊನೆಯ ಜಹಗೀರುದಾರರಾದ ಕೃಷ್ಣರಾವ್.

ತಮ್ಮ ಹಿರಿಯರು ಧರಿಸುತ್ತಿದ್ದ ಬಟ್ಟೆಬರೆ, ಕಾಗದ ಪತ್ರಗಳು ಮುಂತಾದವನ್ನು ಅವರ ವಂಶಸ್ಥರು ಇಂದಿಗೂ ಹೆಮ್ಮೆಯಿಂದ ಕಾಪಾಡಿಕೊಂಡು ಬರುತ್ತಿದ್ದಾರೆ.

ಸನಾತನ ಧರ್ಮ ಕುರಿತ ಹೇಳಿಕೆ: ಸಚಿವ ಉದಯನಿಧಿ ಸ್ಟಾಲಿನ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ; ನ್ಯಾಯಾಲಯ ಸೂಚನೆ



ಉದಯನಿಧಿ ಸ್ಟಾಲಿನ್

ಬೆಂಗಳೂರು,ಫೆ.3–ಸನಾತನ ಧರ್ಮಕ್ಕೆ ಅವಮಾನಿಸಿದ ಆರೋಪಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಸೇರಿ ನಾಲ್ವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ ಬೆಂಗಳೂರಿನ ಮೆಟ್ರೊ ಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿದೆ.

ಬೆಂಗಳೂರಿನ ವಿ.ಪರಮೇಶ ಅವರು ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ (ಮ್ಯಾಜಿಸ್ಟ್ರೇಟ್) ನ್ಯಾಯಾಲಯದ ನ್ಯಾಯಾಧೀಶರಾದ ಜೆ.ಪ್ರೀತ್ ಅವರು ಈ ಕುರಿತಾದ ಆದೇಶ ಮಾಡಿದ್ದಾರೆ.

ತಮಿಳುನಾಡಿನ ಯುವ ಜನ ಕ್ಷೇಮಾಭಿವೃದ್ಧಿ, ಕ್ರೀಡೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸಚಿವ ಉದಯನಿಧಿ ಸ್ಟಾಲಿನ್, ತಮಿಳುನಾಡಿನ ಬರಹಗಾರ ಎಸ್.ವೆಂಕಟೇಶ್, ತಮಿಳುನಾಡಿನ ಪ್ರಗತಿಪರ ಬರಹಗಾರರು ಮತ್ತು ಕಲಾವಿದರ ಸಂಘದ ರಾಜ್ಯಾಧ್ಯಕ್ಷ ಮಧುಕರ್ ರಾಮಲಿಂಗಂ ಮತ್ತು ಸಂಘದ ಕಾರ್ಯದರ್ಶಿ ಆದವನ್ ಡಿಚನ್ಯ ಅವರ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 153, 298, 500 ಜೊತೆಗೆ 34ರ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಕಚೇರಿಗೆ ನಿರ್ದೇಶಿಸಲಾಗಿದೆ. ಆರೋಪಿಗಳಿಗೆ ಸಮನ್ಸ್ ಜಾರಿ ಮಾಡಿ, ಮಾರ್ಚ್ 4ಕ್ಕೆ ವಿಚಾರಣೆ ಮುಂದೂಡಲಾಗಿದೆ.

ಪ್ರಕರಣದ ಹಿನ್ನೆಲೆ: 2023ರ ಸೆಪ್ಟೆಂಬರ್ 4ರಂದು ಚೆನ್ನೈನ ತೇನಂಪೇಟೆಯಲ್ಲಿ ನಡೆದಿದ್ದ ಸನಾತನ ಧರ್ಮ ನಿರ್ಮೂಲನಾ ಸಮಾವೇಶದಲ್ಲಿ ಸನಾತನ ಧರ್ಮವನ್ನು ಡೆಂಗ್ಯು, ಮಲೇರಿಯಾ ಹಾಗೂ ಕೊರೊನಾಕ್ಕೆ ಹೋಲಿಕೆ ಮಾಡಿ ಸಂಪೂರ್ಣ ನಿರ್ಮೂಲನೆ ಮಾಡಬೇಕು ಎಂದು ಉದಯನಿಧಿ ಹೇಳಿದ್ದರು. ಈ ಸುದ್ದಿಯನ್ನು ವಿಜಯ ತರಂಗ ಕನ್ನಡ ಪತ್ರಿಕೆ ಪ್ರಕಟಿಸಿತ್ತು. ಇದನ್ನು ಆಧರಿಸಿ ಪರಮೇಶ ಅವರು ಖಾಸಗಿ ದೂರು ದಾಖಲಿಸಿದ್ದರು. ದೂರುದಾರರ ಪರವಾಗಿ ವಕೀಲ ಧರ್ಮಪಾಲ ವಾದ ಮಂಡಿಸಿದ್ದರು.

ನಾನು ಜೀವಂತವಾಗಿದ್ದೇನೆ: ಪೂನಂ ಪಾಂಡೆ ಸ್ಪಷ್ಟನೆ!

ಗರ್ಭಕಂಠ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಿದೆ ಅಷ್ಟೆ



ನವದೆಹಲಿ, ಫೆ.3– ಮಾಡೆಲ್ ಕಂ ರಿಯಾಲಿಟಿ ಶೋ ಕಿರುತೆರೆ ತಾರೆ ಪೂನಂ ಪಾಂಡೆ ಇಂದು ತಾನು ಗರ್ಭಕಂಠದ ಕ್ಯಾನ್ಸರ್‌ನಿಂದ ಮೃತಪಟ್ಟಿಲ್ಲ, ಜೀವಂತವಾಗಿದ್ದೇನೆ ಎಂದು ವಿಡಿಯೊ ಮಾಡಿ ಪೋಸ್ಟ್ ಮಾಡುವ ಮೂಲಕ ಅಚ್ಚರಿ ಮೂಡಿಸಿದ್ದಾಳೆ. ಪೂನಂ ಪಾಂಡೆ ಮ್ಯಾನೇಜರ್ ನಿನ್ನೆ ಇನ್ಸ್ಟಾಗ್ರಾಂ ಪೋಸ್ಟ್ ಹಾಕಿ ಪೂನಂ ಪಾಂಡೆ ಗರ್ಭಕಂಠದ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ ಎಂದು ತಿಳಿಸಲು ಅತೀವ ದುಃಖವಾಗುತ್ತಿದೆ ಎಂದಿದ್ದರು.

ಇದಾಗಿ ದಿನ ಕಳೆಯುವುದರಲ್ಲಿ ಇಂದು ಪೋಸ್ಟ್ ಮಾಡಿರುವ ನಟಿ ಪೂನಂ ಪಾಂಡೆ "ನಾನು ಜೀವಂತವಾಗಿದ್ದೇನೆ. ನಾನು ಗರ್ಭಕಂಠದ ಕ್ಯಾನ್ಸರ್‌ನಿಂದ ಸತ್ತಿಲ್ಲ. ದುರದೃಷ್ಟವಶಾತ್, ಗರ್ಭಕಂಠದ ಕ್ಯಾನ್ಸರ್‌ನಿಂದ ನೂರಾರು, ಸಾವಿರಾರು ಮಹಿಳೆಯರು ಸಾಯುತ್ತಿದ್ದಾರೆ. ನಿಮ್ಮೆಲ್ಲರಿಗೂ ಆಘಾತ ಕೊಟ್ಟಿದ್ದಕ್ಕಾಗಿ ನನ್ನನ್ನು ಕ್ಷಮಿಸಿ, ನಾನು ನೋಯಿಸಿದವರಿಗೆ ಕ್ಷಮೆ ಯಾಚಿಸುತ್ತೇನೆ. ಗರ್ಭಕಂಠದ ಕ್ಯಾನ್ಸರ್‌ನಿಂದ ಅಷ್ಟೊಂದು ಮಹಿಳೆಯರು ತೊಂದರೆ ಅನುಭವಿಸುತ್ತಿದ್ದರೂ ನಾವು ಆ ಬಗ್ಗೆ ಮಾತನಾಡುವುದೇ ಇಲ್ಲ, ನಮ್ಮಲ್ಲಿ ಅನೇಕರಿಗೆ ಅದರ ಬಗ್ಗೆ ಅರಿವು ಇಲ್ಲ, ಅದರ ಬಗ್ಗೆ ಜಾಗೃತಿ ಮೂಡಿಸುವುದು ನನ್ನ ಉದ್ದೇಶವಾಗಿತ್ತು ಎಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಾಳೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಸನ್ಮಾನ

ರಾಮನ ಶಿಲ್ಪಿ ನಮ್ಮ ಸೂರಾದ ಮೈಸೂರಿನವರೆಂಬುದೇ ಸಂತಸದ ಸಂಗತಿ: ವಿಜಯಾನಂದ ತೀರ್ಥರ ಹರ್ಷ



ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನಿವಾರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಶಿಲ್ಪಿ ಅರುಣ್ ಯೋಗಿರಾಜ್ ಮತ್ತು ಅವರ ಕುಟುಂಬಸ್ಥರನ್ನು ಸನ್ಮಾನಿಸಿ, ಆಶೀರ್ವದಿಸಿದರು.

ಮೈಸೂರು, ಫೆ.3(ಎಂಕೆ)– ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಅಯೋಧ್ಯೆ ಶ್ರೀ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡ 'ಬಾಲರಾಮ' ಮೂರ್ತಿಯನ್ನು ರೂಪುಗೊಳಿಸಿದ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಿ, ಆಶೀರ್ವದಿಸಲಾಯಿತು.

ಅವಧೂತ ದತ್ತ ಪೀಠ ಆವರಣದಲ್ಲಿ ಶನಿವಾರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಶಾಲು ಹೊದಿಸಿ, ಆಶ್ರಮದ ಸ್ಮರಣಿಕೆ ನೀಡಿ ಅಭಿನಂದಿಸಿ, ಆಶೀರ್ವದಿಸಿದರು. ಬಳಿಕ ಶ್ರೀ ವಿಜಯಾನಂದ ತೀರ್ಥ ಸ್ವಾಮೀಜಿ ಮಾತನಾಡಿ, ನಮ್ಮೆಲ್ಲರಿಗೂ ಇಡೀ ಜೀವನದಲ್ಲಿ ಆಗದಷ್ಟು ಸಂತೋಷ–ಸಂಭ್ರಮ ಜ.22ರಂದು ಆಯಿತು. ಅದಕ್ಕೆ ಶ್ರೀ ರಾಮನೇ ಕಾರಣ. ಮೈಸೂರಿನ ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್, ಅಂದಿನ ಸಂಭ್ರಮದ ಒಂದು ಭಾಗವೇ ಆಗಿದ್ದರು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಅಯೋಧ್ಯೆ ಶ್ರೀ ರಾಮಮಂದಿರದಲ್ಲಿ 'ಬಾಲರಾಮ'ನನ್ನು ನೋಡುತ್ತಿದ್ದರೆ, ಹೊರನೋಟಕ್ಕೆ ಹಿಂದೂ ಧರ್ಮ ವಿರೋಧಿಸುವವರು ಮನಸ್ಸಿನೊಳಗೆ ಒಪ್ಪಿಕೊಳ್ಳುತ್ತಿದ್ದಾರೆ. ಈ ಮೂಲಕ ಅರುಣ್ ಯೋಗಿರಾಜ್ ಹೊಸ ಇತಿಹಾಸ ಬರೆದಿದ್ದಾರೆ. ಶಿಲಾ ಭಕ್ತಿಯ ಜೊತೆಗೆ ಶಿಲ್ಪಿ ಭಕ್ತಿಯೂ ಸೇರಿ ದೇಶ ಪುನೀತವಾಗಿದೆ. ಒಂದು ತಂಡದಂತೆ ಅರುಣ್ ದೇಶವೇ ಮೆಚ್ಚುವ ಕಾರ್ಯ ಸಾಧಿಸಿದ್ದಾರೆ. ಅಯೋಧ್ಯೆಯಲ್ಲಿ ನಮ್ಮ ಸೂರಾದ ಮೈಸೂರಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ ಎಂದರು.

'ಬಾಲರಾಮ' ಮೂರ್ತಿಯ ಶಿಲೆ ಸಿಕ್ಕಿದ ಸ್ಥಳದಲ್ಲಿ ರಾಮಮಂದಿರ ನಿರ್ಮಾಣ ಮಾಡುತ್ತಿರುವುದನ್ನು ತಿಳಿದು ತುಂಬಾ ಸಂತೋಷವಾಗಿದೆ. ಅಯೋಧ್ಯೆಯಲ್ಲಿ ಅವಧೂತದತ್ತ ಪೀಠದ ಆಶ್ರಮ ನಿರ್ಮಾಣವಾಗುತ್ತಿದ್ದು, ಎಲ್ಲಾ ಭಕ್ತರು ಅಯೋಧ್ಯೆಗೆ ಒಟ್ಟಾಗಿ ಹೋಗಿ 'ಬಾಲರಾಮ'ನ ದರ್ಶನ ಮಾಡಿ ಬರೋಣ. ಶಿಲ್ಪಿ ಅರುಣ್ ಯೋಗಿರಾಜ್ ಅವರಿಂದಲೇ 'ಬಾಲಕೃಷ್ಣ'ನ ಮೂರ್ತಿ ರೂಪುಗೊಳ್ಳಲಿ ಎಂದು ಆಶಯ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿಲ್ಪಿ ಅರುಣ್ ಯೋಗಿರಾಜ್, ಮೈಸೂರಿನ ಅವಧೂತದತ್ತ ಪೀಠ ಕಲೆಗಳ ಆಕರ್ಷಣೆಯಿಂದ ಕೂಡಿದೆ. ಇಲ್ಲಿರುವ ಕಲಾಕೃತಿಗಳನ್ನು ಗಮನಿಸಿಯೂ ಒಂದಷ್ಟು ಕಲಿತಿದ್ದೇನೆ. ನಮ್ಮಂತಹ ಕಲಾವಿದರಿಗೆ ಆಶ್ರಮದ ಆಶೀರ್ವಾದ ಸದಾ ಇರಲಿ ಎಂದು ಕೇಳಿಕೊಂಡರಲ್ಲದೆ 'ಬಾಲರಾಮ' ವಿಗ್ರಹ ರೂಪಿಸಿದ ಸಂದರ್ಭವನ್ನು ಭಕ್ತರೊಂದಿಗೆ ಹಂಚಿಕೊಂಡರು.



ಮೈಸೂರು ಕೃಷ್ಣರಾಜ ಉಪವಿಭಾಗದ ನೂತನ ಸಹಾಯಕ ಪೊಲೀಸ್ ಆಯುಕ್ತರಾಗಿ ನಿಯೋಜನೆಗೊಂಡ ಹೆಚ್.ಬಿ.ರಮೇಶ್‌ಕುಮಾರ್ ಅವರನ್ನು ಮಾಜಿ ಶಾಸಕ ಎಂಕೆ.ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಹಿರಿಯರಾದ ಪ್ರಕಾಶನ್, ಸೋಮಶೇಖರ್, ಮುಖಂಡರಾದ ಗುಣಶೇಖರ್, ಕಾಂಗ್ರೆಸ್ ಮುಖಂಡರಾದ ಸಿದ್ದು, ಕುಮಾರ್ (ಕುಮ್ಮಿ), ಹರೀಶ್, ಫಾರೂಖ್, ಗಿರೀಶ್ ಇದ್ದರು.

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ: ಬಿಜೆಪಿ ಸಂಸದೆ ರೀಟಾ ಬಹುಗುಣಗೆ 6 ತಿಂಗಳ ಜೈಲು ಶಿಕ್ಷೆ



ರೀಟಾ ಬಹುಗುಣ

ಲಖನೌ, ಫೆ.3– ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದೆ ರೀಟಾ ಬಹುಗುಣ ಜೋಶಿಗೆ ಲಕ್ನೋ ಕೋರ್ಟ್ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.


2012ರ ಉತ್ತರಪ್ರದೇಶ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಭಾರತೀಯ ಜನತಾ ಪಕ್ಷದ ಸಂಸದೆ ರೀಟಾ ಬಹುಗುಣ ಜೋಶಿ ಅವರಿಗೆ ಶುಕ್ರವಾರ ಲಕ್ನೋ ನ್ಯಾಯಾಲಯ 6 ತಿಂಗಳ ಜೈಲು ಶಿಕ್ಷೆ ಮತ್ತು 1,100 ರೂ. ದಂಡ ವಿಧಿಸಿದೆ. ಜನಪ್ರತಿನಿಧಿಗಳ ನ್ಯಾಯಾಲಯದ (MP-MLA ಕೋರ್ಟ್) ವಿಶೇಷ ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ (MP-MLA ಕೋರ್ಟ್) ಅಂಬರೀಶ್‌ಕುಮಾರ್ ಶ್ರೀವಾಸ್ತವ ಈ ಆದೇಶ ನೀಡಿದ್ದಾರೆ.

ಕಾಂಗ್ರೆಸ್ ಪರ ಸಭೆ ನಡೆಸಿದ್ದ ರೀಟಾ ಬಹುಗುಣ: ಅಂದಹಾಗೆ ಶಿಕ್ಷೆಗೆ ಗುರಿಯಾಗಿರುವ ಬಿಜೆಪಿ ಸಂಸದೆ ಕಾಂಗ್ರೆಸ್ ಪಕ್ಷದ ಪರವಾಗಿ ನೀತಿ ಸಂಹಿತೆ ಉಲ್ಲಂಘಿಸಿ ಸಭೆ ನಡೆಸಿದ್ದರು ಎನ್ನಲಾಗಿದೆ. ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡಿದ ಪ್ರಕರಣ ಸಂಬಂಧ ಪ್ರಯಾಗ್ ರಾಜ್‌ನ ಹಾಲಿ ಬಿಜೆಪಿ ಸಂಸದರಾಗಿರುವ ರೀಟಾ ಬಹುಗುಣ ಜೋಶಿ ಅವರನ್ನು ದೋಷಿ ಎಂದು ನ್ಯಾಯಾಲಯ ಘೋಷಿಸಿದೆ.

ಫೆಬ್ರವರಿ 17, 2012 ರಂದು ಸಂಜೆ 6.50ರ ಸುಮಾರಿಗೆ ಲಕ್ನೋನ ಕ್ಯಾಂಟ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಜೋಶಿ ಅವರು ಕೃಷ್ಣನಗರದ ಬಜರಂಗ ನಗರ ಪ್ರದೇಶದಲ್ಲಿ ನೀತಿ ಸಂಹಿತೆ ಉಲ್ಲಂಘಿಸಿ ಪ್ರಚಾರ ನಡೆಸುತ್ತಿದ್ದರು ಎಂದು ಪ್ರಾಸಿಕ್ಯೂಷನ್ ನ್ಯಾಯಾಲಯಕ್ಕೆ ತಿಳಿಸಿದೆ.

ನಿಧನ

ಮೈಸೂರಿನ ಹೆಸರಾಂತ ಕಾಲಮಾನ ಶಾಸ್ತ್ರಜ್ಞ ಎಂ.ಎಸ್.ಚಂದ್ರಶೇಖರ್ ಅಯ್ಯರ್ ಇನ್ನಿಲ್ಲ



ಮೈಸೂರು,ಫೆ.3–ಮೈಸೂರು ನಗರದ ಖ್ಯಾತ ಕಾಲಮಾನ ಶಾಸ್ತ್ರಜ್ಞ ಎಂ.ಎಸ್.ಚಂದ್ರಶೇಖರ್ ಅಯ್ಯರ್ ಅವರು ವಯೋಸಹಜ ಅನಾರೋಗ್ಯದಿಂದ ನಗರದ ಚಾಮರಾಜಪುರಂನ ಅವರ ನಿವಾಸದಲ್ಲಿ ಶುಕ್ರವಾರ ಸಂಜೆ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು. ಎಂ.ಎಸ್.ಚಂದ್ರಶೇಖರ್ ಅಯ್ಯರ್ ಕಾಲಮಾನಶಾಸ್ತ್ರ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಆ ಮೂಲಕ ಕಾಲಮಾನಶಾಸ್ತ್ರ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. 1911ರಲ್ಲಿ ಇವರ ತಂದೆ ಕೆ.ಎಸ್.ಲಕ್ಷ್ಮಣ್ ಅಯ್ಯರ್ ಅಂಡ್ ಸನ್ಸ್ ಹೆಸರಿನ ವಾಚ್ ಶಾಪ್ ಅನ್ನು ಪ್ರಾರಂಭಿಸುವುದರೊಂದಿಗೆ ಇವರ ಕಾಲಮಾನ ಆರಂಭವಾಯಿತು. ಪುರಭವನದ ಮುಂದಿನ ದೊಡ್ಡ ಗಡಿಯಾರ ಸಂರಕ್ಷಣೆ ವಿಚಾರದಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಈಗ ಅದರ ಪುನರುಜ್ಜೀವನ ಕಾಮಗಾರಿ ಆರಂಭವಾಗಿದ್ದು, ಇವರ ಆಸೆ ಕೈಗೂಡುವ ಮುನ್ನ ಇಹಲೋಕ ತ್ಯಜಿಸಿದ್ದಾರೆ.

ಮಾಯಾದೇವಿ



ಮೈಸೂರಿನ ಜಯಲಕ್ಷ್ಮೀಪುರಂ ನಿವಾಸಿ ಹಾಗೂ ದಿವಂಗತ ಪ್ರೊ. ಎನ್.ವೆಂಕೋಬರಾವ್ ಅವರ ಪತ್ನಿ ಮಾಯಾದೇವಿ(77) ಇಂದು ಬೆಳಗ್ಗೆ ಅಲ್ಪಕಾಲದ ಅಸ್ವಸ್ಥತೆ ನಂತರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಮೈಸೂರಿನ ಬುದ್ಧಿಮಾಂದ್ಯ ಮಕ್ಕಳ ಶಾಲೆ ಮೈತ್ರಿ ಸ್ಕೂಲ್‌ನ ಸಂಸ್ಥಾಪಕರಾದ ಇವರ ಪತಿ ಪ್ರೊ. ವೆಂಕೋಬರಾವ್ ನವೆಂಬರ್ 3, 2023ರಲ್ಲಿ ಇಹಲೋಕ ತ್ಯಜಿಸಿದ್ದರು. ವೆಂಕೋಬರಾಯರು ಬನುಮಯ್ಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರಾಗಿದ್ದರು.ಮಾಯಾದೇವಿ ಅವರ ಅಂತ್ಯಕ್ರಿಯೆ ಇಂದು ಸಂಜೆ ಗೋಕುಲಂ ಚಿತಾಗಾರದಲ್ಲಿ ನೆರವೇರಿತು.

ಅಡ್ವಾಣಿ 'ಭಾರತ ರತ್ನ' ಮೈಸೂರಲ್ಲಿ ಸಿಹಿ ಹಂಚಿ ಬಿಜೆಪಿ ಸಂಭ್ರಮ

ವಾಜಪೇಯಿ–ಅಡ್ವಾಣಿಯವರ ಹೋರಾಟ ಸ್ಮರಿಸಿದ ಮುಖಂಡರು



ಬಿಜೆಪಿ ಹಿರಿಯ ನಾಯಕ, ಮಾಜಿ ಉಪಪ್ರಧಾನಿ ಎಲ್.ಕೆ.ಅಡ್ವಾಣಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವ 'ಭಾರತ ರತ್ನ' ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿ ಎದುರು ಸಿಹಿ ಹಂಚಿ ಸಂಭ್ರಮಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ ಇತರರಿದ್ದಾರೆ.

ಮೈಸೂರು, ಫೆ.3(ಎಂಕೆ)– ಬಿಜೆಪಿಯ ಹಿರಿಯ ನಾಯಕ, ಮಾಜಿ ಉಪ ಪ್ರಧಾನಿ ಎಲ್.ಕೆ.ಅಡ್ವಾಣಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವ 'ಭಾರತ ರತ್ನ' ಘೋಷಣೆ ಮಾಡಿರುವ ಹಿನ್ನಲೆಯಲ್ಲಿ ಮೈಸೂರಿನಲ್ಲಿ ಸಿಹಿ ಹಂಚಿ ಸಂಭ್ರಮಿಸಲಾಯಿತು.

ನಗರದ ಬಿಜೆಪಿ ಕಚೇರಿ ಎದುರು ಮುಖಂಡರು, ಕಾರ್ಯಕರ್ತರು ಎಲ್.ಕೆ.ಅಡ್ವಾಣಿ ಅವರಿಗೆ ಜೈಕಾರ ಕೂಗಿ, ಸಿಹಿ ಹಂಚಿ ಸಂಭ್ರಮಿಸಿದರು. ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮಾಜಿ ಶಾಸಕ ಹಾಗೂ ನಗರಾಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿಯ ಎಲ್ಲಾ ಕಾರ್ಯಕರ್ತರಿಗೆ ಇಂದು ಸುದಿನ. ರಾಮಜನ್ಮ ಭೂಮಿ ಹೋರಾಟಕ್ಕೆ ರಥಯಾತ್ರೆ ಮೂಲಕ ದೊಡ್ಡ ಹೋರಾಟಕ್ಕೆ ಚಾಲನೆ ನೀಡಿದ್ದು ಎಲ್.ಕೆ.ಅಡ್ವಾಣಿಯವರು. ಮೈಸೂರಿಗೂ ರಥ ಬಂದಿತ್ತು. ಅಂದು ಅನೇಕ ಬಿಜೆಪಿ ಕಾರ್ಯಕರ್ತರು ರಥಯಾತ್ರೆಯಲ್ಲಿ ಭಾಗವಹಿಸಿದ್ದರು ಎಂದು ಹೇಳಿದರು.

1995ರ ಮುಂಬೈನಲ್ಲಿ ನಡೆದ ಅಧಿವೇಶನದಲ್ಲಿ ಮುಂದಿನ ಪ್ರಧಾನಿ ಅಭ್ಯರ್ಥಿಯೆಂದೇ ಲಾಲ್‌ಕೃಷ್ಣ ಅಡ್ವಾಣಿಯವರನ್ನು ಗುರ್ತಿಸಲಾಗಿತ್ತು. ಆದರೆ, ಅವರು ಸ್ವತಃ ವೇದಿಕೆಯ ಮೇಲೆ ಅಟಲ್ ಬಿಹಾರಿ ವಾಜಿಪೇಯಿ ಅವರನ್ನು ಮುಂದಿನ ಪ್ರಧಾನಿ ಎಂದು ಘೋಷಣೆ ಮಾಡುವ ಮೂಲಕ ಕರ್ಣನ ರೀತಿಯಲ್ಲಿ ತ್ಯಾಗ ಮಾಡಿದ್ದರು. ಅವಕಾಶ ಇದ್ದರೂ ಹಿರಿಯರಾದ ವಾಜಪೇಯಿ ಅವರಿಗೆ ಅವಕಾಶ ಮಾಡಿಕೊಟ್ಟ ಪಕ್ಷದ ಹಿರಿಯ ವ್ಯಕ್ತಿಯಾಗಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರದ ಆಡಳಿತ, ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ಕಟ್ಟಿದೆ ಎಂದರೆ ಅದಕ್ಕೆ ಮೂಲಕ ಕಾರಣ ಎಲ್.ಕೆ.ಅಡ್ವಾಣಿಯಾಗಿದ್ದಾರೆ. ಇವತ್ತು ಅವರಿಗೆ 'ಭಾರತ ರತ್ನ' ಘೋಷಣೆ ಮಾಡಿರುವುದು ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತನಿಗೂ ಸುದಿನವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಬಿಜೆಪಿಯ ಎಲ್ಲಾ ಕಾರ್ಯಕರ್ತರಿಗೆ, ಮುಖಂಡರಿಗೆ ಇಂದು ಹರ್ಷದ ದಿನವಾಗಿದೆ. ಕೇಂದ್ರ ಹಾಗೂ ದೇಶದ ಹಲವು ರಾಜ್ಯಗಳಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ ಎಂದರೆ ಅದಕ್ಕೆ ಎಲ್.ಕೆ.ಅಡ್ವಾಣಿಯವರ ಪರಿಶ್ರಮವೇ ಕಾರಣ. ಅವರನ್ನು ದೇಶದ ಎರಡನೇ ಉಕ್ಕಿನ ಮನುಷ್ಯ ಎಂದು ಕರೆಯಲಾಗುತ್ತದೆ. ಸುಮಾರು 1988–89ರಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಬಿಜೆಪಿ ಸೇರಿದ ಸಂದರ್ಭದಲ್ಲಿ ಮೈಸೂರಿಗೆ ಆಗಮಿಸಿದ್ದ ಎಲ್.ಕೆ.ಅಡ್ವಾಣಿಯವರು, ಟೌನ್‌ಹಾಲ್ ಮೈದಾನದಲ್ಲಿ ಭಾರೀ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ್ದರು ಎಂದು ಸ್ಮರಿಸಿದರು.

ಜೋಡೆತ್ತುಗಳು: ದೇಶದಲ್ಲಿನ ರಾಜ್ಯಗಳಲ್ಲಿ ರಾಜ್ಯಮಟ್ಟದ ನಾಯಕರನ್ನು ತಯಾರು ಮಾಡುತ್ತಿದ್ದ ಅಡ್ವಾಣಿಯವರು, ಯಡಿಯೂರಪ್ಪ ಅನಂತಕುಮಾರ್, ಈಶ್ವರಪ್ಪ ಸೇರಿದಂತೆ ಅನೇಕ ನಾಯಕರನ್ನು ತಯಾರು ಮಾಡಿದ್ದಾರೆ. ಅಟಲ್ ಜೀ ಮತ್ತು ಅಡ್ವಾಣಿಯವರು ಬಿಜೆಪಿಯ ಜೋಡೆತ್ತಿನಂತೆ ಪಾದಯಾತ್ರೆ, ರಥಯಾತ್ರೆ ಮೂಲಕ ಸಂಚಲನ ಮೂಡಿಸಿದ್ದರು. ಅಂತಹ ಮಹನೀಯರಿಗೆ 'ಭಾರತ ರತ್ನ' ನೀಡಿರುವುದು ಶ್ಲಾಘನೀಯ. ಇಡೀ ದೇಶದಲ್ಲಿ ಯಾರು ಕೂಡ ವಿರೋಧ ಮಾಡದ ರೀತಿಯಲ್ಲಿ ಪ್ರಧಾನಿಯವರ ನಿರ್ಧಾರವನ್ನು ಪ್ರತಿಯೊಬ್ಬರು ಒಪ್ಪಿಕೊಂಡಿದ್ದಾರೆ. ಪ್ರಧಾನಿ ಮೋದಿಯವರ ದೂರದೃಷ್ಟಿಗೆ ಅವರೇ ಸಾಟಿ ಎಂದರು.

ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮಿಗಳಿಗೆ 'ಭಾರತ ರತ್ನ' ನೀಡುವಂತೆ ಸುರ್ಜೇವಾಲ ಆಗ್ರಹ



ಮೈಸೂರು, ಫೆ.3–ಅನ್ನ, ಅಕ್ಷರ, ಜ್ಞಾನದಂತಹ ತ್ರಿವಿಧ ದಾಸೋಹ ನೀಡಿದ ಮಹಾಪುರುಷರಾದ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳಿಗೆ ಮರಣೋತ್ತರ ಭಾರತ ರತ್ನ ಗೌರವ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮನವಿ ಮಾಡಿದ್ದಾರೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ಶಿವಕುಮಾರ ಶ್ರೀಗಳು ಲಕ್ಷಾಂತರ ಮಕ್ಕಳಿಗೆ ಉಚಿತ ಅನ್ನ, ಶಿಕ್ಷಣ ನೀಡಿದ ಮಹನೀಯರು. ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ನಿಜಕ್ಕೂ ಮರಣೋತ್ತರ 'ಭಾರತ ರತ್ನ' ಸಿಗಬೇಕು. ಈ ಗೌರವಕ್ಕೆ ಅವರಂತಹ ಅರ್ಹರು ಮತ್ತೊಬ್ಬರಿಲ್ಲ. ಅವರಿಗೆ ಈ ಹಿಂದೆಯೇ ಈ ಗೌರವ ಸಿಗಬೇಕಿತ್ತು ಅನ್ನ, ಶಿಕ್ಷಣ ನೀಡಿ ಲಕ್ಷಾಂತರ ಮಂದಿಗೆ ಆಸರೆಯಾಗಿ ನಿಂತ ಮಹಾತ್ಮರಾದ ಸಿದ್ಧಗಂಗಾ ಶ್ರೀಗಳು ಇಡೀ ದೇಶಕ್ಕೇ ಮಾದರಿಯಾಗಿದ್ದವರು. ಹೀಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಆದ್ಯತೆ ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಯವರು ಈ ಶತಮಾನ ಕಂಡ ಅಪರೂಪದ ಶರಣರಾಗಿದ್ದವರು. ಶತಾಯುಷಿಗಳಾಗಿರುವ ಅವರು ನಡೆದಾಡುವ ದೇವರು ಎಂದೇ ಕರೆಯಲ್ಪಡುತ್ತಿದ್ದರು. ಜನರು ಶಿವಕುಮಾರ ಸ್ವಾಮೀಜಿಯಲ್ಲಿ ದೇವರನ್ನು ಕಂಡಿದ್ದಾರೆ. ದೇವರು ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಆದರೆ, ಈ ನಮ್ಮ ನಡೆದಾಡುವ ದೇವರು ಎಲ್ಲವನ್ನೂ ಮಾಡಿ ತೋರಿಸಿದ್ದಾರೆ. ಆರಂಭದಲ್ಲಿ ಶ್ರೀ ಮಠದ ಆದಾಯ ಕಡಿಮೆ ಇದ್ದಾಗಲೂ ಕುಗ್ಗದ ಶ್ರೀಗಳು, ಭಕ್ತರ ಮನೆ ಮನೆಗೆ ತೆರಳಿ ದವಸ–ಧಾನ್ಯಗಳನ್ನು ಬೇಡಿ ತಂದು ಮಠವನ್ನು ನಿರ್ವಹಿಸಿದರು. ಮಠದ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಇಂಥವರು ಸಿಗುವುದೇ ಅಪರೂಪ ಎಂದು ರಣದೀಪ್ ಸಿಂಗ್ ಸುರ್ಜೇವಾಲ ಅಭಿಪ್ರಾಯಪಟ್ಟಿದ್ದಾರೆ.



ಸುರ್ಜೇವಾಲ

ನಿಜವಾಗಿಯೂ ಭಾರತದ ಅಮೂಲ್ಯ ರತ್ನವಾಗಿರುವಂಥ ಕರ್ನಾಟಕದ ಈ ಮಹಾನ್ ಪುರುಷ, ಅವತಾರ ಪುರುಷರಾಗಿರುವ ಶಿವಕುಮಾರ ಶ್ರೀಗಳಿಗೆ ಕೇಂದ್ರ ಸರ್ಕಾರವು ಮರಣೋತ್ತರ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸುವುದು ಆದ್ಯ ಕರ್ತವ್ಯವಾಗಿದೆ ಎಂಬುದು ನನ್ನ ಭಾವನೆಯಾಗಿದೆ. ಇದು ಆರೂವರೆ ಕೋಟಿ ಕನ್ನಡಿಗರ ಅಭಿ ಮತವೂ ಆಗಿದೆ ಎಂಬುದು ನನ್ನ ಅನ್ನಿಸಿಕೆ ಎಂದು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

ಬಿಜೆಪಿ ಶಾಸಕ–ಶಿವಸೇನಾ ಶಿಂಧೆ ಬಣದ ನಡುವೆ ಘರ್ಷಣೆ

ಪೊಲೀಸ್ ಠಾಣೆಯಲ್ಲೇ ಗುಂಡಿನ ದಾಳಿ; ಮಹೇಶ್ ಗಾಯಕ್ವಾಡ್ ಸ್ಥಿತಿ ಗಂಭೀರ



ಥಾಣೆ(ಮಹಾರಾಷ್ಟ್ರ), ಫೆ.3– ಭಾರತೀಯ ಜನತಾ ಪಕ್ಷದ ಶಾಸಕ ಗಣಪತ್ ಗಾಯಕ್ವಾಡ್ ಬೆಂಬಲಿಗರು ಶಿವಸೇನಾ (ಏಕನಾಥ್ ಶಿಂಧೆ) ಬಣದ ನಾಯಕ ಮಹೇಶ್ ಗಾಯಕ್ವಾಡ್ ಅವರ ಮೇಲೆ ಗುಂಡಿನ ದಾಳಿ ನಡೆಸಿದ ಘಟನೆ ಥಾಣೆಯ ಉಲ್ಲಾಸನಗರದ ಹಿಲ್ ಲೈನ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಮಹೇಶ್ ಗಾಯಕ್ವಾಡ್ ಮತ್ತು ಅವರ ಬೆಂಬಲಿಗನೊಬ್ಬನಿಗೆ ಐದು ಗುಂಡುಗಳು ತಗುಲಿವೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆ ಪೊಲೀಸ್ ಠಾಣೆ ಮೆಟ್ಟಿಲೇರುವ ತನಕ ಹೋಗಿತ್ತು. ಅದರಂತೆ ಇಬ್ಬರು ರಾಜಕಾರಣಿಗಳು ಪರಸ್ಪರ ದೂರು ನೀಡಲು ಹಿಲ್ ಲೈನ್ ಪೊಲೀಸ್ ಠಾಣೆಗೆ ತೆರಳಿದ್ದರು. ಈ ವೇಳೆ ಇಬ್ಬರು ರಾಜಕಾರಣಿಗಳ ಬೆಂಬಲಿಗರೂ ಅಲ್ಲಿ ಸೇರಿದ್ದರು.



ಈ ನಡುವೆ ಎರಡು ಕಡೆಯವರ ನಡುವೆ ವಾಗ್ವಾದ ನಡೆದಿದೆ. ಈ ವೇಳೆ ಗಣೇಶ್ ಗಾಯಕ್ವಾಡ್ ಅವರು ಮಹೇಶ್ ಗಾಯಕ್ವಾಡ್ ಮೇಲೆ ನಾಲ್ಕು ಸುತ್ತಿನ ಗುಂಡುಗಳನ್ನು ಹಾರಿಸಿದ್ದಾರೆಂದು ತಿಳಿದುಬಂದಿದೆ. ಗಾಯಗೊಂಡ ಇಬ್ಬರನ್ನು ಥಾಣೆಯ ಜುಪಿಟರ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಗುಂಡು ಹಾರಿಸಿದ ಗಣಪತ್ ಗಾಯಕ್ವಾಡ್ ಅವರನ್ನು ಪೊಲೀಸರು ಬಂಧಿಸಿ ವಶಕ್ಕೆ ಪಡೆದಿದ್ದಾರೆ. ಜೊತೆಗೆ ಗನ್ ಕೂಡ ಪೊಲೀಸರು ವಶಪಡಿಸಿಕೊಂಡಿದ್ದಾರೆಂದು ತಿಳಿದುಬಂದಿದೆ.

ಗಾಯಗೊಂಡ ಮಹೇಶ್ ಗಾಯಕ್ವಾಡ್ ಅವರನ್ನು ಮೊದಲು ಉಲ್ಲಾಸನಗರದ ಮೀರಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಅವರ ಸ್ಥಿತಿ ಗಂಭೀರವಾದ ಹಿನ್ನೆಲೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ರಾತ್ರಿ 11 ಗಂಟೆಗೆ ಥಾಣೆಯ ಜುಪಿಟರ್ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸದ್ಯ ಜುಪಿಟರ್ ಆಸ್ಪತ್ರೆಯಲ್ಲಿ ಶಿವಸೇನೆ ನಾಯಕನ ಬೆಂಬಲಿಗರು ಜಮಾಯಿಸಿದ್ದು, ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಸದ್ಯ ಆಸ್ಪತ್ರೆ ಸುತ್ತ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜನೆಗೊಳಿಸಲಾಗಿದೆ.

ಮಾಲ್ಡೀವ್ಸ್‌ನಿಂದ ಮೇ 10ರೊಳಗೆ ಭಾರತೀಯ ಮಿಲಿಟರಿ ಹಿಂತೆಗೆತ

ಮಾರ್ಚ್ 10ರೊಳಗೆ ಮೊದಲ ಹಂತ ಮುಕ್ತಾಯ: ಭಾರತ



ನವದೆಹಲಿ: ದ್ವೀಪ ರಾಷ್ಟ್ರ ಮಾಲ್ಡೀವ್ಸ್‌ನಲ್ಲಿ ಭಾರತೀಯ ವಾಯುಯಾನ ವೇದಿಕೆಗಳ ಕಾರ್ಯಾಚರಣೆಯನ್ನು ಮುಂದುವರೆಸಲು ಮಾಲ್ಡೀವ್ಸ್‌ನೊಂದಿಗೆ ಪರಸ್ಪರ ಕಾರ್ಯಸಾಧ್ಯವಾದ ಪರಿಹಾರಗಳನ್ನು ಒಪ್ಪಿಕೊಳ್ಳಲಾಗಿದೆ ಎಂದು ಭಾರತ ಶುಕ್ರವಾರ ಹೇಳಿದೆ. ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರು ಭಾರತೀಯ ಮಿಲಿಟರಿಯನ್ನು ಮಾರ್ಚ್ 15ರೊಳಗೆ ತಮ್ಮ ದೇಶದಿಂದ ಹಿಂತೆಗೆದುಕೊಳ್ಳುವಂತೆ ಕರೆ ನೀಡಿದ ನಂತರ ಈ ಬೆಳವಣಿಗೆ ನಡೆದಿದೆ.

ದೆಹಲಿಯಲ್ಲಿ ಉಭಯ ಪಕ್ಷಗಳ ನಡುವೆ ಉನ್ನತ ಮಟ್ಟದ ಸಭೆಯ ನಂತರ, ಮಾಲ್ಡೀವ್ಸ್ ವಿದೇಶಾಂಗ ಸಚಿವಾಲಯವು ಭಾರತವು ಮಾಲ್ಡೀವ್ಸ್‌ನಲ್ಲಿ ಮೂರು ವಾಯುಯಾನ ವೇದಿಕೆಗಳನ್ನು ನಿರ್ವಹಿಸುತ್ತಿರುವ ತನ್ನ ಮಿಲಿಟರಿ ಸಿಬ್ಬಂದಿಯನ್ನು ಮೇ 10ರೊಳಗೆ ಬದಲಾಯಿಸಲಿದೆ ಮತ್ತು ಮೊದಲ ಹಂತದ ಪ್ರಕ್ರಿಯೆಯು ಮಾರ್ಚ್ 10ರೊಳಗೆ ಪೂರ್ಣಗೊಳ್ಳಲಿದೆ ಎಂದು ಹೇಳಿದೆ.

ಭಾರತ ಸರ್ಕಾರವು ಮಾರ್ಚ್ 10 ರೊಳಗೆ ಮೂರು ವಾಯುಯಾನ ವೇದಿಕೆಗಳಲ್ಲಿ ಒಂದರಲ್ಲಿ ಮಿಲಿಟರಿ ಸಿಬ್ಬಂದಿಯನ್ನು ಬದಲಾಯಿಸುತ್ತದೆ. ಮೇ 10ರೊಳಗೆ ಇತರ ಎರಡು ವೇದಿಕೆಗಳಲ್ಲಿ ಮಿಲಿಟರಿ ಸಿಬ್ಬಂದಿಯನ್ನು ಬದಲಾಯಿಸುತ್ತದೆ ಎಂದು ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

ಚೀನಾ ಪರ ನಾಯಕನಾಗಿ ಕಂಡು ಬರುವ ಮುಯಿಝು, ಮಾರ್ಚ್ 15 ರೊಳಗೆ ತನ್ನ ಎಲ್ಲಾ ಮಿಲಿಟರಿ ಸಿಬ್ಬಂದಿಯನ್ನು ದ್ವೀಪ ರಾಷ್ಟ್ರದಿಂದ ಹಿಂತೆಗೆದುಕೊಳ್ಳುವಂತೆ ಭಾರತವನ್ನು ಕಳೆದ ತಿಂಗಳು ಕೇಳಿಕೊಂಡಿತ್ತು. ಮಾಲ್ಡೀವ್ಸ್‌ನ ಜನರಿಗೆ ಮಾನವೀಯ ಮತ್ತು ವೈದ್ಯಕೀಯ ಸ್ಥಳಾಂತರಿಸುವ ಸೇವೆಗಳನ್ನು ಒದಗಿಸುವ ಭಾರತೀಯ ವಾಯುಯಾನ ವೇದಿಕೆಗಳ ನಿರಂತರ ಕಾರ್ಯಾಚರಣೆಯನ್ನು ಸಕ್ರಿಯಗೊಳಿಸಲು ಪರಸ್ಪರ ಕಾರ್ಯಸಾಧ್ಯವಾದ ಪರಿಹಾರಗಳನ್ನು ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಕೋರ್–ಗ್ರೂಪ್ ಸಭೆ ನಂತರ ಹೇಳಿಕೆಯಲ್ಲಿ ತಿಳಿಸಿದೆ.

ಈಗ ನಡೆಯುತ್ತಿರುವ ಅಭಿವೃದ್ಧಿ ಸಹಕಾರ ಯೋಜನೆಗಳ ಅನುಷ್ಠಾನವನ್ನು ತ್ವರಿತಗೊಳಿಸುವುದು ಸೇರಿದಂತೆ ಪಾಲುದಾರಿಕೆಯನ್ನು ಹೆಚ್ಚಿಸುವ ಹಂತಗಳನ್ನು ಗುರುತಿಸುವ ನಿಟ್ಟಿನಲ್ಲಿ ದ್ವಿಪಕ್ಷೀಯ ಸಹಕಾರಕ್ಕೆ ಸಂಬಂಧಿಸಿದ ವ್ಯಾಪಕ ವಿಷಯಗಳ ಕುರಿತು ಉಭಯ ಕಡೆಯವರು ತಮ್ಮ ಚರ್ಚೆಗಳನ್ನು ಮುಂದುವರೆಸಿದ್ದಾರೆ ಎಂದು ಅದು ಹೇಳಿದೆ.

ಫೇರ್ಸ್ ಹೇಜ್ ಮೊಹಮ್ಮದ್ ಆಲ್ ಅಸ್ಟೂಟ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಫೆ. 3– ಡಾ. ಶೌಕತ್ ಅರಾ ಖಾನಂ ಅವರ ಮಾರ್ಗದರ್ಶನದಲ್ಲಿ ಫೇರ್ಸ್ ಹೇಜ್ ಮೊಹಮ್ಮದ್ ಆಲ್ ಅಸ್ಟೂಟ್ ಜೀವರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಚುನಾವಣೆ ಟಿಕೆಟ್ ಕೊಡಿಸುವುದಾಗಿ ಹಣ ಪಡೆದು ವಂಚಿಸಿದ ಡ್ರೋನ್ ಪ್ರತಾಪ್



ಬೆಂಗಳೂರು,ಫೆ.3–ಯಾವುದೇ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಳ್ಳದೇ ಇದ್ದರೂ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಹೇಳಿ ಜಿಲ್ಲಾ ಪಂಚಾಯಿತಿ ಟಿಕೆಟ್ ಕೊಡಿಸುವುದಾಗಿ ಡ್ರೋನ್ ಪ್ರತಾಪ್ ಹಣ ಪಡೆದು ವಂಚಿಸಿದ್ದಾರೆ ಎಂದು ಚಂದನ್‌ಕುಮಾರ್ ಗೌಡ ಎನ್ನುವವರು ದೂರು ನೀಡಿದ್ದಾರೆ.

ಜಿಲ್ಲಾ ಪಂಚಾಯಿತಿ ಚುನಾವಣೆ ಟಿಕೆಟ್ ಕೊಡಿಸುವುದಾಗಿ ಡ್ರೋನ್ ಪ್ರತಾಪ್ ತಮ್ಮಿಂದ 2 ಲಕ್ಷ ರೂ. ಪಡೆದು ವಂಚಿಸಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತರಿಗೆ ಚಂದನ್‌ಕುಮಾರ್ ದೂರು ನೀಡಿದ್ದಾರೆ. ಈ ಕುರಿತಂತೆ ಡ್ರೋನ್ ಪ್ರತಾಪ್ ಜೊತೆ ಮಾತನಾಡಿರುವ ಆಡಿಯೋವನ್ನೂ ಅವರು ನೀಡಿದ್ದಾರೆ. ಚಂದನ್‌ಕುಮಾರ್ ಮತ್ತು ಡ್ರೋನ್ ಆಡಿದ ಆಡಿಯೋದಲ್ಲಿ, ನಂದು ಸ್ವಲ್ಪ ಕಾಂಟ್ರವರ್ಸಿ ಆದ ಮೇಲೆ ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ ಮಾಡುತ್ತೇವೆ ಬಾ ಅಂದ್ರು. ಆಗ ನಾನು ಹೆಚ್‌ಡಿಕೆ ಜೊತೆ ಇದ್ದೆ ಎಂದು ಡ್ರೋನ್ ಹೇಳುತ್ತಾರೆ. ದೂರುದಾರ ಚಂದನ್, ತುಂಬಾ ಜನಪ್ರಿಯವಾಗಿದ್ರಿ ಅನ್ನುತ್ತಾರೆ. ಮತ್ತೆ ಡ್ರೋನ್ ಪ್ರತಾಪ್, ನನ್ನ ಭಾವಚಿತ್ರ ಎಲ್ಲೂ ಹಾಕಲ್ಲ. ಬಿಡದಿ ತೋಟದ ಮನೆಗೆ ಇಬ್ಬರೂ ಒಮ್ಮೆ ಹೋಗೋಣ. ಕುಮಾರಸ್ವಾಮಿ ಒಳ್ಳೆ ವ್ಯಕ್ತಿ ಪಾಪ. ಕೆಟ್ಟ ಪದ ಬಳಸ್ತಾರೆ ಹೊರತು ಮೋಸ ಇಲ್ಲ. ಡಿಕೆಶಿ ರೀತಿ ಪೇಪರ್ ಎಸೆಯೋದು ಪೇಪರ್ ಹರಿದು ಹಾಕೋ ಕೆಲಸ ಹೆಚ್‌ಡಿಕೆ ಮಾಡಲ್ಲ. ಯಾರೇ ಹೋದರು ದುಡ್ಡು ಕೊಡ್ತಾರೆ ಎಂದು ಆಡಿಯೋದಲ್ಲಿದೆ.

ಮೈಸೂರಲ್ಲಿ ಹೊಸ ಸಾಮಾಜಿಕ ಕ್ರಮದ ಕಡೆಗೆ ಜಾಥಾ



ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಧಾನ್ ಫೌಂಡೇಶನ್‌ನ 'ಹೊಸ ಸಾಮಾಜಿಕ ಕ್ರಮದ ಕಡೆಗೆ' ಜಾಥಾಗೆ ಎಲ್‌ಐಸಿ ವ್ಯವಸ್ಥಾಪಕ ಹೆಚ್.ಆರ್.ಸತೀಶ್ ಚಾಲನೆ ನೀಡಿದರು.

ಮೈಸೂರು, ಫೆ.3(ಎಂಟಿವೈ)– ಧಾನ್ ಫೌಂಡೇಶನ್ ಹಾಗೂ ಬ್ಯಾಂಕ್ ಆಫ್ ಬರೋಡ ಸಹಯೋಗದೊಂದಿಗೆ ಶನಿವಾರ ಆಯೋಜಿಸಿದ್ದ 'ಹೊಸ ಸಾಮಾಜಿಕ ಕ್ರಮದ ಕಡೆಗೆ' ಜಾಥಾದಲ್ಲಿ ನೂರಾರು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಆಯೋಜಿಸಿದ್ದ ಜಾಥಾಗೆ ಎಲ್‌ಐಸಿ ವ್ಯವಸ್ಥಾಪಕ ಹೆಚ್.ಆರ್.ಸತೀಶ್ ಚಾಲನೆ ನೀಡಿದರು. ಬಳಿಕ ಜಯಚಾಮರಾಜ ಒಡೆಯರ್(ಹಾರ್ಡಿಂಗ್) ವೃತ್ತ ಹಾಗೂ ಬಿ.ಎನ್.ರಸ್ತೆ ಮೂಲಕ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಪಿ.ಕಾಳಿಂಗರಾವ್ ಮಂಟಪದವರೆಗೆ ಜಾಥಾ ಸಾಗಿತು.

ಈ ವೇಳೆ ನಡೆದ ಕಾರ್ಯಕ್ರಮದಲ್ಲಿ ಧಾನ್ ಫೌಂಡೇಶನ್‌ನ ಶಂಕರ್ ಪ್ರಸಾದ್ ಮಾತನಾಡಿ, ಸಮಾಜದಲ್ಲಿ ಆಗು ಹೋಗುಗಳ ಬಗ್ಗೆ ತಿಳಿಸುವುದರ ಜೊತೆಗೆ ಪ್ರತಿಯೊಬ್ಬ ಮಹಿಳೆಯು ಬದಲಾವಣೆ ಆಗಬೇಕಿದೆ. ಸಮಾಜದಲ್ಲಿ ಮಹಿಳೆಯರ ಪಾತ್ರ ಎಷ್ಟಿದೆ ಅವರ ಶ್ರಮ ಏನಿದೆ? ಎಂಬುದನ್ನು ಸಮಾಜಕ್ಕೆ ತಿಳಿಸುವ ಕೆಲಸ ಆಗಬೇಕು. ಮಹಿಳೆಯರಿಗೆ ಸಮಾನತೆ ನೀಡಿ ಎಂಬ ಸಂದೇಶವನ್ನು ಸಾರುವ ಉದ್ದೇಶದಿಂದ ವಾಕಥಾನ್ ಆಯೋಜಿಸಿದ್ದೇವೆ. ಭ್ರಷ್ಟಾಚಾರಮುಕ್ತ ಸಮಾಜ ನಿರ್ಮಾಣ ಕುರಿತು ಸಾರ್ವಜನಿಕರಿಗೆ ತಿಳಿವಳಿಕೆ ನೀಡುವುದು ಹಾಗೂ ಮಕ್ಕಳಲ್ಲಿ ಭಾವೈಕ್ಯತೆ ಮೂಡಿಸುವುದು ಇದರ ಉದ್ದೇಶವಾಗಿದೆ ಎಂದು ಹೇಳಿದರು.

ಜಾಗತೀಕರಣದ ಜಗತ್ತಿನಲ್ಲಿ ಮಹಿಳೆಯರ ಸಬಲೀಕರಣದ ಮೂಲಕ ಬಡತನವನ್ನು ನಿರ್ಮೂಲನೆ ಮಾಡುವುದು ಎಂಬ ವಿಷಯವನ್ನು ಪರಿಗಣಿಸುತ್ತದೆ. ಮಹಿಳೆಯರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಕಾನೂನು ಅರಿವು ನೀಡುವುದರ ಮೂಲಕ ಸಬಲೀಕರಣ ಗೊಳಿಸಿ, ಸಮಾಜದ ಮುಖ್ಯವಾಹಿನಿ ಯಲ್ಲಿ ತರುವುದು ಯೋಜನೆಯ ಮುಖ್ಯ ಗುರಿಯಾಗಿರುತ್ತದೆ ಎಂದರು.

ಧಾನ್ ಫೌಂಡೇಶನ್ ಸಿಬ್ಬಂದಿಗಳಾದ ನಾರಾಯಣ್ ಹೆಗಡೆ, ಹುಸೇನ್, ಮಂಜುನಾಥ್, ಪ್ರಭುಶಂಕರ್, ಭಾಗ್ಯ, ಜಯಲಕ್ಷ್ಮಿ, ಬ್ಯಾಂಕ್ ಆಫ್ ಬರೋಡ ಕ್ಷೇತ್ರಿಯ ಕಾರ್ಯಾಲಯದ ದೀಪಾ, ಬ್ಯಾಂಕ್ ಆಫ್ ಬರೋಡ ಹಿರಿಯ ಶಾಖಾ ಪ್ರಬಂಧಕ ಕೆ.ಸಂತೋಷ್‌ಕುಮಾರ್, ಎಲ್‌ಐಸಿ ವ್ಯವಸ್ಥಾಪಕರಾದ ಟಿ.ವಿ.ಸುಜಾತ, ಅಭಿವೃದ್ಧಿ ಅಧಿಕಾರಿಗಳಾದ ಎಸ್.ಗೌರೀಶ್, ಕಿರಣ್, ಪೇರಿ ಶ್ರೀನಿವಾಸ್, ನೂತನ್, ರಾಮ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಟ್ರಸ್ಟ್‌ಗೆ 1.10 ಕೋಟಿ ರೂ. ಪಂಗನಾಮ ಹಾಕಿ ಪರಾರಿಯಾಗಿದ್ದವನ ಬಂಧನ

ಆರೋಪಿಯಿಂದ 43.88 ಲಕ್ಷ ವಸೂಲಿ

ಮಳವಳ್ಳಿ,ಫೆ.3– 25 ಕೋಟಿ ರೂ. ದೇಣಿಗೆ ನೀಡುವುದಾಗಿ ಟ್ರಸ್ಟ್‌ನ ಪದಾಧಿಕಾರಿಗಳನ್ನು ನಂಬಿಸಿ ಅವರ ಬಳಿಯಿದ್ದ 1 ಕೋಟಿ 10 ಲಕ್ಷ ಹಣವನ್ನು ಎಗರಿಸಿ ಪರಾರಿಯಾಗಿದ್ದ ಆರೋಪಿಯನ್ನು ಬೆಳಕವಾಡಿ ಪೊಲೀಸರು ಬಂಧಿಸಿ, ಆತನಿಂದ 43.88.500 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

ಆಂಧ್ರಪ್ರದೇಶದ ವೆಲ್ಲೂರು ಜಿಲ್ಲೆಯ ಕುಪ್ಪಂ ಮಂಡಲ್ ಗ್ರಾಮದ ಶಿವ ಅಲಿಯಾಸ್ ಸೂರಿ, ಅಲಿಯಾಸ್ ಸೂರ್ಯ, ಅಲಿಯಾಸ್ ಗೋವರ್ಧನ್ ಬಂಧಿತ ಆರೋಪಿಯಾಗಿದ್ದು, ಈತನ ಬಳಿ ಇದ್ದ 43,88,500 ರೂ.ಗಳ ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮತ್ತೊಬ್ಬ ಆರೋಪಿ ತಾಲೂಕಿನ ಹೆಬ್ಬಣಿ ಗ್ರಾಮದಲ್ಲಿರುವ ವಿರಕ್ತಮಠದ ಪೀಠಾಧ್ಯಕ್ಷ ಶಂಭುಲಿಂಗ ಸ್ವಾಮೀಜಿ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಶಿವ ಆಂಧ್ರಪ್ರದೇಶದ ಕುಪ್ಪಂ ಮಂಡಲ್ ಗ್ರಾಮದವನಾಗಿದ್ದು, ಚಾಮರಾಜನಗರ ಜಿಲ್ಲೆಯ ಸಿಂಗನಲ್ಲೂರು ಗ್ರಾಮದ ಬಸವನಾಯಕ ಎಂಬುವರ ಪುತ್ರಿಯನ್ನು ಕಳೆದ 2010–11ನೇ ವಿವಾಹವಾಗಿ ಓರ್ವ ಪುತ್ರ ಹಾಗೂ ಓರ್ವ ಪುತ್ರಿ ಇದ್ದು, ಈತನಿಗೆ ರಿಯಲ್ ಎಸ್ಟೇಟ್ ವ್ಯವಹಾರದ ಜೊತೆಗೆ ಬ್ಲಾಕ್ ಮ್ಯಾಜಿಕ್ ವಿದ್ಯೆಯನ್ನು ಕಲಿತು ಜನರಿಗೆ ಮೋಸ ಮಾಡುವುದೇ ಕಾಯಕವಾಗಿತ್ತು ಎನ್ನಲಾಗಿದೆ.

ಘಟನೆ ವಿವರ: 2023 ಅಕ್ಟೋಬರ್‌ನಲ್ಲಿ ತಾಲೂಕಿನ ಹೆಬ್ಬಣಿ ಗ್ರಾಮದ ನಿರ್ವಾಣೇಶ್ವರ ವಿರಕ್ತಮಠದ ಶ್ರೀ ಶಂಭುಲಿಂಗ ಸ್ವಾಮೀಜಿಗಳನ್ನು ಭೇಟಿಯಾಗಿ ನಾನು ಜಮೀನುಗಳನ್ನು ಖರೀದಿಸಲು ಬಂದಿದ್ದೇನೆ. ನಿಮ್ಮ ಕಡೆಯವರ ಜಮೀನುಗಳು ಯಾವುದಾದರೂ ಇದ್ದರೆ ಕೊಡಿಸಿ ಎಂದು ಪರಿಚಯ ಮಾಡಿಕೊಂಡಿದ್ದಾನೆ. ಬಳಿಕ ತನಗೆ ಬ್ಲಾಕ್ ಮ್ಯಾಜಿಕ್ ಮಾಡಲು ಬರುವ ವಿದ್ಯೆಯನ್ನು ಸ್ವಾಮೀಜಿಯ ಬಳಿ ಹೇಳಿಕೊಂಡಾಗ ಇಬ್ಬರು ಸಂಚು ರೂಪಿಸಿ ತಾಲೂಕಿನ ಶಿಂಷಾಪುರ ಗ್ರಾಮದ ಶ್ಯಾಲೋಲ್ ಎಜುಕೇಷನ್ ಚಾರಿಟೆಬಲ್ ಟ್ರಸ್ಟ್ ಖಜಾಂಚಿ ಎಸ್. ಮೇರಿ ಅವರನ್ನು ಕಳೆದ ಮೂರು ತಿಂಗಳಗಳ ಹಿಂದೆ ಶಂಭುಲಿಂಗಸ್ವಾಮೀಜಿಗಳು ಆರೋಪಿ ಸೂರ್ಯನನ್ನು ದೊಡ್ಡ ಉದ್ಯಮಿ ಎಂದು ಪರಿಚಯ ಮಾಡಿಕೊಟ್ಟರು ಎನ್ನಲಾಗಿದೆ.

ಬಳಿಕ ನಿಮ್ಮ ಟ್ರಸ್ಟ್ ಅಭಿವೃದ್ಧಿಗೆ ದೇಣಿಗೆ ನೀಡಲು ಮುಂದಾಗಿದ್ದಾರೆ ಎಂದು ಸ್ವಾಮೀಜಿಗಳು ತಿಳಿಸಿದರು. ಈ ಮಾತನ್ನು ನಂಬಿದ ಎಸ್.ಮೇರಿ ಅವರು ಶಂಭುಲಿಂಗ ಸ್ವಾಮೀಜಿಗಳು ಮತ್ತು ಸೂರ್ಯ ಅವರನ್ನು ಟ್ರಸ್ಟ್‌ನ ಅಧ್ಯಕ್ಷ ಮೇರಿನ್ ಪಿಂಟೋ ಅವರಿಗೆ ಪರಿಚಯ ಮಾಡಿಕೊಟ್ಟು ಆರೋಪಿ ಸೂರ್ಯನನ್ನು ಅಭಿನಂದಿಸಿದ್ದಾರೆ. ಇದೇ ವೇಳೆ



ಟ್ರಸ್ಟ್‌ಗೆ ವಂಚಿಸಿ 1.10 ಕೋಟಿ ಹಣವನ್ನು ಎಗರಿಸಿ ಪರಾರಿಯಾಗಿದ್ದ ಆರೋಪಿ(ಬಲ ತುದಿ).

ಆರೋಪಿ ಸೂರ್ಯ ನಿಮ್ಮ ಟ್ರಸ್ಟ್‌ಗೆ 25 ಕೋಟಿ ದೇಣಿಗೆ ನೀಡಿದರೆ ಬದಲಿಗೆ 1 ಕೋಟಿ 10 ಲಕ್ಷ ರೂ.ಗಳನ್ನು ತನಗೆ ತೆರಿಗೆ ಕಟ್ಟಲು ನಗದು ರೂಪದಲ್ಲಿ ಕೊಡಬೇಕೆಂದು ನಂಬಿಸಿದ್ದಾರೆ. ಇದನ್ನು ನಂಬಿದ ಟ್ರಸ್ಟ್ ಪದಾಧಿಕಾರಿಗಳು ಜ.19ರಂದು ನಗದು ಹಣವನ್ನು ರೆಡಿಮಾಡಿಕೊಂಡು ಆರೋಪಿ ಸೂರ್ಯ ಹಾಗೂ ಶಂಭುಲಿಂಗಸ್ವಾಮೀಜಿಗಳಿಗೆ ವಿಷಯ ತಿಳಿಸಿದ್ದಾರೆ. ಜ.20ರಂದು ನೋಟಿನಂತೆ ಇದ್ದ ಬಿಳಿ ಪೇಪರ್‌ನ 160 ಕಟ್ಟನ್ನು ಚೀಲದಲ್ಲಿ ಹಾಕಿಕೊಂಡು ಅದರ ಮೇಲೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಸ್ಟಿಕ್ಕರ್ ಕಾಣುವ ಹಾಗೇ ಶಿಂಷಾಪುರ ಗ್ರಾಮದ ಮೇರಿ ಅವರ ಸಹೋದರಿ ಮನೆಗೆ ಆಗಮಿಸಿದರು. ಔಪಚಾರಿಕ ವಿಚಾರಗಳನ್ನು ಮಾತನಾಡಿ ಒಂದು ಕೋಟಿ ಹತ್ತು ಲಕ್ಷ ರೂಪಾಯಿ ತೋರಿಸುವಂತೆ ಹೇಳಿ ಹಣ ನೋಡಿದ ಬಳಿಕ ತನ್ನ ಬಳಿಯಲ್ಲಿದ್ದ ನಕಲಿ ನೋಟುಗಳ ಚೀಲವನ್ನು ಪಕ್ಕದಲ್ಲಿ ಇಟ್ಟು ತಾನು ತಂದಿದ್ದ ಜ್ಯೂಸನ್ನು ಟ್ರಸ್ಟ್‌ನ ಅಧ್ಯಕ್ಷ ಮೇರಿನ್ ಪಿಂಟೋ ಹಾಗೂ ಖಜಾಂಚಿ ಎಸ್.ಮೇರಿ ಅವರಿಗೆ ಕುಡಿಸಿದ ಸ್ವಲ್ಪ ಸಮಯದಲ್ಲಿ ಅವರಿಬ್ಬರು ಪ್ರಜ್ಞೆ ಕಳೆದುಕೊಂಡು ಬಿದ್ದರು. ಬಳಿಕ ಆರೋಪಿ ಸೂರ್ಯ ಹಣದ ಸಮೇತ ಪರಾರಿಯಾಗಿದ್ದಾನೆ.

ಕೆಲ ಸಮಯದ ನಂತರ ಎಚ್ಚರಗೊಂಡ ಎಸ್.ಮೇರಿ ಅವರು ತಾವು ಮೋಸ ಹೋಗಿರುವುದನ್ನು ತಿಳಿದು ಬೆಳಕವಾಡಿ ಪೊಲೀಸ್ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡ ಪಿಎಸ್‌ಐ ವಿ.ಸಿ.ಅಶೋಕ್ ಅವರು. ಜಿಲ್ಲಾ ವರಿಷ್ಠಾಧಿಕಾರಿ ಯತೀಶ್ ಹಾಗೂ ಹೆಚ್ಚುವರಿ ವರಿಷ್ಠಾಧಿಕಾರಿ ತಿಮ್ಮಯ್ಯ ಅವರ ಮಾರ್ಗದರ್ಶನದಲ್ಲಿ, ಡಿವೈಎಸ್ಪಿ ಕೃಷ್ಣಪ್ಪ, ಸಿಪಿಐ ಬಿ.ಎಸ್. ಶ್ರೀಧರ್ ಅವರ ನೇತೃತ್ವದಲ್ಲಿ ತನಿಖೆ ನಡೆಸಿ ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ಎಂದು ಸುತ್ತಾಡುತ್ತಿದ್ದ ಆರೋಪಿಯನ್ನು ಜ.28 ರಂದು ಮೈಸೂರಿನ ರಿಂಗ್ ರೋಡ್‌ನಲ್ಲಿ ಬಂಧಿಸಲಾಗಿದೆ.

ಆರೋಪಿಯು ವಿಚಾರಣೆ ವೇಳೆ 1 ಕೋಟಿ 10 ಲಕ್ಷ ರೂಪಾಯಿ ಅಲ್ಲ, ಟ್ರಸ್ಟ್‌ನವರು ನನಗೆ ನೀಡಿದ್ದು 70 ಲಕ್ಷ ರೂ. ಮಾತ್ರ. ಅದರಲ್ಲಿ ಶಂಭುಲಿಂಗಸ್ವಾಮೀಜಿಗಳಿಗೆ 25 ಲಕ್ಷ ನೀಡಿದ್ದೇನೆ ಎಂದು ವಿಚಾರಣೆ ವೇಳೆ ತಿಳಿಸಿದ್ದಾನೆ. ಆತನ ಬಳಿಯಲ್ಲಿದ್ದ 43,88,500 ರೂ. ನಗದು ಹಾಗೂ ಒಂದು ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಎರಡನೇ ಆರೋಪಿ ಹೆಬ್ಬಣಿ ಗ್ರಾಮದ ವಿರಕ್ತ ಮಠದ ಪೀಠಾಧಿಪತಿಗಳಾದ ಶಂಭುಲಿಂಗಸ್ವಾಮೀಜಿಗಳು ತಲೆಮರೆಸಿಕೊಂಡಿದ್ದು ಪೊಲೀಸರು ಆರೋಪಿಯ ಪತ್ತೆಗೆ ಬಲೆ ಬೀಸಿದ್ದಾರೆ. ಆರೋಪಿ ಸೂರ್ಯನನ್ನು ಮಂಗಳವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಶುಕ್ರವಾರ ಹೆಚ್ಚಿನ ವಿಚಾರಣೆಗಾಗಿ ಮತ್ತೆ ಪೊಲೀಸರ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ.

ಗ್ರಾಮೀಣ ಪ್ರದೇಶಕ್ಕೂ ಕಾಲಿಟ್ಟ ಸರಗಳ್ಳರು

ಜಮೀನಿಗೆ ತೆರಳುತ್ತಿದ್ದ ಮಹಿಳೆಯಿಂದ ಸರ ಕಿತ್ತುಕೊಂಡು ಪರಾರಿ

ಚಿನಕುರಳಿ, ಫೆ.3– ಸಾಮಾನ್ಯವಾಗಿ ನಗರ ಪ್ರದೇಶದಲ್ಲಿ ನಡೆಯುತ್ತಿದ್ದ ಸರಗಳ್ಳತ ಗ್ರಾಮೀಣ ಪ್ರದೇಶಕ್ಕೂ ಕಾಲಿಟ್ಟಿದ್ದು ಜನರು ಆತಂಕಕ್ಕೆ ಒಳಗಾಗಿದ್ದಾರೆ.



ಜಮೀನಿಗೆ ತೆರಳುತ್ತಿದ್ದ ಒಂಟಿ ಮಹಿಳೆಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಕಳ್ಳರು ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಚಿನಕುರಳಿ ಸಮೀಪದ ಕಡಬ ಗ್ರಾಮದಲ್ಲಿ ಗುರುವಾರ ಸಂಜೆ ಸಂಭವಿಸಿದೆ. ಕಡಬ ಗ್ರಾಮದ ಸ್ವಾಮೀಗೌಡ ಪತ್ನಿ ಸುಧಾ ಎಂಬುವರೇ ಮಾಂಗಲ್ಯ ಸರ ಕಳೆದುಕೊಂಡ ಗೃಹಿಣಿ. ಕಡಬ ಗ್ರಾಮದ ನಿವಾಸಿ ಸುಧಾ ಅವರು ಗ್ರಾಮದ ಹೊರವಲಯದಲ್ಲಿರುವ ತಮ್ಮ ತೋಟಕ್ಕೆಂದು ಸಂಜೆ 4.30ರ ವೇಳೆಯಲ್ಲಿ ಒಬ್ಬರೇ ತೆರಳುತ್ತಿದ್ದ ಸಂದರ್ಭದಲ್ಲಿ ಪಲ್ಸರ್ ಬೈಕ್‌ನಲ್ಲಿ ಬಂದ ಇಬ್ಬರು ಕಳ್ಳರು ಸುಧಾ ಅವರ ಮಾಂಗಲ್ಯ ಸರ ಕೀಳಲು ಕೈಹಾಕಿದ್ದಾರೆ. ಈ ವೇಳೆ ಸುಧಾ ಅವರು ಬಿಗಿಯಾಗಿ ಮಾಂಗಲ್ಯ ಸರವನ್ನು ಹಿಡಿದುಕೊಂಡಿದ್ದಾರೆ. ಇದರಿಂದ ಮಾಂಗಲ್ಯ ಸರ ಸ್ವಲ್ಪಕಟ್ಟಾಗಿ ಸುಧಾ ಅವರ ಬಳಿ ಸುಮಾರು 13 ಗ್ರಾಂ ನಷ್ಟು ಉಳಿದುಕೊಂಡಿದೆ.

ಉಳಿದ 37 ಗ್ರಾಂನಷ್ಟು ಚಿನ್ನದ ಸರವನ್ನು ಕಳ್ಳರು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಬಳಿಕ ಪತಿ ಸ್ವಾಮೀಗೌಡ ಅವರೊಂದಿಗೆ ಸುಧಾ ಅವರು ಪಾಂಡವಪುರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ವಿಷಯ ತಿಳಿದ ಅಪರ ಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ದೂರು ದಾಖಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಒಂಟಿ ಮಹಿಳೆಯರು ಜಮೀನುಗಳ ಬಳಿ ತೆರಳುತ್ತಿರುತ್ತಾರೆ. ಈ ವೇಳೆ ಬೈಕ್‌ನಲ್ಲಿ ಬರುವ ಅಪರಿಚಿತರು ಈ ರೀತಿ ಸರಗಳ್ಳತನ ಮಾಡುವುದರಿಂದ ಮಹಿಳೆಯರು ಸಾಕಷ್ಟು ಆತಂಕಕ್ಕೆ ಒಳಗಾಗಿದ್ದಾರೆ. ಹಾಗಾಗಿ ಪೊಲೀಸರು ಎಚ್ಚೆತ್ತು ಇಂತಹ ಪ್ರಕರಣಗಳ ಬಗ್ಗೆ ಕ್ರಮವಹಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಡಿ.ಕೆ.ಸುರೇಶ್‌ರಿಂದ ದೇಶ ಇಬ್ಭಾಗದ ಹೇಳಿಕೆ: ದೂರು ದಾಖಲು

ಮಂಡ್ಯ,ಫೆ.3– ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಿದ್ದು, ಪ್ರತ್ಯೇಕ ರಾಷ್ಟ್ರದ ಬೇಡಿಕೆ ಇಡಬೇಕಾಗುತ್ತದೆ ಎಂದು ಹೇಳಿಕೆ ನೀಡಿದ್ದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ವಿರುದ್ಧ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಡಿ.ಕೆ.ಸುರೇಶ್

ಜಿಲ್ಲಾ ಬಿಜೆಪಿ ವಕ್ತಾರ ಸಿ.ಟಿ.ಮಂಜುನಾಥ್ ನೇತೃತ್ವದಲ್ಲಿ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಬಿಜೆಪಿ ಕಾರ್ಯಕರ್ತರು ದೂರು ನೀಡಿದ್ದು, ಸಂಸದರು ಅಖಂಡತೆ ಹಾಗೂ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುತ್ತೇನೆ ಎಂದು ಪ್ರತಿಜ್ಞೆ ಸ್ವೀಕರಿಸುತ್ತಾರೆ. ಆದರೆ ಡಿ.ಕೆ.ಸುರೇಶ್ ಇದೀಗ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಇಟ್ಟಿದ್ದಾರೆ. ಪ್ರತ್ಯೇಕವಾದಿಗಳಿಗೆ ಈ ಹೇಳಿಕೆ ಕುಮ್ಮಕ್ಕು ನೀಡಿದ್ದು, ದೇಶಪ್ರೇಮಿಗಳಿಗೆ ನೋವುಂಟು ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದರಿಂದ ಸೆಕ್ಷನ್ 124 ಎ ಪ್ರಕಾರ ಡಿಕೆಸುರೇಶ್ ವಿರುದ್ಧ ಪ್ರಕರಣ ದಾಖಲಿಸಲು ಮಾಡಬೇಕು. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳದಿದ್ದರೆ ನ್ಯಾಯಾಲಯದಲ್ಲಿ ದಾವೆ ಹೂಡಲು ನಿರ್ಧಾರ ಮಾಡಲಾಗಿದೆ ಎಂದರು.

ಇಬ್ಬರು ಪೊಲೀಸ್ ಪೇದೆಗಳು ಲೋಕಾಯುಕ್ತ ಬಲೆಗೆ

ಮಂಡ್ಯ: ಲಂಚಕ್ಕೆ ಬೇಡಿಕೆ ಇಟ್ಟಿದ್ದ ಇಬ್ಬರು ಟ್ರಾಫಿಕ್ ಪೊಲೀಸರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಮಂಡ್ಯದ ಸಂಚಾರಿ ಪೊಲೀಸ್ ಠಾಣೆಯ ಕುಮಾರ್ ಮತ್ತು ಮಹದೇವ ಲೋಕಾಯುಕ್ತ ಬಲೆಗೆ ಬಿದ್ದ ಪೊಲೀಸರಾಗಿದ್ದು, ಸಯ್ಯದ್ ಪಾಷ ಎಂಬುವವರ ಬಳಿ 8 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು ಆ ಹಣವನ್ನು ಪಡೆಯುವ ಸಂದರ್ಭದಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಜ.25ರಂದು ಸಯ್ಯದ್ ಪಾಷ ಎಲೆಕ್ಟ್ರಿಕ್ ಬೈಕ್ ಅಪಘಾತವಾಗಿತ್ತು ಅಪಘಾತದ ಬಳಿಕ ಬೈಕ್ ಸೀಜ್ ಮಾಡಿದ್ದ ಮಂಡ್ಯ ಟ್ರಾಫಿಕ್ ಪೊಲೀಸರು, ತನಿಖೆ ನಂತರ ಬೈಕ್ ಬಿಡುಗಡೆ ಮಾಡಲು ಹಣಕ್ಕೆ ಬೇಡಿಕೆ ಇಟ್ಟಿದ್ದರು. ನಂತರ ಲೋಕಾಯುಕ್ತ ಪೊಲೀಸರಿಗೆ ಸಯ್ಯದ್ ಪಾಷ ದೂರು ನೀಡಿದ್ದರು. 8 ಸಾವಿರ ಲಂಚ ಪಡೆಯುವಾಗ ಟ್ರಾಫಿಕ್ ಪೊಲೀಸರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಫೆ.6, ಶ್ರೀರಂಗಪಟ್ಟಣದಲ್ಲಿ ಗ್ಯಾರಂಟಿಗಳ ಮನವರಿಕೆ, ಸವಲತ್ತುಗಳ ವಿತರಣೆ

ಶ್ರೀರಂಗಪಟ್ಟಣ, ಫೆ.3– ಸಾರ್ವಜನಿಕರಿಗೆ ಸರ್ಕಾರದ ಗ್ಯಾರಂಟಿ ಯೋಜನೆಗಳ ಮನವರಿಕೆ ಮತ್ತು ಅರ್ಹ ಫಲಾನುಭವಿಗಳಿಗೆ ಸವಲತ್ತು ವಿತರಣಾ ಕಾರ್ಯಕ್ರಮಕ್ಕೆ ಕಂದಾಯ ಸಚಿವ ಕೃಷ್ಣಭೈರೇಗೌಡ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಆಗಮಿಸಲಿದ್ದಾರೆ ಎಂದು ಶಾಸಕ ರಮೇಶಬಂಡಿಸಿದ್ದೇಗೌಡ ತಿಳಿಸಿದ್ದಾರೆ.

ಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಾಲಯದ ಮೈದಾನದಲ್ಲಿ ಫೆ.6 ರಂದು ನಡೆಯಲಿರುವ ಫಲಾನುಭವಿಗಳ ಸಮಾವೇಶ ಮತ್ತು ಸರ್ಕಾರದ ವಿವಿಧ ಸವಲತ್ತುಗಳ ವಿತರಣಾ ಕಾರ್ಯಕ್ರಮದ ಸಿದ್ಧತೆಯನ್ನು ಜಿಲ್ಲಾಧಿಕಾರಿ ಕುಮಾರ್ ಹಾಗೂ ಸ್ಥಳೀಯ ಅಧಿಕಾರಿಗಳೊಂದಿಗೆ ಪರಿಶೀಲಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.



ಸಮಾವೇಶ ಮತ್ತು ಸರ್ಕಾರದ ವಿವಿಧ ಸವಲತ್ತುಗಳ ವಿತರಣಾ ಕಾರ್ಯಕ್ರಮದ ಸಿದ್ಧತೆಯನ್ನ ವೀಕ್ಷಿಸುತ್ತಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಕುಮಾರ್ ಹಾಗೂ ಸ್ಥಳೀಯ ಅಧಿಕಾರಿಗಳು.

ಗ್ಯಾರಂಟಿ ಯೋಜನೆಗಳನ್ನು ಜನರಿಗೆ ಮನದಟ್ಟು ಮಾಡಿಕೊಡುವುದರ ಜೊತೆಗೆ ಎಸ್‌ಎಚ್‌ಜಿ ಗುಂಪುಗಳಿಗೆ ಸುಮಾರು 6 ಕೋಟಿ ರೂ. ಅನುದಾನ, ಎನ್‌ಆರ್‌ಎಲ್‌ಎಂ ಘಟಕಗಳಿಗೆ ಸುಮಾರು 4 ರಿಂದ 5 ಕೋಟಿ ರೂ. ಹಣ ಬಿಡುಗಡೆ, ಕೃಷಿ ಇಲಾಖೆಯಿಂದ ಸುಮಾರು 1 ಸಾವಿರ ಜನರಿಗೆ ಸೌಲಭ್ಯಗಳ ವಿತರಣೆ. ಜೊತೆಗೆ ಸ್ಥಳೀಯ ಪುರಸಭೆ ವತಿಯಿಂದ ಸುಮಾರು 100 ರಿಂದ 200 ಮಂದಿಗೆ ವೈಯಕ್ತಿಕ ಸೌಲಭ್ಯ ಕಲ್ಪಿಸಲು ಹಣ ಬಿಡುಗಡೆ, ಹೀಗೆ ಎಲ್ಲಾ ಇಲಾಖೆಗಳಿಂದ ಸುಮಾರು 10 ಕೋಟಿ ರೂ. ಗಳಿಗೂ ಅಧಿಕ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ಪಾಲ್ಗೊಳ್ಳುವರು. ಈ ವೇಳೆ ಜಿಲ್ಲಾಧಿಕಾರಿ ಕುಮಾರ್, ಪಾಂಡವಪುರ ಉಪವಿಭಾಗಾಧಿಕಾರಿ ನಂದೀಶ್, ತಹಸೀಲ್ದಾರ್ ಪರುಶುರಾಮ್ ಸತ್ತಿಗೇರಿ, ತಾಲೂಕು ಪಂಚಾಯಿತಿ ಇಒ ವೇಣು, ಕಂದಾಯ ನಿರೀಕ್ಷಕ ರೇವಣ್ಣ, ಪುರಸಭೆ ಮುಖ್ಯಾಧಿಕಾರಿ ರಾಜಣ್ಣ ಸೇರಿದಂತೆ ಇತರ ಅಧಿಕಾರಿಗಳು ಜೊತೆಯಲ್ಲಿದ್ದರು.

ಪಾರ್ವತಮ್ಮ ನಿಧನ

ಕೆ.ಆರ್.ಪೇಟೆ, ಫೆ.3– ಪಟ್ಟಣದ ಹೊಸಹೊಳಲು ಗ್ರಾಮದ ನೇಕಾರ ಕುರುಹಿನಶೆಟ್ಟಿ ಸಮಾಜದ ಮುಖಂಡರಾದ ಸೈಕಲ್ ಶಾಪ್ ರಮೇಶ್ ಅವರ ತಾಯಿ ಪಾರ್ವತಮ್ಮ (90) ಅನಾರೋಗ್ಯದಿಂದ ನಿಧನ ಹೊಂದಿರುತ್ತಾರೆ.



ಮೃತರು ಪುತ್ರ, ಮೂವರು ಪುತ್ರಿಯರು, ಅಳಿಯಂದಿರು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ನಿಧನಕ್ಕೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಆರ್.ಲೋಕೇಶ್, ಪುರಸಭಾ ಮಾಜಿ ಉಪಾಧ್ಯಕ್ಷೆ ಗಾಯತ್ರಿ, ಪುರಸಭಾ ಸದಸ್ಯರಾದ ಮಹೇಶ್ ಕುಮಾರ್, ಅಶೋಕ್‌ಕುಮಾರ್ ಸೇರಿದಂತೆ ಗಣ್ಯವ್ಯಕ್ತಿಗಳು ಭೇಟಿ ನೀಡಿ ಸಂತಾಪ ಸೂಚಿಸಿದ್ದರು.

ಒಂದನೇ ಪುಟದಿಂದ

ಅಧಿಕಾರಿಗಳು, ಪತ್ರಕರ್ತರ ಉತ್ಸುಕತೆ

ಕೆಲವು ಕ್ಷೇತ್ರಗಳಲ್ಲಿ ವರ್ಚಸ್ವಿ ಮತ್ತು ಸಮರ್ಥ ಅಭ್ಯರ್ಥಿಗಳಿಲ್ಲ. ಅಂತಹ ಕ್ಷೇತ್ರಗಳಿಗೆ ಈ ಅಧಿಕಾರಿಗಳನ್ನು ಕಣಕ್ಕಿಳಿಸಬೇಕು ಎಂಬ ಉದ್ದೇಶ ರಾಜಕೀಯ ಪಕ್ಷಗಳಲ್ಲಿದೆ. ಕಣಕ್ಕಿಳಿಯುವ ಅಧಿಕಾರಿಗಳು ಚುನಾವಣಾ ವೆಚ್ಚವನ್ನು ಅವರೇ ಭರಿಸಿಕೊಳ್ಳುತ್ತಾರೆ ಎಂಬ ಲೆಕ್ಕಾಚಾರವಿದೆ. ಆ ರೀತಿಯ ಸಾಮರ್ಥ್ಯ ಇರುವ ಅಧಿಕಾರಿಗಳೇ ಸ್ಪರ್ಧೆ ಬಗ್ಗೆ ಆಸಕ್ತಿ ತೋರಿರುವುದು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ದುಡಿದವರಿಗೆ ಕೆಲವು ಸೀಟು ನೀಡುವ ಚಿಂತನೆ ಬಿಜೆಪಿಯಲ್ಲಿದೆ. ಅದನ್ನು ಬಂಡವಾಳ ಮಾಡಿಕೊಳ್ಳಲು ಈ ಅಧಿಕಾರಿಗಳು ಪ್ರಯತ್ನ ಮಾಡಿದ್ದಾರೆ.

ಚುನಾವಣಾ ಕಣಕ್ಕಿಳಿಯಲು ಬಯಸಿ ಸೇವೆಯಲ್ಲಿರುವ ಕೆಲವು ಅಧಿಕಾರಿಗಳು ಸ್ವಯಂ ನಿವೃತ್ತಿ ಪಡೆಯಲು ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದಾರೆ. ಅದರಲ್ಲಿ ಹೆಚ್ಚಿನವರು, ಈ ವರ್ಷ ನಿವೃತ್ತಿಯಾಗುವವರು ಇದ್ದಾರೆ. ಇದರ ಜೊತೆಗೆ ಕಂದಾಯ, ಪೊಲೀಸ್, ಸಾರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಎರಡನೇ ಹಂತದ ಅಧಿಕಾರಿಗಳು ತೆರೆಮರೆಯಲ್ಲಿ ಪ್ರಯತ್ನ ಮಾಡಿದ್ದಾರೆ. ಇವರಲ್ಲಿ ಯಾರಿಗೆ ಟಿಕೆಟ್ ದೊರೆಯುತ್ತದೋ ಕಾದು ನೋಡಬೇಕಿದೆ. ಇದರ ನಡುವೆ ರಾಜ್ಯ ಮತ್ತು ರಾಷ್ಟ್ರೀಯ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿರುವ ಮತ್ತು ಸಲ್ಲಿಸುತ್ತಿರುವವರು ಬಿಜೆಪಿ ಟಿಕೆಟ್ ಪಡೆಯಲು ಕದ ತಟ್ಟಿದ್ದಾರೆ. ಈಗಾಗಲೇ ಒಬ್ಬ ಸಂಪಾದಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ರಾಜಕೀಯ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಈ ಸಾಲಿಗೆ ಇನ್ನೂ ಐವರು ಪತ್ರಕರ್ತರು ಕಮಲದ ಟಿಕೆಟ್ ಪಡೆಯಲು ಭಾರಿ ಕಸರತ್ತು ಮಾಡಿದ್ದಾರೆ. ಪತ್ರಕರ್ತರಾಗಿದ್ದ ಪ್ರತಾಪಸಿಂಹ ಎರಡು ಬಾರಿ ಮೈಸೂರಿನ ಸಂಸದರಾಗಿ ಆಯ್ಕೆಗೊಂಡ ನಂತರ ಕೆಲವು ಪತ್ರಕರ್ತರಲ್ಲಿ ಸಂಸತ್ ಪ್ರವೇಶಿಸುವ ಆಸೆ ಇಮ್ಮಡಿಗೊಂಡಿದೆ.

ಬಂಡೀಪುರಕ್ಕೆ ಅದರ ಕಳೇಬರ ತಂದರು!!

ಲಾರಿಯಲ್ಲಿ ಬಂಡೀಪುರಕ್ಕೆ ಸಾಗಿಸುವ ವೇಳೆ ಮಾರ್ಗ ಮಧ್ಯೆ ಆನೆ ಲಾರಿಯಲ್ಲೇ ಮೃತಪಟ್ಟಿದೆ. ಬಳಿಕ ಇಂದು ಮುಂಜಾನೆ 1.30ಕ್ಕೆ ರಾಂಪುರ ಕ್ಯಾಂಪ್‌ಗೆ ಕೇರಳದ ಅರಣ್ಯಾಧಿಕಾರಿಗಳ ತಂಡ ಲಾರಿಯಲ್ಲೇ ಮೃತಪಟ್ಟಿದ್ದ, ತಣ್ಣೀರು ಆನೆ ಕಳೇಬರವನ್ನು ತಂದಿದ್ದಾರೆ.

ವ್ಯಾಪಕ ಆಕ್ರೋಶ: ಜನ ವಸತಿ ಪ್ರದೇಶದಲ್ಲೇ ದಿನವಿಡೀ ಇದ್ದರೂ ಯಾರ ಮೇಲೂ ದಾಳಿ ಮಾಡದ ತಣ್ಣೀರು ಆನೆಯ ಸಾವಿನ ಸುದ್ದಿ ಕರ್ನಾಟಕ ಮಾತ್ರವಲ್ಲದೆ, ಕೇರಳ, ತಮಿಳುನಾಡಲ್ಲೂ ಆಕ್ರೋಶಕ್ಕೆ ಕಾರಣವಾಗಿದೆ. ಕೇರಳದ ಮಾನಂದವಾಡಿಯಲ್ಲಿ ತಣ್ಣೀರು ಆನೆ ಸೆರೆ ಕಾರ್ಯಾಚರಣೆಯನ್ನು ಕೇರಳ ಹಾಗೂ ತಮಿಳುನಾಡಿನ ಮಾಧ್ಯಮಗಳು ದೊಡ್ಡಮಟ್ಟದಲ್ಲಿ ಸುದ್ದಿ ಭಿತ್ತರಿಸಿದ್ದವು. ಜೀವಂತವಾಗಿ ಸೆರೆ ಹಿಡಿದು ಸಮಾಧಾನದಲ್ಲಿದ್ದ ಕೇರಳದ ಅರಣ್ಯಾಧಿಕಾರಿಗಳಿಗೆ ಆನೆ ಸಾವು ತೀವ್ರ ಮುಜುಗರನ್ನುಂಟು ಮಾಡಿದೆ. ಅರವಳಿಕೆ ಚುಚ್ಚುಮದ್ದು ನೀಡಿದ ನಂತರ ಸಹಜ ಸ್ಥಿತಿಗೆ ಮರಳಲು ರಿವರ್ಸ್ ಇಂಜೆಕ್ಷನ್ ನೀಡಿ ಆರೈಕೆ ಮಾಡಬೇಕಾಗಿತ್ತು. ಆದರೆ, ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಆನೆ ಸ್ಥಳಾಂತರ ಪ್ರಕ್ರಿಯೆ ನಡೆಸಲಾಗಿದೆ ಎಂದು ವನ್ಯಜೀವಿ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಂಟಿ ಮರಣೋತ್ತರ ಪರೀಕ್ಷೆ: ತಣ್ಣೀರು ಆನೆ ಸಾವಿನ ಸುದ್ದಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಈ ಹಿನ್ನೆಲೆಯಲ್ಲಿ ಕೇರಳ ಸರ್ಕಾರ ಆನೆಯ ಸಾವಿನ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದರೆ, ಇತ್ತ ರಾಂಪುರ ಕ್ಯಾಂಪ್ ನಲ್ಲಿ ಆನೆ ಕಳೇಬರಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಕರ್ನಾಟಕ, ಕೇರಳದ ಅರಣ್ಯಾಧಿಕಾರಿಗಳ ಸಮ್ಮುಖದಲ್ಲಿ ಬಂಡೀಪುರದ ಪಶುವೈದ್ಯ ಡಾ.ಮಿರ್ಜಾ ವಾಸಿಂ ಹಾಗೂ ಕೇರಳದ ಪಶುವೈದ್ಯ ಡಾ. ಅಜೇಶ್ ಮರಣೋತ್ತರ ಪರೀಕ್ಷೆ ನಡೆಸಿದರು. ಮರಣೋತ್ತರ ಪರೀಕ್ಷೆ ವೇಳೆ ಆನೆ ಸಾವಿಗೆ ಅಘಾತವೇ ಕಾರಣ ಎಂದು ಪಶು ವೈದ್ಯರು ಅಭಿಪ್ರಾಯ ಪಟ್ಟಿದ್ದಾರೆ. ಆದರೂ, ಮುಂದಿನ ಕ್ರಮವಾಗಿ ಆನೆಯ ಕೆಲ ಅಂಗಾಂಗಗಳ ಮಾದರಿ ಸಂಗ್ರಹಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ.

> ಕೇರಳದ ವೈಯ್ನಾಡು ಜಿಲ್ಲೆಯ ಮಾನಂದವಾಡಿಯಲ್ಲಿ ತಣ್ಣೀರು ಆನೆ ಸೆರೆ ಹಿಡಿಯಲು ಶುಕ್ರವಾರ ಸಂಜೆ 5.45ಕ್ಕೆ ಒಂದು ಬಾರಿ ಹಾಗೂ ಸಂಜೆ 7ಕ್ಕೆ ಇನ್ನೊಂದು ಬಾರಿ ಅರವಳಿಕೆ ಮದ್ದು ಕೊಟ್ಟಿದ್ದಾರೆಂದು ಕೇರಳದ ಮಾಧ್ಯಮದಲ್ಲಿ ವರದಿಯಾಗಿದೆ. ಸೆರೆ ಹಿಡಿದ ಬಳಿಕ ಲಾರಿಗೆ ಹತ್ತಿಸುವ ಸಂದರ್ಭದಲ್ಲಿ ವೈಜ್ಞಾನಿಕವಾಗಿ ಕಾರ್ಯಾಚರಣೆ ನಡೆಸಿಲ್ಲ. ಕರ್ನಾಟಕದಲ್ಲಿ ಆನೆ ಸೆರೆ ಹಿಡಿದರೆ, ಕ್ರೇನ್‌ನಿಂದ ಲಾರಿಗೆ ಆನೆಯನ್ನು ಇರಿಸಲಾಗುತ್ತದೆ. ಆದರೆ, ತಣ್ಣೀರು ಆನೆಯನ್ನು ಲಾರಿಗೆ ಹತ್ತಿಸಲು ಕುಮ್ಕಿ ಆನೆಗಳಿಂದ ತಳ್ಳಲಾಗಿದೆ. ಇದರಿಂದ ಆನೆಯ ಗುಪ್ತಾಂಗದ ಭಾಗಕ್ಕೆ ಪೆಟ್ಟು ಬಿದ್ದು ರಕ್ತಸ್ರಾವವಾಗಿ ಮೃತಪಟ್ಟಿರಬಹುದು ಎಂದು ವನ್ಯ ಜೀವಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮರಣೋತ್ತರ ಪರೀಕ್ಷೆ ವೇಳೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಐನೂರು ವಲಯದ ಆರ್‌ಎಫ್‌ಓ ಮನೀತ್ ಕುಮಾರ್, ಎನ್‌ಜಿಓ ರಘುರಾಂ, ಬೇರಂಬಾಡಿ ಗ್ರಾ.ಪಂ ಸದಸ್ಯ ಗೋವಿಂದ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

‘ಭಾರತ ರತ್ನ’

ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸಮ್ಮಿಶ್ರ ಸರ್ಕಾರಗಳ ಮುಖ್ಯಸ್ಥರಾಗಿ 90ರ ದಶಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಅದರ ಬೆಳವಣಿಗೆಯನ್ನು ರೂಪಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. 1990ರ ಸೆ.25ರಂದು ಗುಜರಾತ್‌ನ ಸೋಮ ನಾಥದಿಂದ ‘ರಥ ಯಾತ್ರೆ’ ಮೂಲಕ ‘ರಾಮ ರಥದ ಸಾರಥಿ’ ಎಂದು ಸ್ವಯಂ ಬಿಂಬಿಸಿ ಕೊಂಡಿದ್ದರು. ಈ ಐತಿಹಾಸಿಕ ರಥಯಾತ್ರೆ ನಂತರ 1992ರ ಡಿಸೆಂಬರ್ 6ರಂದು ಬಾಬರಿ ಮಸೀದಿ ನೆಲಸಮಗೊಂಡಿತು. ಅಲ್ಲಿಂದ ನಡೆದ ಕಾನೂನಾತ್ಮಕ ಹೋರಾಟ ನಂತರ ರಾಮ ಮಂದಿರ ನಿರ್ಮಾಣವಾಯಿತು. ಈ ವರ್ಷದ ಜನವರಿ 22ರಂದು ಉದ್ಘಾಟನೆಯೂ ಆಯಿತು. ಈ ಒಂದು ಘನ ಕಾರ್ಯದಲ್ಲಿ ಎಲ್.ಕೆ. ಅಡ್ವಾಣಿಯವರ ಪಾತ್ರ ಸಿಂಹಪಾಲು ಎಂಬುದನ್ನು ಭರತ ಖಂಡವೇ ಒಪ್ಪುತ್ತದೆ.

ಗಣ್ಯಾತಿ ಗಣ್ಯರ ಸ್ವಾಗತ, ಅಭಿನಂದನೆ: ಎಲ್.ಕೆ.ಅಡ್ವಾಣಿಯವರಿಗೆ ‘ಭಾರತ ರತ್ನ’ ದೊರೆತಿರುವುದಕ್ಕೆ ದೇಶಾದ್ಯಂತ ಸಂತಸ ಮನೆ ಮಾಡಿದೆ. ರಾಮ ರಥದ ಸಾರಥಿಗೆ ಅತ್ಯುನ್ನತ ಪ್ರಶಸ್ತಿಯೊಂದಿಗೆ ಗೌರವಿಸುತ್ತಿರುವುದನ್ನು ಸ್ವಾಗತಿಸಿದ್ದಾರೆ. ಇತ್ತ ವಿಪಕ್ಷ ನಾಯಕರಾದ ಎಂ.ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇತರರು ಸ್ವಾಗತಿಸಿ, ಅಡ್ವಾಣಿಯವರನ್ನು ಅಭಿನಂದಿಸಿದ್ದಾರೆ.

ಸಂದ ಗೌರವ: ಅಡ್ವಾಣಿ

ನನ್ನ ಜೀವನ ದೇಶಕ್ಕಾಗಿ ಮುಡಿಪು" ಎಂಬ ಧ್ಯೇಯವಾಕ್ಯವೇ ನನ್ನ ಜೀವನಕ್ಕೆ ಸ್ಫೂರ್ತಿಯಾಗಿದೆ ಎಂದು ಮಾಜಿ ಉಪ ಪ್ರಧಾನಿ ತಿಳಿಸಿದ್ದಾರೆ. ಈ ಹಿಂದೆ ಭಾರತ ರತ್ನ ಪುರಸ್ಕೃತರಾದ ಪಂಡಿತ್ ದೀನ ದಯಾಳ್ ಉಪಾಧ್ಯಾಯ ಮತ್ತು ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಿದ ಗೌರವಕ್ಕೆ ಪಾತ್ರರಾದ ತಾವು ಇಂದು ಆ ಇಬ್ಬರು ವ್ಯಕ್ತಿಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ ಎಂದಿದ್ದಾರೆ. ಲಕ್ಷಾಂತರ ಬಿಜೆಪಿ ಕಾರ್ಯಕರ್ತರು, ಆರೆಸ್ಸೆಸ್ ಸ್ವಯಂ ಸೇವಕರು ಮತ್ತು ತಮ್ಮ ಸಾರ್ವಜನಿಕ ಜೀವನದಲ್ಲಿ ತಮ್ಮೊಂದಿಗೆ ಕೆಲಸ ಮಾಡಿದ ಇತರರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ತಿಳಿಸಿದ ಅಡ್ವಾಣಿ ಅವರು, ಭಾರತ ರತ್ನ ನೀಡಿ ಗೌರವಿಸಿದ್ದಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ಮೋದಿಯವರಿಗೆ ಧನ್ಯವಾದ ಹೇಳಿದ್ದಾರೆ.






ಎಲ್.ಕೆ.ಅಡ್ವಾಣಿಯವರು 1990ರಲ್ಲಿ ಸೋಮನಾಥದಿಂದ ಅಯೋಧ್ಯೆಗೆ ಕೈಗೊಂಡ ರಾಮರಥ ಯಾತ್ರೆಯ ಒಂದು ದೃಶ್ಯ.




ಎಲ್.ಕೆ.ಅಡ್ವಾಣಿಯವರೊಂದಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸ್ವಾರಸ್ಯಕರ ಚರ್ಚೆಯೊಂದರಲ್ಲಿ ಪಾಲ್ಗೊಂಡಿರುವಂತಹ ಅಪರೂಪದ ಸನ್ನಿವೇಶದ ಚಿತ್ರ.

ಎಲ್.ಕೆ.ಅಡ್ವಾಣಿಗೆ ಭಾರತರತ್ನ: ಗಣ್ಯರ ಸಂತಸ; ಅಖಿಲೇಶ್ ಭಿನ್ನರಾಗ!

ನವದೆಹಲಿ: ಎಲ್.ಕೆ.ಅಡ್ವಾಣಿ ಅವರಿಗೆ ‘ಭಾರತ ರತ್ನ’ ಬಂದ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಪ್ರತಿಕ್ರಿಯೆ ನೀಡಿದ್ದಾರೆ. ಅವರ ಹೇಳಿಕೆಗಳು ಇಲ್ಲಿವೆ. ಅಡ್ವಾಣಿ ಅವರಿಗೆ ಭಾರತರತ್ನ ಪ್ರಶಸ್ತಿ ಸಂದಿರುವುದು ನನಗೆ ಖುಷಿ ನೀಡಿದೆ. ರಾಷ್ಟ್ರದ ಅಭಿವೃದ್ಧಿಗೆ ಅವರು ಅಗಣಿತ ಕೊಡುಗೆ ನೀಡಿದ್ದಾರೆ. ನನ್ನ, ಅವರ ರಾಜಕೀಯ ಸಿದ್ಧಾಂತಗಳು ಭಿನ್ನವಾಗಿದ್ದವು. ಆದರೆ, ಅವರೊಬ್ಬ ಉತ್ತಮ ಸಂಸದೀಯ ಪಟುವಾಗಿದ್ದರು.




–ಶರದ್ ಪವಾರ್, ಅಧ್ಯಕ್ಷ, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ



ರಾಷ್ಟ್ರ ನಿರ್ಮಾಣದಲ್ಲಿ ಅಡ್ವಾಣಿ ಅವರ ಕೊಡುಗೆ ಮರೆಯಲಾಗದ್ದು ಹಾಗೂ ಉತ್ತೇಜನಕಾರಿಯಾದುದು. ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ ಅಡ್ವಾಣಿಯವರ ಜೊತೆಗೂಡಿ ಕೆಲಸ ಮಾಡಿದ್ದೇನೆ. ದೇಶದ ಗೌರವಾನ್ವಿತ ಮುತ್ಸದ್ದಿಗಳಲ್ಲಿ ಅವರೂ ಒಬ್ಬರು.

– ನಿತೀಶ್ ಕುಮಾರ್, ಮುಖ್ಯಮಂತ್ರಿ, ಬಿಹಾರ

ಉಪ ಪ್ರಧಾನಿ ಸೇರಿದಂತೆ ವಿವಿಧ ಸಾಂವಿಧಾನಿಕ ಹೊಣೆಗಾರಿಕೆ ನಿಭಾಯಿಸಿರುವ ಎಲ್.ಕೆ. ಅಡ್ವಾಣಿ ಅವರು ದೇಶದ ಭದ್ರತೆ, ಏಕತೆ, ಸೌಹಾರ್ದತೆಗೆ ಸಾಟಿಯಿಲ್ಲದ ಸೇವೆ ಸಲ್ಲಿಸಿದ್ದಾರೆ. ಈ ಪ್ರಶಸ್ತಿ ಅವರಿಗಷ್ಟೇ ಅಲ್ಲ, ದೇಶದ ಕೋಟ್ಯಾಂತರ ಜನರಿಗೆ ಸಂದ ಗೌರವವಾಗಿದೆ.




– ಅಮಿತ್ ಶಾ, ಕೇಂದ್ರ ಗೃಹ ಸಚಿವ

ದೇಶದ ಗೃಹ ಸಚಿವರಾಗಿ ಸೇವೆ ಸಲ್ಲಿಸಿದ್ದ ಅಡ್ವಾಣಿ ಅವರು ‘ಉಕ್ಕಿನ ಮನುಷ್ಯ’. ಆರು ದಶಕವನ್ನು ಮೀರಿದ ಅವರ ಸಾರ್ವಜನಿಕ ಬದುಕು ಕಳಂಕರಹಿತವಾಗಿತ್ತು.




– ದೇವೇಂದ್ರ ಫಡಣವೀಸ್, ಉಪ ಮುಖ್ಯಮಂತ್ರಿ, ಮಹಾರಾಷ್ಟ್ರ



ಹಲವು ವರ್ಷ ಕಾಲ, ಹಲವಾರು ರೀತಿಯಲ್ಲಿ ಅಡ್ವಾಣಿಯವರು ಭಾರತದ ವಿಕಸನಕ್ಕೆ ತನ್ನದೇ ಕೊಡುಗೆ ನೀಡಿದ್ದಾರೆ. ಸರ್ಕಾರ ಮತ್ತು ಸಾರ್ವಜನಿಕ ಬದುಕಿನಲ್ಲಿನ ಅವರ ನಾಯಕತ್ವವು ಅನುಕರಣೀಯ.

– ಎಸ್.ಜೈಶಂಕರ್, ವಿದೇಶಾಂಗ ವ್ಯವಹಾರಗಳ ಸಚಿವ

ಕೇಂದ್ರದಲ್ಲಿ ತನ್ನ ಅವಧಿ ಅಂತ್ಯವಾಗುವ ಮೊದಲು ಬಿಜೆಪಿ ಈ ಪ್ರಶಸ್ತಿಗೆ ಅಡ್ವಾಣಿಯವರನ್ನು ಆಯ್ಕೆ ಮಾಡಿದೆ. ತನ್ನ ಮತಬ್ಯಾಂಕ್ ಛಿದ್ರಗೊಳ್ಳಬಾರದು ಎಂಬುದೇ ಇದರ ಹಿಂದಿನ ಉದ್ದೇಶ. ಇದನ್ನು ಅವರ ಮೇಲಿನ ಗೌರವದಿಂದ ನೀಡಿದ್ದಲ್ಲ. ಭಾರತ ರತ್ನ ಪ್ರಶಸ್ತಿಗೆ ತನ್ನದೇ ಗೌರವವಿದೆ. ಆದರೆ, ಅದನ್ನು ಪಕ್ಷದ ಮತಗಳನ್ನು ಭದ್ರಪಡಿಸಿಕೊಳ್ಳಲೆಂದೇ ಈಗ ನೀಡಲಾಗಿದೆ.



– ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಗ್ಯಾರಂಟಿ ಯೋಜನೆಗಳನ್ನು ಪತ್ರಕರ್ತರು ಬಿಟ್ಟಿ ಎಂದು ಕರೆಯಬಾರದು: ಸಿಎಂ

ದಾವಣಗೆರೆ, ಫೆ.3– ಮೌಢ್ಯ, ಕಂದಾಚಾರ, ಕರ್ಮಸಿದ್ಧಾಂತವನ್ನು ಪತ್ರಕರ್ತರು ತಿರಸ್ಕರಿಸಿ ಜನರಿಗೆ ಸತ್ಯ ಹೇಳುವ ಧೈರ್ಯ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.



ಇಂದು ದಾವಣಗೆರೆಯಲ್ಲಿ 38ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಪತ್ರಕರ್ತರಿಗೆ ರಾಜಕೀಯ ಬೇಕಾಗಿಲ್ಲ, ವಸ್ತುನಿಷ್ಠವಾಗಿ ಇರಬೇಕು. ನಾಡಿನ ಬಡವರು ಮತ್ತು ಮಧ್ಯಮ ವರ್ಗದವರ ಆರ್ಥಿಕ ಶಕ್ತಿ ಹೆಚ್ಚಿಸುವ ಗ್ಯಾರಂಟಿ ಯೋಜನೆಗಳನ್ನು ಪತ್ರಕರ್ತರು ಬಿಟ್ಟಿ ಗ್ಯಾರಂಟಿ ಎಂದು ಕರೆಯಬಾರದು. ಪಕ್ಷಾತೀತವಾಗಿ, ಜಾತ್ಯಾತೀತವಾಗಿ, ಧರ್ಮಾತೀತವಾಗಿ ಇರುವ ಈ ಯೋಜನೆಯನ್ನು ಬಿಟ್ಟಿ ಗ್ಯಾರಂಟಿ ಎಂದು ಕರೆಯದೆ. ನೀವೇ ಪರಿಶೀಲಿಸಿ ಬರೆಯಿರಿ. ಏನನ್ನಾದರೂ ಪ್ರಕಟಿಸುವ ಮೊದಲು ಪರಿಶೀಲನೆ ನಡೆಸ ಬೇಕು ಎಂದರು.

ಪಟ್ಟಭದ್ರರನ್ನು ಗುರುತಿಸಿ ಮಟ್ಟ ಹಾಕುವ ನಿಷ್ಠುರತೆಯನ್ನು ಪತ್ರಕರ್ತರು ಬೆಳೆಸಿಕೊಳ್ಳಬೇಕು. ಗಂಡ–ಹೆಂಡತಿ ಜಗಳವನ್ನು ಇಡೀ ದಿನ ತೋರಿಸು ವುದಕ್ಕಿಂತ, ಸಮಾಜದ ಬೆಳವಣಿಗೆಗೆ ಅಡ್ಡಿ ಆಗಿರುವ ಪಟ್ಟಭದ್ರರನ್ನು ಗುರುತಿಸಿ ಬರೆಯಿರಿ. ಇದರಿಂದ ಸಮಾಜಮುಖಿ ಪತ್ರಿಕೋದ್ಯಮ ಸಾಧ್ಯ ಎಂದು ಸಿಎಂ ಸಿದ್ದರಾಮಯ್ಯ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಹಣವಂತರು, ಅತೀ ಶ್ರೀಮಂತರ ಕೈಯ್ಯಲ್ಲಿ ಪತ್ರಿಕೋದ್ಯಮ ಸಿಲುಕಿದೆ. ಹೀಗಾಗಿ ಶ್ರೀಮಂತರ ಹಿತಾಸಕ್ತಿ ಕಾಯುವ, ಬಡವರ ಹಿತಾಸಕ್ತಿಗೆ ವಿರುದ್ಧವಾಗಿ ಬರೆಯುವ ಅಪಾಯ ಇರುತ್ತದೆ. ಇದನ್ನು ಪರಿಶೀಲಿಸಿ ಕೊಳ್ಳಿ. ನಾನು ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಇರುವವನು, ಬೆಂಬಲಿಸುವವನು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಘನತೆ ತರುವಂತೆ ಮಾಡಬೇಕು ಎಂದರು. ಸ್ವಾತಂತ್ರ್ಯಪೂರ್ವದ ಪತ್ರಿಕೋದ್ಯಮದಲ್ಲಿ ದೇಶಕ್ಕೆ ಸ್ವಾತಂತ್ರ್ಯ ತರಬೇಕು ಎನ್ನುವ ಆಶಯ ಪ್ರಧಾನವಾಗಿ ಕೆಲಸ ಮಾಡಿತ್ತು. ಸ್ವಾತಂತ್ರ್ಯ ನಂತರ ಪ್ರಜಾ ಪ್ರಭುತ್ವವನ್ನು ಕಾಯುವ, ರಕ್ಷಿಸುವ ಆಶಯ ಪ್ರಮುಖವಾಗಿದೆ. ಜನ ಸಾಮಾನ್ಯರು ಪತ್ರಿಕಾವೃತ್ತಿ ಮೇಲೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಆ ನಿರೀಕ್ಷೆಗಳು ಹುಸಿಯಾಗದಂತೆ ಪತ್ರಕರ್ತರು ವೃತ್ತಿಪರತೆ ಬೆಳೆಸಿಕೊಳ್ಳಬೇಕು. ಈಗ ತಂತ್ರಜ್ಞಾನ, ವಿಜ್ಞಾನ ಬಹಳ ಬೆಳೆದಿದ್ದು, ಇದರ ಪ್ರಯೋಜನವನ್ನು ಪತ್ರಿಕಾವೃತ್ತಿ ಬಳಸಿಕೊಳ್ಳಬೇಕಿದೆ ಎಂದರು.

ಪೈಪ್ ಒಡೆದ ಜಾಗದಲ್ಲಿ ತೇಪೆ ಹಚ್ಚಿರುವ ವಾಣಿವಿಲಾಸ ವಾಟರ್ ವರ್ಕ್ಸ್ ಸಿಬ್ಬಂದಿ



ಮಿತ್ರನ ಫಲಶ್ರುತಿ

ಮೈಸೂರು, ಫೆ.3(ಬಿಎಲ್‌ಯು)– ಮೈಸೂರಿನ ಬಂಬೂ ಬಜಾರ್‌ನ ಯಾದವಗಿರಿ ರೈಲ್ವೆ ಬ್ರಿಡ್ಜ್ ಬಳಿ ಒಡೆದಿರುವ ಕುಡಿಯುವ ನೀರಿನ ಪೈಪ್‌ಗೆ ವಾಣಿವಿಲಾಸ ವಾಟರ್ ವರ್ಕ್ಸ್‌ನವರು ತಾತ್ಕಾಲಿಕವಾಗಿ ತೇಪೆ ಹಚ್ಚಿದ್ದಾರೆ.

ಪೈಪ್‌ನಲ್ಲಿ ಬಿರುಕು ಉಂಟಾಗಿರುವ ಜಾಗದಲ್ಲಿ ಚೀಲ ಇಟ್ಟು ರಸ್ತೆಗೆ ನೀರು ಚಿಮ್ಮುವುದನ್ನು ತಡೆದಿದ್ದಾರೆ. ಆದರೆ ನೀರಂತೂ ಪೋಲಾಗುತ್ತಿದೆ. ಸದ್ಯಕ್ಕೆ ರಸ್ತೆ ಬದಿ ಸಾಗುವ ವಾಹನ ಸವಾರರು ಹಾಗೂ ದಾರಿಹೋಕರಿಗೆ ತೊಂದರೆ ತಪ್ಪಿದೆ. ಪೈಪ್ ಒಡೆದರೆ ತಕ್ಷಣ ರಿಪೇರಿ ಮಾಡುವ ಪ್ರತ್ಯೇಕ ಸಿಬ್ಬಂದಿ ವಾಣಿ ವಿಲಾಸ ವಾಟರ್ ವರ್ಕ್ಸ್‌ನಲ್ಲಿದ್ದರೂ ಶಾಶ್ವತ ಕಾಮಗಾರಿಗೆ ಮೀನಾಮೇಷ ಎಣಿಸುವುದೇಕೆ?

ಮೈಸೂರು–ಬೆಂಗಳೂರು ನಡುವೆ 'ಅಶ್ವಮೇಧ' ಸಂಚಾರ!

ಕೆಎಸ್‌ಆರ್‌ಟಿಸಿ ಕೆಂಪು ಸುಂದರಿಗೆ ಆಧುನಿಕತೆಯ ಸ್ಪರ್ಶ

- ಮೈಸೂರಿಗೆ ಬರಲಿವೆ 15 ಅಶ್ವಮೇಧ ಬಸ್‌ಗಳು
- ಪಾಯಿಂಟ್ ಟು ಪಾಯಿಂಟ್ ಎಕ್ಸ್‌ಪ್ರೆಸ್ ಹೆಸರು
- ಹೊಸ ವಿನ್ಯಾಸದಲ್ಲಿ ರಸ್ತೆಗಿಳಿಯಲಿವೆ ಕೆಂಪು ಬಸ್‌ಗಳು
- ಒಳಾಂಗಣ ವಿಶಾಲ, ಪ್ರಯಾಣದಲ್ಲಿ ಆರಾಮದಾಯಕ ಅನುಭವ
- ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ





ಮೈಸೂರು, ಫೆ.3(ಬಿಎಲ್‌ಯು)– ಮೈಸೂರಿನಿಂದ ಬೆಂಗಳೂರಿಗೆ ತಡೆರಹಿತವಾಗಿ ಸಂಚರಿಸುವ ನೂತನ ವಿನ್ಯಾಸದ ಅಶ್ವಮೇಧ ಹೆಸರಿನ ಕೆಎಸ್‌ಆರ್‌ಟಿಸಿ ಹೊಸ ಬಸ್‌ಗಳು ಫೆ.5ರಿಂದ ಸಂಚರಿಸಲಿವೆ. ಈ ಮೂಲಕ ಕೆಂಪು ಸುಂದರಿಗೆ ಆಧುನಿಕತೆಯ ಸ್ಪರ್ಶ ನೀಡಿದ್ದು, ಪ್ರಯಾಣಿಕರಿಗೆ ಮತ್ತಷ್ಟು ಆರಾಮದಾಯಕ ಅನುಭವ ದೊರೆಯಲಿದೆ.

ಪಾಯಿಂಟ್ ಟು ಪಾಯಿಂಟ್ ಎಕ್ಸ್‌ಪ್ರೆಸ್ ಅಶ್ವಮೇಧ ಹೆಸರಿನ ಕೆಎಸ್‌ಆರ್‌ಟಿಸಿ ಬಸ್‌ಗಳು ಹೊಸ ವಿನ್ಯಾಸದಲ್ಲಿ ರೂಪುಗೊಂಡಿವೆ. ಬೆಂಗಳೂರಿನ ವಿಧಾನಸೌಧದ ಮುಂಭಾಗ ಫೆಬ್ರವರಿ 5 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿನೂತನ ವಿನ್ಯಾಸದ ಬಸ್‌ಗಳಿಗೆ ಚಾಲನೆ ನೀಡಲಿದ್ದಾರೆ. ರಾಜ್ಯಾದ್ಯಂತ ಒಟ್ಟು 100 ಈ ಹೊಸ ಬಸ್‌ಗಳಿಗೆ ಚಾಲನೆ ನೀಡುತ್ತಿದ್ದು, ಮೈಸೂರಿಗೆ 15 ಬಸ್‌ಗಳನ್ನು ನೀಡಲಾಗುತ್ತಿದೆ. 20 ಅಶ್ವಮೇಧ ಬಸ್‌ಗಳಿಗೆ ಬೇಡಿಕೆ ಸಲ್ಲಿಸಿದ್ದೆವು. ಆದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ 15 ಬಸ್‌ಗಳನ್ನು ನೀಡಿದೆ ಎಂದು ಮೈಸೂರಿನ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದರು.

ಈ ಅಶ್ವಮೇಧ ಬಸ್‌ಗಳನ್ನು ಮೈಸೂರಿನಿಂದ ಬೆಂಗಳೂರಿಗೆ, ಹುಣಸೂರಿನಿಂದ ಬೆಂಗಳೂರಿಗೆ, ಕೆ.ಆರ್.ನಗರದಿಂದ ಬೆಂಗಳೂರಿಗೆ ಮಾರ್ಗ ನಿಗದಿ ಮಾಡಲಾಗಿದೆ. ಮೈಸೂರು ವಿಭಾಗದಲ್ಲಿ ಸದ್ಯ 14 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸುತ್ತಿವೆ. ಇನ್ನು 30 ಬಸ್‌ಗಳಿಗೆ ಬೇಡಿಕೆ ಸಲ್ಲಿಸಲಾಗಿದ್ದು, ಶೀಘ್ರದಲ್ಲೇ ಹೊಸ ಎಲೆಕ್ಟ್ರಿಕ್ ಬಸ್‌ಗಳು ಮೈಸೂರಿಗೆ ಲಭ್ಯವಾಗುವ ಸಾಧ್ಯತೆ ಇದೆ. ಹೊಸದಾಗಿ ಬರುವ ಎಲೆಕ್ಟ್ರಿಕ್ ಬಸ್‌ಗಳನ್ನು ಮೈಸೂರಿನಿಂದ ಹುಣಸೂರು, ಹೆಚ್.ಡಿ.ಕೋಟೆ ಸೇರಿದಂತೆ ಇತರೆಡೆ ಸಂಚರಿಸಲು ಮಾರ್ಗ ನಿಗದಿ ಮಾಡಲಾಗುವುದು ಎಂದು ಹೇಳಿದರು. ಹೊಸ ವಿನ್ಯಾಸದ ಅಶ್ವಮೇಧ ಬಸ್‌ನಲ್ಲಿ ದರ ಹೆಚ್ಚಳವಿರುವುದಿಲ್ಲ. ಈಗಿರುವ ದರವನ್ನೇ ನಿಗದಿ ಮಾಡಲಾಗಿದೆ ಎಂದು ಶ್ರೀನಿವಾಸ್ ಸ್ಪಷ್ಟಪಡಿಸಿದರು.

'ಅಶ್ವಮೇಧ' ವಿಶೇಷತೆ

ಈ ಹೊಸ ಅಶ್ವಮೇಧ ಬಸ್, ಪ್ರಯಾಣದ ಮರು ಕಲ್ಪನೆ ಘೋಷವಾಕ್ಯದೊಂದಿಗೆ ಕೆಎಸ್‌ಆರ್‌ಟಿಸಿ ಪರಿಚಯಿಸಿದೆ. ಅಶ್ವಮೇಧ ಬಸ್ 3.42 ಮೀಟರ್ ಎತ್ತರವಿದ್ದು, ಬಸ್ ಒಳಾಂಗಣ ವಿಶಾಲವಾಗಿದೆ. ಪ್ರಯಾಣಿಕರಿಗೆ ಆರಾಮದಾಯಕ ಆಸನ ವ್ಯವಸ್ಥೆ ಇದೆ. ಅಶ್ವಮೇಧ ಬಸ್‌ಗಳಲ್ಲಿ ಟಿಂಟೆಡ್ ಗಾಜುಗಳನ್ನು ಅಳವಡಿಸಿದ್ದು, ಮುಂದಿನ ಹಾಗೂ ಹಿಂದಿನ ಗಾಜು ವಿಶಾಲವಾಗಿವೆ. ಜೊತೆಗೆ ಕಿಟಕಿ ಫ್ರೇಮ್ ಹಾಗೂ ಗಾಜು ಕೂಡ ವಿಶಾಲವಾಗಿವೆ. ಹೊಸ ವಿನ್ಯಾಸದ ಬಸ್‌ನಲ್ಲಿ ಲಗೇಜ್ ಕ್ಯಾರಿಯರ್ ಅನ್ನು ವಿನೂತನವಾಗಿ ವಿನ್ಯಾಸಗೊಳಿಸಲಾಗಿದೆ. ಬಸ್ ಒಳಾಂಗಣದಲ್ಲಿ ಎಲ್‌ಇಡಿ ದೀಪ, ಎಲ್‌ಇಡಿ ಮಾರ್ಗಫಲಕ ಅಳವಡಿಸಲಾಗಿದೆ. ಸ್ವಯಂ ಚಾಲಿತ ಬಾಗಿಲಿನ ಜೊತೆಗೆ ತುರ್ತು ಸಂದರ್ಭದಲ್ಲಿ ಹೊರ ಬರಲು ಆಧುನಿಕ ಬಟನ್ ಕೂಡ ಅಳವಡಿಸಲಾಗಿದೆ. ಕೆಂಪು ಬಸ್‌ಗಳ ಒಳಾಂಗಣ ಅಷ್ಟು ವಿಶಾಲವಾಗಿರುವುದಿಲ್ಲ. ಬಡ ಹಾಗೂ ಮಧ್ಯಮವರ್ಗದವರು ಮಾತ್ರ ಈ ಬಸ್‌ಗಳಲ್ಲಿ ಸಂಚರಿಸುತ್ತಾರೆ ಎಂಬ ಅಪವಾದವಿತ್ತು. ಆದರೆ ಈಗ ಕೆಂಪು ಬಸ್‌ಗಳಿಗೆ ಕೂಡ ಆಧುನಿಕತೆಯ ಸ್ಪರ್ಶ ನೀಡಲಾಗಿದ್ದು, ಪ್ರಯಾಣಿಕರಿಗೆ ಆರಾಮದಾಯಕ ಪ್ರಯಾಣದ ಅನುಭವ ದೊರೆಯಲಿದೆ.

ಫೆ.6,7 ರಂದು ನೀರು ಸರಬರಾಜಲ್ಲಿ ವ್ಯತ್ಯಯ



ಮೈಸೂರು, ಫೆ.3(ಎಸ್‌ಪಿಎನ್)– ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಬಿನಿ ನೀರು ಸರಬರಾಜು ಯೋಜನೆ ಮೂಲಸ್ಥಾವರದ 1100 ಎಂ.ಎಂ ವ್ಯಾಸದ ಕೊಳವೆ ಮಾರ್ಗದ ದುರಸ್ತಿ ನಿರ್ವಹಣೆ ಹಿನ್ನೆಲೆಯಲ್ಲಿ ಫೆ.6 ಮತ್ತು 7 ರಂದು ಈ ಕೆಳಕಂಡ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಾರ್ಡ್ ಸಂಖ್ಯೆ 44ರಿಂದ 51ರವರೆಗೆ (ಜನತಾನಗರ, ಶಾರದಾದೇವಿನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ) ಹಾಗೂ ವಾರ್ಡ್ ನಂ.54ರಿಂದ 65 (ಗುಂಡೂರಾವ್ ನಗರ, ಚಾಮುಂಡಿಪುರಂ, ಕೃಷ್ಣ ಮೂರ್ತಿಪುರಂ, ಕುವೆಂಪುನಗರ, ಸಿಐಟಿಬಿ, ರಾಮಕೃಷ್ಣನಗರ, ಕುವೆಂಪುನಗರ ಎಂ.ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ, ಭಾಗಶಃ ಪ್ರದೇಶ, ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದ ನಗರ, ಶ್ರೀರಾಂಪುರ) ಹಾಗೂ ಇತರೆ ಪ್ರದೇಶಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಗರಪಾಲಿಕೆ ನೀರು ಸರಬರಾಜು ಮತ್ತು ಒಳಚರಂಡಿ ಪೂರ್ವ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ನಿಲ್ಲಿಸುವಂತೆ ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿಯವರು ಮೈಸೂರಿನ ಪುರಭವನದ ಮುಂದೆ ನಡೆಸುತ್ತಿರುವ ಪ್ರತಿಭಟನೆ 89ನೇ ದಿನಕ್ಕೆ ಕಾಲಿಟ್ಟಿದೆ. ತಮಿಳುನಾಡಿಗೆ ಪ್ರತಿದಿನ 989 ಕ್ಯುಸೆಕ್ ನೀರು ಬಿಡುತ್ತಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ಈ ವೇಳೆ ಆಕ್ರೋಶ ವ್ಯಕ್ತಪಡಿಸಲಾಯಿತು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪಿ.ಎಸ್.ದಿನೇಶ್‌ಕುಮಾರ್ ಪ್ರಮಾಣ ವಚನ



ಬೆಂಗಳೂರು, ಫೆ.3(ಕೆಎಂಶಿ)– ನ್ಯಾಯಮೂರ್ತಿ ಪ್ರತಿನಿಧಿ ಶ್ರೀನಿವಾಸಾಚಾರ್ಯ ದಿನೇಶ್‌ಕುಮಾರ್ (ಪಿ.ಎಸ್. ದಿನೇಶ್‌ಕುಮಾರ್) ಅವರು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ನ್ಯಾಯಮೂರ್ತಿ ಪಿ.ಎಸ್.ದಿನೇಶ್‌ಕುಮಾರ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹಲವು ಗಣ್ಯರು ಉಪಸ್ಥಿತರಿದ್ದರು.

ಇಸ್ಲಾಮೇತರ ವಿವಾಹ: ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಪತ್ನಿಗೆ 7 ವರ್ಷ ಜೈಲು ಶಿಕ್ಷೆ

ಇಸ್ಲಾಮಾಬಾದ್, ಫೆ.3– ಪಾಕಿಸ್ತಾನದ ನ್ಯಾಯಾಲಯ ಶನಿವಾರ ಇಸ್ಲಾಮೇತರ ನಿಕಾಹ್ ಪ್ರಕರಣದಲ್ಲಿ, ಪ್ರಸ್ತುತ ಜೈಲಿನಲ್ಲಿರುವ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿದೆ.



ಬುಶ್ರಾ ಬೀಬಿ ತನ್ನ ಹಿಂದಿನ ಪತಿ ಮೇನಕಾ ಖವಾರ್ ಅವರಿಗೆ ವಿಚ್ಛೇದನ ನೀಡಿದ ನಂತು ಇಮ್ರಾನ್ ಖಾನ್ ಅವರನ್ನು ಮದುವೆಯಾಗುವ ಎರಡು ವಿವಾಹಗಳ ನಡುವೆ ಕಡ್ಡಾಯ ವಿರಾಮ ಅಥವಾ ಇದ್ದತ್ ಅನ್ನು ಆಚರಿಸುವ ಇಸ್ಲಾಮಿಕ್ ಪದ್ಧತಿಯನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಲಾಗಿತ್ತು ಮೇನಕಾ ಖವಾರ್ ಅವರು ತಮ್ಮ ಮಾಜಿ ಪತ್ನಿ ಮತ್ತು ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷದ ಸಂಸ್ಥಾಪಕ ಇಮ್ರಾನ್ ಖಾನ್ ಅವರು ಮದುವೆಗೆ ಮುಂಚೆಯೇ ಅಕ್ರಮ ಸಂಬಂಧಹೊಂದಿದ್ದರು ಎಂದು ಸಹ ಆರೋಪಿಸಿದ್ದು, ಇದು ಕಲ್ಲಿನಿಂದ ಹೊಡೆದು ಸಾಯಿಸುವ ಮರಣದಂಡನೆ ಶಿಕ್ಷೆಗೆ ಗುರಿಯಾಗುವ ಅಪರಾಧವಾಗಿದೆ. ಪ್ರಕರಣದ ಕುರಿತು ಅಡಿಯಾಲಾ ಜೈಲಿನಲ್ಲಿ 14 ಗಂಟೆಗಳ ಕಾಲ ನಡೆದ ಮ್ಯಾರಥಾನ್ ವಿಚಾರಣೆಯ ನಂತರ ವಿಚಾರಣಾ ನ್ಯಾಯಾಲಯವು ಶುಕ್ರವಾರ ರಾತ್ರಿ ವಿಚಾರಣೆಯನ್ನು ಪೂರ್ಣಗೊಳಿಸಿ ಇಂದು ತೀರ್ಪು ನೀಡಿದೆ.

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕರನ್ನಾಗಿ ಮತ್ತೆ ಮುಂದುವರೆಸುವ ಸರ್ಕಾರದ ಪ್ರಸ್ತಾಪ ನಯವಾಗಿ ತಿರಸ್ಕರಿಸಿದ ಡಾ.ಮಂಜುನಾಥ್

- ಸಿಎಂ ಸಿದ್ದರಾಮಯ್ಯರೊಂದಿಗೆ ಚರ್ಚಿಸಿದ ನಂತರ ಡಿಸಿಎಂ ಡಿ.ಕೆ.ಶಿವಕುಮಾರ್ ರಾಜಕೀಯ ಲೆಕ್ಕಾಚಾರ
- ಬೀಳ್ಕೊಡುಗೆ ನಂತರ ಆ ಸ್ಥಾನದಲ್ಲಿ ಮುಂದುವರೆಯಲು ನನಗಿಷ್ಟವಿಲ್ಲ: ಡಾ. ಮಂಜುನಾಥ್
- ಹಾಸನ ಇಲ್ಲವೇ ಬೆಂಗಳೂರು ಗ್ರಾಮಾಂತರದಲ್ಲಿ ಲೋಕಸಭಾ ಚುನಾವಣಾ ಕಣಕ್ಕಿಳಿಸುವ ಪ್ರಯತ್ನ



ಡಾ.ಮಂಜುನಾಥ್

ಬೆಂಗಳೂರು, ಫೆ.3(ಕೆಎಂಶಿ)– ಜಯದೇವ ಹೃದ್ರೋಗ ಸಂಸ್ಥೆಗೆ ಮತ್ತೆ ನಿರ್ದೇಶಕರಾಗಿ ಡಾ.ಮಂಜುನಾಥ್ ಅವರನ್ನು ರಾತ್ರೋರಾತ್ರಿ ಸರ್ಕಾರ ನೇಮಿಸಿತ್ತು. ಆದರೆ, ಸರ್ಕಾರದ ಮನವಿಯನ್ನು ನಯವಾಗಿ ತಿರಸ್ಕರಿಸಿರುವ ಮಂಜುನಾಥ್, ಕೇವಲ ಹೃದಯ ತಜ್ಞರಾಗಿಯೇ ಮುಂದುವರೆಯುವುದಾಗಿ ತಿಳಿಸಿದ್ದಾರೆ.

ಹಠಾತ್ ಬೆಳವಣಿಗೆಯೊಂದರಲ್ಲಿ ರಾತ್ರಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಅವರ ಬಳಿ ತೆರಳಿ ಜಯದೇವ ಸಂಸ್ಥೆಗೆ ಮಂಜುನಾಥ್ ಅವರನ್ನೇ ನಿರ್ದೇಶಕರನ್ನಾಗಿ ಮುಂದುವರೆಸಬೇಕೆಂದು ಮಾಡಿದ ಮನವಿಗೆ ಸ್ಪಂದಿಸಿ, ತೀರ್ಮಾನ ಕೈಗೊಂಡಿದ್ದರು. ಸಿಬ್ಬಂದಿ ಮತ್ತು ಇತರ ಸಂಸ್ಥೆಗಳಿಂದ ಬೀಳ್ಕೊಡುಗೆ ನಂತರ ನಿರ್ದೇಶಕ ಸ್ಥಾನದಲ್ಲಿ ಮುಂದುವರೆಯಲು ತಮಗೆ ಇಚ್ಛೆ ಇಲ್ಲ ಎಂದು ಮಂಜುನಾಥ್ ತಿಳಿಸಿದ್ದಾರೆ. ಮಂಜುನಾಥ್ ಅವರನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಾಸನ ಇಲ್ಲವೇ ಬೆಂಗಳೂರು ಗ್ರಾಮಾಂತರದಿಂದ ಕಣಕ್ಕಿಳಿಸಲು ಬಿಜೆಪಿ–ಜೆಡಿಎಸ್ ಕಾತುರದಲ್ಲಿವೆ.

ಗ್ರಾಮಾಂತರದಿಂದಾದರೆ ಬಿಜೆಪಿ ಚಿನ್ಹೆ ಅಡಿ, ಹಾಸನದಿಂದಾದರೆ ಜೆಡಿಎಸ್ ಚಿಹ್ನೆ ಅಡಿ ಕಣಕ್ಕಿಳಿಸುವ ಮಾತುಗಳು ಉಭಯ ಪಕ್ಷಗಳ ನಾಯಕರಲ್ಲಿ ಚರ್ಚೆಯಾಗಿವೆ. ಶಿವಕುಮಾರ್ ಸಹೋದರ ಹಾಗೂ ಹಾಲಿ ಸಂಸದ ಡಿ.ಕೆ.ಸುರೇಶ್ ಗ್ರಾಮಾಂತರದಿಂದ ಸತತವಾಗಿ ಲೋಕಸಭೆ ಪ್ರವೇಶಿಸುತ್ತಿದ್ದಾರೆ. ಮಂಜುನಾಥ್ ಕಣಕ್ಕಿಳಿದರೆ ಸಹೋದರನಿಗೆ ಚುನಾವಣೆಯಲ್ಲಿ ಕಠಿಣ ಸವಾಲು ಎದುರಿಸಬೇಕಾಗಬಹುದೆಂಬ ರಾಜಕೀಯ ದೂರದೃಷ್ಟಿಯಿಂದ ಉಪ ಮುಖ್ಯಮಂತ್ರಿ ಅವರು ಇಂತಹ ಪ್ರಯತ್ನ ಮಾಡಿರಬಹುದು ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ.

ಈ ಮಧ್ಯೆ ಸಮಾರಂಭವೊಂದರ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮಂಜುನಾಥ್, ರಾಜಕೀಯ ಪ್ರವೇಶ ಮಾಡುವ ಆಲೋಚನೆ ಇಲ್ಲ, ನಾನು ವೈದ್ಯಕೀಯ ವೃತ್ತಿಯಲ್ಲೇ ಮುಂದುವರೆಯುತ್ತೇನೆ. ನಾನು ಲೋಕಸಭಾ ಚುನಾವಣಾ ಕಣಕ್ಕಿಳಿಯುವ ವಿಚಾರ ಭಾರಿ ಚರ್ಚೆಯಲ್ಲಿದೆ, ಇದೆಲ್ಲಾ ಊಹಾಪೋಹ ಎಂದರು.

ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆ ವೆಚ್ಚ ಮಕ್ಕಳಿಂದಲೇ ಭರಿಸುವುದು ನಾಚಿಕೆಗೇಡಿತನ



ಬೆಂಗಳೂರು, ಫೆ.3(ಕೆಎಂಶಿ)– ಫೆಬ್ರವರಿ 26ರಿಂದ ಮಾರ್ಚ್ 3ರವರೆಗೆ ನಡೆಯಲಿರುವ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆ ವೆಚ್ಚವನ್ನು ಮಕ್ಕಳಿಂದಲೇ ವಸೂಲಿ ಮಾಡಲು ನಾಚಿಕೆಗೆಟ್ಟ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಕಿಡಿಕಾರಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಪ್ರಶ್ನೆ ಪತ್ರಿಕೆ ತಯಾರಿ, ಮುದ್ರಣ, ಸಾಗಣೆ ವೆಚ್ಚವನ್ನು ವಿದ್ಯಾರ್ಥಿಗಳ ಮೇಲೆಯೇ ಹೇರಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅಧ್ಯಕ್ಷರು ಆದೇಶಿಸಿದ್ದಾರೆ, ಪರೀಕ್ಷಾ ವೆಚ್ಚ ವಸೂಲಿ ಮಾಡುವಂತೆ ಎಲ್ಲಾ ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರಿಗೆ ಆದೇಶಿಸಿರುವುದು ಸರ್ಕಾರ ಎಷ್ಟರ ಮಟ್ಟಿಗೆ ಆರ್ಥಿಕ ದಿವಾಳಿಯಾಗಿದೆ ಎನ್ನುವುದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ ಎಂದಿದ್ದಾರೆ.

ಸರಕಾರಿ ಶಾಲೆಗಳ ಮುಖ್ಯ ಶಿಕ್ಷಕರು ಪರೀಕ್ಷಾ ವೆಚ್ಚ ವಸೂಲಿ ಮಾಡಿ, ಆ ಮೊತ್ತವನ್ನು ಇಲಾಖೆ ಉಪನಿರ್ದೇಶಕರು (ಆಡಳಿತ), ಇವರ ಖಾತೆಗೆ ಜಮೆ ಮಾಡಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ. ಜನತೆಗೆ 5 ಗ್ಯಾರಂಟಿ ಕೊಟ್ಟಿರುವುದಾಗಿ ಬಡಾಯಿ ಕೊಚ್ಚಿಕೊಳ್ಳುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ಅಧಃಪತನಕ್ಕೆ ಹೋಗಿದೆ ಎನ್ನುವುದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ. ಅಕ್ರಮ ಸುಲಿಗೆಯಲ್ಲಿ 'ಸಿದ್ಧಹಸ್ತ'ವಾಗಿರುವ ಸರಕಾರ, ಈಗ ಕಾನೂನು ಬದ್ಧವಾಗಿಯೇ ಸುಲಿಗೆಗೆ ಇಳಿದಿದೆ, ಒಂದು ಕೈಯ್ಯಲ್ಲಿ ಕೊಟ್ಟು, ಹತ್ತು ಕೈಗಳಿಂದ ಕಸಿದುಕೊಳ್ಳುತ್ತಿರುವ ರಾಜ್ಯ ಸರಕಾರ, ಮಕ್ಕಳ ಕಿಸೆಗೂ ಕೈ ಹಾಕಿರುವುದು ಲಜ್ಜೆಗೇಡಿತನವಾಗಿದೆ.

ಗ್ಯಾರಂಟಿ ಕೊಟ್ಟು ಬಡವರ ಉದ್ಧಾರ ಮಾಡುತ್ತಿದ್ದೇವೆ ಎಂದು ಬೀಗುವ ಸರಕಾರಕ್ಕೆ ಬಡಮಕ್ಕಳಿಗೆ ಪರೀಕ್ಷೆಗೆ ತಲಾ 50 ರೂ. ಖರ್ಚು ಮಾಡಲು ಗತಿ ಇಲ್ಲವೇ, ಈಗಾಗಲೇ ಬರದಿಂದ ಕಂಗೆಟ್ಟಿರುವ ರಾಜ್ಯದ ಜನರಿಗೆ ಸರಕಾರ ಬರೆಯ ಮೇಲೆ ಬರೆ ಎಳೆಯುತ್ತಿದೆ. ಕೂಡಲೇ ಈ ಆದೇಶವನ್ನು ವಾಪಸ್ ಪಡೆಯಬೇಕು, ಪರೀಕ್ಷೆ ವೆಚ್ಚವನ್ನು ಸರಕಾರವೇ ಭರಿಸಬೇಕು ಎಂದು ಅವರು ಆಗ್ರಹಪಡಿಸಿದ್ದಾರೆ.



ಪೌರಕಾರ್ಮಿಕ ಬಂಧುಗಳ ಅವಿರತ ಪರಿಶ್ರಮದಲ್ಲೂ ಮೈಸೂರು ಸ್ವಚ್ಛ ನಗರಿಗೆ ಬದಲು ತ್ಯಾಜ್ಯಮಯ ನಗರಿಯಾಗುತ್ತಿದೆ!!

ಮೈಸೂರು ಪಾಲಿಕೆ ಅಧಿಕಾರಿಗಳಲ್ಲಿ ಸಮನ್ವಯತೆ; ಜನತೆಯಲ್ಲಿ ಜವಾಬ್ದಾರಿ ಬಾರದೇ ಸಂಪೂರ್ಣ ಸ್ವಚ್ಛತೆ ಸಾಧ್ಯವೇ ಇಲ್ಲ

ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷರು, ಮಾಜಿ ಮೇಯರ್ ನಾರಾಯಣ ಸ್ಪಷ್ಟ ಅಭಿಪ್ರಾಯ

ಸ್ವಚ್ಛ ಸರ್ವೇಕ್ಷಣೆಯ ಸಮಗ್ರ ವಿಭಾಗದಲ್ಲಿ ಎರಡು ಬಾರಿ ಪ್ರಥಮ ಸ್ಥಾನ ಪಡೆದು ದೇಶದ ಗಮನ ಸೆಳೆದಿದ್ದ ಮೈಸೂರು, ನಂತರದಲ್ಲಿ ಉತ್ತಮ ಸ್ಥಾನ ಗಳಿಸುವಲ್ಲಿ ವಿಫಲವಾಗಿದೆ. 2015 ಹಾಗೂ 2016ರಲ್ಲಿ ಸತತ ಎರಡು ಬಾರಿ ದೇಶದ ನಂ.1 ಸ್ವಚ್ಛ ನಗರಿ ಪ್ರಶಸ್ತಿಯನ್ನು ಮೈಸೂರು ಮುಡಿಗೇರಿಸಿಕೊಂಡಿತ್ತು. 2017ರಲ್ಲಿ ಐದನೇ ಸ್ಥಾನ ಹಾಗೂ 2018ರಲ್ಲಿ 8ನೇ ಸ್ಥಾನ ದಕ್ಕಿತ್ತಾದರೂ ಆ ವರ್ಷದ ಮಧ್ಯಮ ನಗರ ವಿಭಾಗದಲ್ಲಿ ದೇಶದ ನಂ.1 ಸ್ವಚ್ಛ ನಗರಿಯಾಗಿ ಹೊರಹೊಮ್ಮಿತ್ತು. ಹೀಗೆ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಹಾವು–ಏಣಿ ಆಟದಂತೆ ಮೈಸೂರಿನ ಸ್ಥಾನ ಬದಲಾಗಿದ್ದು, ಇತ್ತೀಚೆಗೆ ಪ್ರಕಟಗೊಂಡ 2023ನೇ ಸಾಲಿನ ಪ್ರಶಸ್ತಿ ಪಟ್ಟಿಯಲ್ಲಿ 27ನೇ ಸ್ಥಾನಕ್ಕೆ ಕುಸಿದಿದೆ. ಇದಕ್ಕೆ ನಗರಪಾಲಿಕೆ ಮಾತ್ರವಲ್ಲ ಸಾರ್ವಜನಿಕರೂ ಸಮಾನ ಪಾಲುದಾರರು. ರಾಜರಾಳಿದ ಐತಿಹಾಸಿಕ, ಪಾರಂಪರಿಕ, ಸಾಂಸ್ಕೃತಿಕ, ಅರಮನೆಗಳ ನಗರಿ ಮೈಸೂರು ಸ್ವಚ್ಛತೆಯಲ್ಲಿ ಅಧಃಪತನಕ್ಕೆ ಇಳಿಯುತ್ತಿದ್ದರೂ ಇದಕ್ಕೆ ಕಾರಣರಾದವರಿಗೆ ಪಾಪಪ್ರಜ್ಞೆ ಕಾಡುತ್ತಿಲ್ಲ. ಈಗಲೂ ಎಲ್ಲೆಂದರಲ್ಲಿ ಬಿದ್ದಿರುವ ಕಸದ ರಾಶಿಯೇ ಇದಕ್ಕೆ ಸಾಕ್ಷಿ. ಸ್ವಚ್ಛತೆಯಲ್ಲಿ ಮೈಸೂರಿನ ದುಸ್ಥಿತಿ ಬಗ್ಗೆ ಮಾಜಿ ಮೇಯರ್, ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ್ದಾರೆ. ವೈಫಲ್ಯಕ್ಕೆ ಕಾರಣಗಳು, ಅನುಸರಿಸಬೇಕಾದ ಸರಳ ಕ್ರಮಗಳನ್ನು ಮನಮುಟ್ಟುವಂತೆ ತಿಳಿಸಿದ್ದಾರೆ.

● ಸಂದರ್ಶನ: ಎಸ್.ಬಿ.ದೇವರಾಜ

ಮೈಸೂರು ಮಿತ್ರ: ಕಸ ಸಂಗ್ರಹಣೆಗೆ ವ್ಯವಸ್ಥೆ ಇದ್ದರೂ ಕಡಕಂಡಲ್ಲಿ ತ್ಯಾಜ್ಯದ ರಾಶಿ ದರ್ಶನವಾಗುತ್ತಿದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ನಾರಾಯಣ್: ಪ್ರತಿ ಮನೆಯಲ್ಲೂ ಒಣ ಮತ್ತು ಹಸಿ ಕಸವನ್ನು ವಿಂಗಡಿಸಿ ಕೊಡಬೇಕು. ಆದರೆ ಹಲವರು ಮಿಶ್ರಣ ಮಾಡುತ್ತಾರೆ. ಮನೆ ಮನೆಗೆ ತೆರಳಿ ಕಸ ಸಂಗ್ರಹಿಸುವ ಪೌರಕಾರ್ಮಿಕರು, ಮಿಶ್ರಣ ತ್ಯಾಜ್ಯವನ್ನು ಕೊಂಡೊಯ್ಯಲು ಸಾಧ್ಯವಿಲ್ಲದ ಕಾರಣ ನಿರಾಕರಿಸುತ್ತಾರೆ. ನಂತರ ಆ ಮನೆಯವರು ಕಸವನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ, ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಾರೆ. ಸಾರ್ವಜನಿಕರಲ್ಲಿ ಪರಿಸರದ ಸಂರಕ್ಷಣೆ ಬಗ್ಗೆ ಅರಿವಿರಬೇಕು. ಮನೆಯಲ್ಲಿ ಎರಡು ಡಬ್ಬಿಯಲ್ಲಿ ಕಸ ವಿಂಗಡಿಸಿ, ತ್ಯಾಜ್ಯ ಸಂಗ್ರಹಿಸುವ ವಾಹನಕ್ಕೆ ಹಾಕಿದರೆ ಸಾಕು. ಸಮಸ್ಯೆ ಕಗ್ಗಂಟಾಗುವುದನ್ನು ತಪ್ಪಿಸಬಹುದು.

ಮಿತ್ರ: ಸ್ವಚ್ಛ ಸರ್ವೇಕ್ಷಣೆ ಅಭಿಯಾನದ ಆರಂಭಿಕ ವರ್ಷಗಳಲ್ಲಿ ಉತ್ತಮ ಸ್ಥಾನ ಗಳಿಸಿದ ಮೈಸೂರು, ಇತ್ತೀಚಿನ ವರ್ಷಗಳಲ್ಲಿ ಕಳಪೆ ಪ್ರದರ್ಶನ ನೀಡುತ್ತಿರುವ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಾರಾಯಣ್: ಸ್ವಚ್ಛ ಸರ್ವೇಕ್ಷಣೆಯಲ್ಲಿ ಕಳಪೆ ಸಾಧನೆಗೆ ನಗರಪಾಲಿಕೆ ಆಡಳಿತ ವ್ಯವಸ್ಥೆಯ ವೈಫಲ್ಯವೇ ಪ್ರಮುಖ ಕಾರಣ. ಕಾರ್ಪೊರೇಟರ್‌ಗಳ ಅಧಿಕಾರಾವಧಿ ಮುಗಿದ ನಂತರ ಸ್ವಚ್ಛತೆ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ. ಸರಿಯಾದ ರೀತಿಯಲ್ಲಿ ಟೀಂ ವರ್ಕ್ ನಡೆಯುತ್ತಿಲ್ಲ. ಮುಖ್ಯವಾಗಿ ಸ್ವಚ್ಛತೆಯ ಉಸ್ತುವಾರಿ ಸರಿಯಿಲ್ಲ. ಪೌರಕಾರ್ಮಿಕರು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಇದರೊಂದಿಗೆ ಆಡಳಿತ ವ್ಯವಸ್ಥೆ ಹಾಗೂ ಸಾರ್ವಜನಿಕರ ಸಹಭಾಗಿತ್ವ ಮುಖ್ಯವಾಗುತ್ತದೆ. ಘನ ತ್ಯಾಜ್ಯ ನಿರ್ವಹಣೆಯಲ್ಲೂ ಸುಧಾರಣೆ ಕಂಡಿಲ್ಲ. ಸಾರ್ವಜನಿಕರು ಸಮೀಕ್ಷೆಯಲ್ಲಿ ಭಾಗವಹಿಸಿ, ಪ್ರತಿಕ್ರಿಯೆ ನೀಡುವುದರಲ್ಲೂ ನಿರಾಸಕ್ತಿ ತೋರಿದ್ದಾರೆ. ಹೀಗೆ ಹಲವು ಕಾರಣಗಳಿಂದ ಈ ಬಾರಿ 27ನೇ ಸ್ಥಾನಕ್ಕೆ ಕುಸಿದಿದೆ.

ಮಿತ್ರ: ಆಡಳಿತ ವ್ಯವಸ್ಥೆಯ ವೈಫಲ್ಯವನ್ನು ಸಾಮಾನ್ಯರಿಗೆ ಮನದಟ್ಟಾಗುವಂತೆ ವಿಶ್ಲೇಷಣೆ ಮಾಡುವಿರಾ?

ನಾರಾಯಣ್: ಮುಖ್ಯವಾಗಿ ಮೇಟಿ ಸರಿ ಇರಬೇಕು. ಪಾಲಿಕೆ ಆಯುಕ್ತರು ಹಾಗೂ ಆರೋಗ್ಯ ಅಧಿಕಾರಿಗಳು ಸಾರ್ವಜನಿಕರ ಸಂಪರ್ಕವಿಟ್ಟುಕೊಂಡು ಸರಿಯಾಗಿ ಟೀಂ ವರ್ಕ್ ಮಾಡಬೇಕು. ಸ್ವಚ್ಛತಾ ಕಾರ್ಯದಲ್ಲಿ ಮೇಸ್ತ್ರಿ, ಪರಿಸರ ಇಂಜಿನಿಯರ್, ಆರೋಗ್ಯ ನಿರೀಕ್ಷಕರು, ಉಪ ಆರೋಗ್ಯಾಧಿಕಾರಿ, ಮುಖ್ಯ ಆರೋಗ್ಯಾಧಿಕಾರಿ, ಉಪ ಆಯುಕ್ತರು ಹಾಗೂ ಆಯುಕ್ತರು ಹಂತ ಹಂತವಾಗಿ ಉಸ್ತುವಾರಿ ನಿರ್ವಹಿಸಬೇಕು. ಆದರೆ ಈ ವ್ಯವಸ್ಥೆಯಲ್ಲಿ ಸಮನ್ವಯತೆಯೇ ಇಲ್ಲ. ಒಬ್ಬರ ಮಾತನ್ನು ಮತ್ತೊಬ್ಬರು ಕೇಳದ ಪರಿಸ್ಥಿತಿ ನಿರ್ಮಾಣವಾಗಿದೆ. ಪಾಲಿಕೆ ಸದಸ್ಯರಿದ್ದಾಗ ಪೌರಕಾರ್ಮಿಕರ ಹಾಜರಾತಿ ಪರಿಶೀಲಿಸಿ, ಯಾವುದೇ ಸಮಸ್ಯೆಯಾದರೂ ತಾವೇ ಸ್ಥಳದಲ್ಲಿ ನಿಂತು ಪರಿಹರಿಸುತ್ತಿದ್ದರು. ಈಗ ಅಧಿಕಾರಿಗಳು ಆ ಕೆಲಸ ಮಾಡಬೇಕು. ಅಭಿಯಾನದ ಸಂದರ್ಭದಲ್ಲಿ ಮಾತ್ರ ಯುದ್ಧೋಪಾದಿಯಲ್ಲಿ ಕೆಲಸ ಮಾಡಿದರೆ ನಿರೀಕ್ಷಿತ ಸಾಧನೆ ಸಾಧ್ಯವಿಲ್ಲ.

ಮಿತ್ರ: ನಿಮ್ಮ ಪ್ರಕಾರ ಮೈಸೂರು ನಗರದಲ್ಲಿ ತ್ಯಾಜ್ಯ ವಿಲೇವಾರಿ ಸ್ಥಿತಿಗತಿ ಹೇಗಿದೆ?

ನಾರಾಯಣ್: ನಗರದಲ್ಲಿ ಕೆಲ ವರ್ಷಗಳ ಹಿಂದೆ 200 ಟನ್ ಕಸ ಸಂಗ್ರಹವಾಗುತ್ತಿತ್ತು. ಆದರೆ ಪ್ರಸ್ತುತ 250 ಟನ್ ಕಸ ಉತ್ಪತ್ತಿಯಾಗುತ್ತಿದೆ. ಮನೆ ಮನೆ ಕಸ, ವಾಣಿಜ್ಯ ತ್ಯಾಜ್ಯ, ಕೈಗಾರಿಕಾ ತ್ಯಾಜ್ಯ, ಜೈವಿಕ ತ್ಯಾಜ್ಯ ಸೇರಿದಂತೆ ಎಲ್ಲಾ ರೀತಿಯ ತ್ಯಾಜ್ಯದ ಪ್ರಮಾಣವೂ ದಿನೇ ದಿನೆ ಹೆಚ್ಚುತ್ತಿದೆ. ಕೆಲವೊಮ್ಮೆ ವೈದ್ಯಕೀಯ ತ್ಯಾಜ್ಯವನ್ನೂ ಸಾಮಾನ್ಯ ಕಸದೊಂದಿಗೆ ಸೇರಿಸಿಬಿಡುತ್ತಾರೆ. ಹೀಗೆ ಒಂದೆಡೆ ತ್ಯಾಜ್ಯದ ಪ್ರಮಾಣ ಹೆಚ್ಚಾಗುತ್ತಿದ್ದು, ಮತ್ತೊಂದೆಡೆ ಪೌರಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಕೆಲವರು ನಿವೃತ್ತರಾದರೆ ಮತ್ತಷ್ಟು ಮಂದಿ ಅಕಾಲಿಕ ನಿಧನರಾಗಿದ್ದಾರೆ. ಹೊಸದಾಗಿ ನೇಮಕಾತಿಯೂ ಆಗುತ್ತಿಲ್ಲ ಪರಿಣಾಮ ಕಾರ್ಮಿಕರಿಗೆ ಕಾರ್ಯದೊತ್ತಡ ಹೆಚ್ಚಾಗಿ, ಸಮರ್ಪಕವಾಗಿ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ.

ಮಿತ್ರ: ವ್ಯವಸ್ಥೆಯಲ್ಲಿ ಸಮನ್ವಯತೆ ಇಲ್ಲ ಎಂದಾದರೆ ಸ್ವಚ್ಛತಾ ಕಾರ್ಯ ನಿರ್ವಹಿಸುವವರಿಗೇ ನಿರ್ವಹಣೆ ಜವಾಬ್ದಾರಿ ನೀಡಿದರೆ ಸುಧಾರಣೆಯಾಗಬಹುದೇ?

ನಾರಾಯಣ್: ಸ್ವಚ್ಛತಾ ಕಾರ್ಯ ಮಾಡುವವರನ್ನೇ ನಿರ್ವಹಣೆಗೆ ನಿಯೋಜಿಸುವುದರಿಂದ ಸುಧಾರಣೆಯಾಗಬಹುದು. ಅದಕ್ಕಿಂತ ಮುಖ್ಯವಾಗಿ ಪೌರಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸಿ, ವ್ಯವಸ್ಥಿತವಾಗಿ ಕಾರ್ಯ ನಿರ್ವಹಣೆ ಮಾಡಬೇಕು. ಸ್ವಚ್ಛತೆ ನಿರ್ವಹಣೆಯಲ್ಲಿ ಪರಿಸರ ಇಂಜಿನಿಯರ್‌ಗಳ ಜವಾಬ್ದಾರಿ ಪ್ರಮುಖವಾಗಿದ್ದು, ಅವರು ತ್ಯಾಜ್ಯದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಕಾರ್ಯ ನಿರ್ವಹಿಸಬೇಕು.

ಮಿತ್ರ: ನಗರದ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಸ್ವಚ್ಛತೆ ನಿರ್ವಹಣೆಯಲ್ಲಿನ ಸುಧಾರಣೆಗೆ ನಿಮ್ಮ ಸಲಹೆಗಳೇನು?

ನಾರಾಯಣ್: ಪೌರಕಾರ್ಮಿಕರ ಸಂಖ್ಯೆ ಹೆಚ್ಚಿಸುವುದರ ಜೊತೆಗೆ ಅವರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಸಮರ್ಪಕ ರೀತಿಯಲ್ಲಿ ಕೆಲಸ ಮಾಡುವ ವಾತಾವರಣ ಸೃಷ್ಟಿಸಬೇಕು. ಅಧಿಕಾರಿಗಳು ಸಮನ್ವಯತೆಯಿಂದ ಉತ್ತಮ ತಂಡ ರಚಿಸಿ, ನಿರ್ವಹಣೆಗೆ ನಿಯೋಜಿಸಬೇಕು. ಸಾರ್ವಜನಿಕರಲ್ಲಿ ವ್ಯಾಪಕವಾಗಿ ಅರಿವು ಮೂಡಿಸಬೇಕು. ನಗರದ ಸ್ವಚ್ಛತೆ ಪಾಲಿಕೆ ಜವಾಬ್ದಾರಿ ಮಾತ್ರವಲ್ಲ ಇದರಲ್ಲಿ ನಮ್ಮದೂ ಜವಾಬ್ದಾರಿ ಇದೆ ಎಂಬುದು ಜನರಿಗೂ ಅರ್ಥವಾಗಬೇಕು. ಒಣ ಹಾಗೂ ಹಸಿ ಕಸವನ್ನು ವಿಂಗಡಿಸಿ ನೀಡುವ ಕನಿಷ್ಠ ಸಹಕಾರ ನೀಡಬೇಕು. ಕಸವನ್ನು ಎಲ್ಲೆಂದರಲ್ಲಿ ಹಾಕುವ ಪರಿಪಾಠ ನಿಲ್ಲಬೇಕು. ಜಾಗೃತಿ ಮೂಡಿಸುವುದರ ಜೊತೆಗೆ ಕಾನೂನು ಕೂಡ ಬಿಗಿಯಾಗಬೇಕು. ಬೇಜವಾಬ್ದಾರಿ ತೋರುವವರಿಗೆ ಸರಿಯಾದ ಶಿಕ್ಷೆಯಾಗಬೇಕು. ಸಿಂಗಾಪುರ್, ಚೀನಾ ಇತರೆ ದೇಶಗಳಲ್ಲಿ ಸಣ್ಣ ಮಕ್ಕಳಿಗೂ ಸ್ವಚ್ಛತೆ ಬಗ್ಗೆ ಹೇಳಿಕೊಡುತ್ತಾರೆ. ಅಲ್ಲಿನ ಮಕ್ಕಳು ಚಾಕೊಲೇಟ್ ಕವರ್ ಅನ್ನು ರಸ್ತೆಗೆ ಬಿಸಾಡದೆ ಜೇಬಿನಲ್ಲಿಟ್ಟುಕೊಂಡು ಅದನ್ನು ಕಸದ ಡಬ್ಬಕ್ಕೆ ಹಾಕುತ್ತಾರೆ. ನಮ್ಮಲ್ಲೂ ಶಾಲಾ ಮಕ್ಕಳಿಗೆ ಸ್ವಚ್ಛತೆ ಬಗ್ಗೆ ಹೇಳಿಕೊಡಬೇಕು. ಪಠ್ಯದ ಮೂಲಕವೂ ಜಾಗೃತಿ ಮೂಡಿಸಿದರೆ ಒಳ್ಳೆಯದು. ಒಟ್ಟಾರೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದರೆ ಸಮಸ್ಯೆಗಳೇ ಬರುವುದಿಲ್ಲ.

ಮೈಸೂರು ಮಿತ್ರ ಭಾನುವಾರ 4 ಫೆಬ್ರವರಿ 2024

ಫೆ.7ರಿಂದ ಮಡಿಕೇರಿಯಲ್ಲಿ 'ಬೆನ್ನುಹುರಿ' ಸಮಸ್ಯೆ ನಿವಾರಣೆಗಾಗಿ 'ಪುನಶ್ಚೇತನ ಶಿಬಿರ'



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಸೇವಾ ಭಾರತಿ ಸಂಸ್ಥೆಯ ಪದಾಧಿಕಾರಿಗಳು.

ಮಡಿಕೇರಿ,ಫೆ.3– ಅಪಘಾತ ಸೇರಿದಂತೆ ವಿವಿಧ ಕಾರಣಗಳಿಂದ 'ಬೆನ್ನು ಹುರಿ' ಹಾನಿಯಿಂದ ಉಂಟಾಗುವ ವಿಕಲತೆಯಿಂದ ಬಳಲುತ್ತಿರುವರಿಗೆ ಅಗತ್ಯ ನೆರವು, ತಾವೇ ತಮ್ಮ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ಪ್ರೇರಣೆಯನ್ನು ನೀಡುವ ನಿಟ್ಟಿನಲ್ಲಿ ಫೆ.7 ರಿಂದ 9ರವರೆಗೆ ನಗರದ ಅಶ್ವಿನಿ ಆಸ್ಪತ್ರೆಯಲ್ಲಿ 'ಪುನಶ್ಚೇತನ ಶಿಬಿರ'ವನ್ನು ಆಯೋಜಿಸಲಾಗಿದೆ ಎಂದು ದಕ್ಷಿಣ ಕನ್ನಡದ ಬೆಳ್ತಂಗಡಿಯ ಸೇವಾಭಾರತಿ ಸಂಸ್ಥೆಯ ಸಂಸ್ಥಾಪಕರು ಹಾಗೂ ಹಾಲಿ ಖಜಾಂಚಿಗಳಾದ ವಿನಾಯಕ ರಾವ್ ತಿಳಿಸಿದ್ದಾರೆ.

ಸ್ವತಃ ಬೆನ್ನುಹುರಿಗೆ ಅಪಘಾತದಿಂದ ಉಂಟಾದ ಹಾನಿಯಿಂದ ಸಂಕಷ್ಟಕ್ಕೆ ಒಳಗಾಗಿ ಪುನಶ್ಚೇತನಗೊಂಡಿರುವ ವಿನಾಯಕ ರಾವ್ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಡಿಕೇರಿಯ ವಿಕಾಸ ಜನ ಸೇವಾ ಟ್ರಸ್ಟ್‌ನ ಸಹಕಾರದೊಂದಿಗೆ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಸೇವಾಭಾರತಿ ಸಂಸ್ಥೆ 2004ರಲ್ಲಿ ಆರೋಗ್ಯ, ಮಹಿಳಾ ಸಬಲೀಕರಣ ಮತ್ತು ದಿವ್ಯಾಂಗರ ಕ್ಷೇತ್ರದಲ್ಲಿ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದರು, 2018ರ ಬಳಿಕ ಅಪಘಾತದಿಂದ ಬೆನ್ನುಹುರಿಗೆ ಪೆಟ್ಟಾಗಿ ಶಾಶ್ವತ ಅಂಗವಿಕಲತೆಯ ಸಂಕಷ್ಟಕ್ಕೆ ಒಳಗಾದವರಿಗೆ ಪುನಶ್ಚೇತನವನ್ನು ನೀಡುವ ಕೆಲಸವನ್ನು ಮಾಡುತ್ತಾ ಬರುತ್ತಿದೆ ಎಂದರು.

ಸೇವಾಭಾರತಿ ಪ್ರಸ್ತುತ ಏಳು ಜಿಲ್ಲೆಗಳಲ್ಲಿ ತನ್ನ ಸೇವಾ ಕಾರ್ಯವನ್ನು ವಿಸ್ತರಿಸಿದೆ. ಕೊಡಗು ಜಿಲ್ಲೆಯಲ್ಲಿ ಬೆನ್ನುಹುರಿಯ ಸಮಸ್ಯೆಯಿಂದ ವಿಕಲತೆಯನ್ನು ಹೊಂದಿದ 36 ಮಂದಿಯನ್ನು ಗುರುತಿಸಲಾಗಿದೆ. ಇವರಲ್ಲಿ 11 ಮಂದಿಗೆ ಶಿಬಿರದಲ್ಲಿ ವೈದ್ಯಕೀಯ ಚಿಕಿತ್ಸೆಯನ್ನು, 8 ಮಂದಿಗೆ ವೀಲ್‌ಚೇರ್, 16 ಮಂದಿಗೆ ಸ್ವಯಂ ಚಿಕಿತ್ಸಾ ಕಿಟ್‌ಗಳನ್ನು ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಗಾಲಿ ಕುರ್ಚಿ ರ್‍ಯಾಲಿ: ಹಾಸಿಗೆ ಹಿಡಿದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಮುಖ್ಯವಾಹಿನಿಗೆ ಬರುವಂತೆ ಮಾಡಿ ಈ ಮೂಲಕ ಅವರಿಗೆ ಎಲ್ಲರಂತೆ ಬದುಕಲು ಧೈರ್ಯ ತುಂಬುವುದರ ಜೊತೆಗೆ ಜನ ಸಾಮಾನ್ಯರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಮೂಡಿಸಲು ಶಿಬಿರದ ಕೊನೆಯ ದಿನವಾದ ಫೆ.9ರಂದು ಬೆಳಗ್ಗೆ 9 ಗಂಟೆಗೆ ಅಶ್ವಿನಿ ಆಸ್ಪತ್ರೆಯಿಂದ ಜನರಲ್ ತಿಮ್ಮಯ್ಯ ವೃತ್ತವನ್ನು ಹಾದು, ಮರಳಿ ಆಸ್ಪತ್ರೆಯ ಬರುವ ಗಾಲಿಕುರ್ಚಿ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ವಿಕಾಸ್ ಜನಸೇವಾ ಟ್ರಸ್ಟ್ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷೆ ಪದ್ಮಶ್ರೀ ರಾಣಿ ಮಾಚಯ್ಯ, ಖಜಾಂಚಿ ಬಿ.ಕೆ.ನವೀನ್, ಸೇವಾ ಭಾರತಿ ಕೊಡಗಿನ ಹಿರಿಯ ಸಂಪರ್ಕಾಧಿಕಾರಿ ಆರ್.ಮನು ಉಪಸ್ಥಿತರಿದ್ದರು.

ಸಂಕಷ್ಟದಲ್ಲಿರುವವರತ್ತ ನಿಗಾ

ಸೇವಾ ಭಾರತಿ ಸಂಸ್ಥೆಯಿಂದ ಗುರುತಿಸಲ್ಪಟ್ಟ ಬೆನ್ನುಹುರಿ ಸಮಸ್ಯೆ ಹೊಂದಿದವರ ಬಗ್ಗೆ ಸದಾ ನಿಗಾ ವಹಿಸುವ ಕಾರ್ಯವನ್ನು ಮಾಡುತ್ತದೆ. ಸಂಸ್ಥೆಯ ಹಿರಿಯ ಸಂಪರ್ಕಾಧಿಕಾರಿಗಳು ಸಂಕಷ್ಟದಲ್ಲಿರುವವರನ್ನು ತಿಂಗಳಿಗೆ 2 ಬಾರಿ ಭೇಟಿ ಮಾಡಿ ಅಗತ್ಯ ನೆರವನ್ನು ಒದಗಿಸುತ್ತಾರೆ ಎಂದು ವಿನಾಯಕ ರಾವ್ ತಿಳಿಸಿದರು. ಶಿಬಿರದಲ್ಲಿ ಪ್ರಮುಖವಾಗಿ ಬೆನ್ನುಹುರಿ ಸಮಸ್ಯೆಯಿಂದ ವಿಕಲಚೇತನರಾಗಿರುವವರ ಚಟುವಟಿಕೆ ಹೆಚ್ಚಿಸಿ, ದೀರ್ಘಾವಧಿಯಲ್ಲಿ ಜೀವನೋಪಾಯ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೇರೇಪಣೆ ನೀಡಲಾಗುತ್ತದೆ. ಆತ್ಮವಿಶ್ವಾಸ ಕಳೆದುಕೊಂಡು ಮಾನಸಿಕ ಖಿನ್ನತೆಗೊಳಗಾಗಿ ಆರ್ಥಿಕ ಸಂಕಷ್ಟದಲ್ಲಿರುವ ದಿವ್ಯಾಂಗರಿಗೆ ಪುನಶ್ಚೇತನವನ್ನು ಒದಗಿಸುತ್ತಿದೆ. ಸಂಸ್ಥೆಯ ಮೂಲಕ ಈಗಾಗಲೇ ಸುಮಾರು 178 ಮಂದಿ ಪುನಶ್ಚೇತನವನ್ನು ಪಡೆದುಕೊಂಡಿದ್ದಾರೆ. ಅಲ್ಲದೇ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಉತ್ತರ ಕನ್ನಡ, ಕೊಡಗು, ಹಾಸನ, ಶಿವಮೊಗ್ಗ ಸೇರಿದಂತೆ 7 ಜಿಲ್ಲೆಗಳಲ್ಲಿ 604 ಬೆನ್ನುಹುರಿ ಅಪಘಾತಕ್ಕೊಳಗಾದವರನ್ನು ಗುರುತಿಸಿ ಅವರನ್ನು ಪುನಶ್ಚೇತನ ಮಾಡುವ ಕಾರ್ಯ ನಿರಂತರವಾಗಿದೆ ಎಂದು ವಿನಾಯಕ ರಾವ್ ತಿಳಿಸಿದರು.

ಕುಡಿಯುವ ನೀರು, ಮೇವಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಿ

ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅಧಿಕಾರಿಗಳಿಗೆ ಸೂಚನೆ



ಅಧಿಕಾರಿಗಳ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ವೆಂಕಟ್ ರಾಜಾ.

ಮಡಿಕೇರಿ, ಫೆ.3– ಮುಂದಿನ ದಿನಗಳಲ್ಲಿ ನಗರ, ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸಮಸ್ಯೆ ಬರದಂತೆ ಅಗತ್ಯ ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರು ಪೂರೈಕೆ, ಜಾನುವಾರುಗಳಿಗೆ ಮೇವು ಒದಗಿಸುವಲ್ಲಿ ವ್ಯತ್ಯಯ ಉಂಟಾಗಬಾರದು. ತಹಶೀಲ್ದಾರರು ಮತ್ತು ತಾಪಂ ಇಒ ಜೊತೆ ಒಟ್ಟುಗೂಡಿ ಸಮನ್ವಯತೆ ಸಾಧಿಸಿ ಕುಡಿಯುವ ನೀರು ಪೂರೈಕೆಗೆ ಮುಂದಾಗಬೇಕು. ಜಲ ಮೂಲ, ತೆರೆದ ಬಾವಿ, ಬೋರ್‌ವೆಲ್ ಹೀಗೆ ಕುಡಿಯುವ ನೀರಿನ ಸಂಪನ್ಮೂಲವನ್ನು ಸರಿಯಾಗಿ ಬಳಸಬೇಕು ಎಂದು ಜಿಲ್ಲಾಧಿಕಾರಿ ಅವರು ಸಲಹೆ ಮಾಡಿದರು.

ಜಾನುವಾರುಗಳಿಗೆ ಮೇವು ಪೂರೈಕೆ ಸಂಬಂಧಿಸಿದಂತೆ ಪಶುಪಾಲನಾ ಇಲಾಖೆ ಉಪ ನಿರ್ದೇಶಕರಾದ ಲಿಂಗರಾಜು ದೊಡ್ಡಮನಿ ಅವರು ಮಾಹಿತಿ ನೀಡಿದರು. ಹಾಗೆಯೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇಇ ಸುರೇಶ್ ಕುಮಾರ್ ಅವರು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಸೋಮಸುಂದರ, ತಹಶೀಲ್ದಾರರಾದ ಪ್ರವೀಣ್ ಕುಮಾರ್, ಕಿರಣ್ ಗೌರಯ್ಯ, ರಾಮಚಂದ್ರ, ಹಾಗೆಯೇ ತಾ.ಪಂ ಇಒಗಳಾದ ಶೇಖರ್, ಅಪ್ಪಣ್ಣ ಅವರು ಕುಡಿಯುವ ನೀರು ಪೂರೈಕೆಗೆ ಸಿದ್ಧತೆ ಬಗ್ಗೆ ಮಾಹಿತಿ ನೀಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎಸ್. ವೀಣಾ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಜಿ.ಪಂ ಉಪ ಕಾರ್ಯದರ್ಶಿ ಧನರಾಜ್, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕರಾದ ಬಿ.ಬಸಪ್ಪ, ಪೌರಾಯುಕ್ತರಾದ ವಿಜಯ್, ಕುಶಾಲನಗರ ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಚಪ್ಪ, ಹೇಮಂತ್ ಕುಮಾರ್, ಲೋಕೋಪಯೋಗಿ ಇಲಾಖೆಯ ಇಇ ಸಿದ್ದೇಗೌಡ, ಕಾರ್ಮಿಕ ಅಧಿಕಾರಿ ಹರ್ಷವರ್ಧನ ಇದ್ದರು.

ಬೈಕ್‌ಗಳ ಡಿಕ್ಕಿ: ಓರ್ವ ಸ್ಥಳದಲ್ಲೇ ಸಾವು

ಮಡಿಕೇರಿ: ಎರಡು ಬೈಕ್‌ಗಳ ನಡುವೆ ಸಂಭವಿಸಿದ ಡಿಕ್ಕಿಯಿಂದ ಓರ್ವ ಸ್ಥಳದಲ್ಲೇ ಮೃತಪಟ್ಟು, ಮತ್ತೋರ್ವ ತೀವ್ರವಾಗಿ ಗಾಯಗೊಂಡಿರುವ ಘಟನೆ ಸುಂಟಿಕೊಪ್ಪ ಬಳಿಯ ಏಳನೇ ಮೈಲಿನಲ್ಲಿ ನಡೆದಿದೆ. ಹುಣಸೂರು ಮೂಲದ ಸಂತೋಷ್(30) ಎಂಬಾತ ಮೃತ ದುರ್ದೈವಿ. ಕೆದಕಲ್ ನಿವಾಸಿ ಚೇತನ್(35) ಗಂಭೀರ ಗಾಯಗೊಂಡಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಹಾರನ್ ಮಾಡಿದ್ದಕ್ಕೆ ಹಲ್ಲೆ: ಚಾಲಕನಿಗೆ ಗಾಯ



ಸೈಯದ್ ರಫೀಕ್

ವಿರಾಜಪೇಟೆ, ಫೆ.3– ಮುಂದೆ ಹೋಗಲು ಸ್ಥಳಾವಕಾಶ ನೀಡುವಂತೆ ಹಾರನ್ ಮಾಡಿದ ವಾಹನ ಚಾಲಕನ ಮೇಲೆ ಮತ್ತೊಂದು ವಾಹನದ ಡ್ರೈವರ್ ಹಲ್ಲೆ ನಡೆಸಿರುವ ಘಟನೆಯೊಂದು ವರದಿಯಾಗಿದೆ.

ಹಲ್ಲೆಯಿಂದ ಗಾಯಗೊಂಡಿರುವ ಸೈಯದ್ ರಫೀಕ್ ಅವರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಜಪೇಟೆ ಪಟ್ಟಣದ ಮೋಹನ್ ಪೆಟ್ರೋಲ್ ಬಂಕ್ ಬಳಿ ಮುಖ್ಯ ರಸ್ತೆಯಲ್ಲಿ ಸಾಲು ಸಾಲಾಗಿ ವಾಹನಗಳು ಸಾಗುತ್ತಿದ್ದು ಗೂಡ್ಸ್ ಆಟೋದಲ್ಲಿ ಹೆಚ್.ಪಿ. ಗ್ಯಾಸ್ ಸಿಲಿಂಡರ್ ತುಂಬಿಸಿಕೊಂಡು ಸಾಗುತ್ತಿದ್ದ ವಿತರಕ ಸೈಯದ್ ರಫೀಕ್ ಮುಂದೆ ಹೋಗುತ್ತಿದ್ದ ವಾಹನಗಳನ್ನು ಹಿಂದಿಕ್ಕುವ ಸಲುವಾಗಿ ಹಾರನ್ ಮಾಡಿದ್ದಾರೆ. ಮುಂದೆ ಪಿಕಪ್ ವಾಹನದಲ್ಲಿ ಹೋಗುತ್ತಿದ್ದ ಚಾಲಕ ನಿಶಾಂತ್ ಹಾರನ್ ಶಬ್ದ ಕೇಳಿ ಕೆಳಗಿಳಿದು ಕೋಪದಿಂದ ಏಕಾಏಕಿ ಹಾರನ್ ಮಾಡಿದ ಚಾಲಕ ಸೈಯದ್ ರಫೀಕ್ ಮುಖಕ್ಕೆ ಬಲವಾಗಿ ಹಲ್ಲೆ ನಡೆಸಿದ ಕಾರಣ ಗಾಯಗಳಾಗಿವೆ.

ಗಾಯಾಳು ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಹಲ್ಲೆ ನಡೆಸಿದ ನಿಶಾಂತ್ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿದ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾಡುಪ್ರಾಣಿಗಳ ವಸ್ತು ಇಟ್ಟುಕೊಳ್ಳಲು ಕೊಡವರಿಗೆ ಅವಕಾಶ ನೀಡಿ

ಸರ್ಕಾರಕ್ಕೆ ಪತ್ರ ಬರೆದ ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್



ಅಪ್ಪಚ್ಚು ರಂಜನ್

ಮಡಿಕೇರಿ,ಫೆ.3– ಕೊಡಗು ಜಿಲ್ಲೆಯ ಸಂಸ್ಕೃತಿ ಉಳಿಸುವ ದೃಷ್ಟಿಯಿಂದ ಪೂರ್ವಜರು ಉಳಿಸಿ ಪೂಜೆಗೆ ಬಳಸುವ ಕಾಡುಪ್ರಾಣಿಗಳ ವಸ್ತುಗಳನ್ನು ಇಟ್ಟುಕೊಳ್ಳಲು ಅವಕಾಶ ಕಲ್ಪಿಸುವಂತೆ ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅಪ್ಪಚ್ಚು ರಂಜನ್, ಜಿಲ್ಲೆಯ ಜನರು ಪ್ರಮುಖವಾಗಿ ರೈತರು ಮತ್ತು ಬೆಳೆಗಾರರು ಕಾಯಿದೆಯ ಅಸ್ತಿತ್ವಕ್ಕೆ ಮುಂಚೆಯೇ ಕಾಡುಪ್ರಾಣಿಗಳ ವಸ್ತುಗಳನ್ನು ತಮ್ಮಲ್ಲಿ ಸಂರಕ್ಷಿಸಿ ಇಟ್ಟುಕೊಂಡಿದ್ದಾರೆ ಮತ್ತು ಪೀಳಿಗೆಗೆ ರವಾನಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನವು ಸ್ವಾತಂತ್ರ್ಯ ಪೂರ್ವದಲ್ಲಿ ಸಂಗ್ರಹಿಸಿದವು. ಆಗಿನ ಕಾಲದಲ್ಲಿ ಕಾಡುಪ್ರಾಣಿಗಳಿಂದ ತಮ್ಮನ್ನು ಸಂರಕ್ಷಿಸಿಕೊಳ್ಳಲು ಬೇಟೆಯಾಡುವ ಅನಿವಾರ್ಯತೆ ಇತ್ತು. ಅಲ್ಲದೆ ಆಗಿನ ಬ್ರಿಟಿಷ್ ಬೆಳೆಗಾರರಿಗೆ ಬೇಟೆಯಾಡುವುದು ಒಂದು ಹವ್ಯಾಸವಾಗಿತ್ತು.

ಅವರ ವಶದಲ್ಲಿ ಉಳಿದಿರುವ ವಸ್ತುಗಳು ಪಿತ್ರಾರ್ಜಿತ ಚರಾಸ್ತಿಗಳಾಗಿ, ದೈವಿ ಸ್ವರೂಪವಾಗಿ ಕಾಣುತ್ತಿರುವ ಈ ವಸ್ತುಗಳನ್ನು ನಮಗೆ ಮುಂದಿನ ಪೀಳಿಗೆಗೆ ಉಳಿಸುವ ದೃಷ್ಟಿಯಿಂದ, ನಾವು ಪ್ರಕೃತಿಯೇ ದೇವರೆಂದು ಪೂಜಿಸುವ ಕೊಡಗು ಜಿಲ್ಲೆಯ ಸಂಸ್ಕೃತಿ ಆಚಾರ ವಿಚಾರ ಉಳಿಸುವ ದೃಷ್ಟಿಯಿಂದ ನಮ್ಮ ಹಿರಿಯರು ಉಳಿಸಿಕೊಟ್ಟಿದ್ದ, ಕಾಡುಪ್ರಾಣಿಗಳ ವಸ್ತುಗಳನ್ನು ಹಾಗೆಯೇ ಮುಂದುವರೆಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು. ಆ ಮೂಲಕ ಕೊಡಗು ಜಿಲ್ಲೆಯ ಜನರ ಭಾವನೆಗಳಿಗೆ ಯಾವುದೇ ಧಕ್ಕೆಯಾಗದಂತೆ, ಇಲ್ಲಿನ ಸಂಸ್ಕೃತಿ ಉಳಿಸಿ ಬೆಳೆಸುವ ದೃಷ್ಟಿಯಿಂದ ತಾವುಗಳು ಪೂರ್ವಜರು ಸಂಗ್ರಹಿಸಿದ ವಸ್ತುಗಳನ್ನು ಇಟ್ಟುಕೊಳ್ಳಲು ಅವಕಾಶ ಕಲ್ಪಿಸುವಂತೆ ಅಪ್ಪಚ್ಚು ರಂಜನ್ ಮನವಿ ಮಾಡಿದ್ದಾರೆ.

ಅಲ್ಲದೆ ಆಗಿನ ಬ್ರಿಟಿಷ್ ಬೆಳೆಗಾರರಿಗೆ ಬೇಟೆಯಾಡುವುದು ಒಂದು ಹವ್ಯಾಸವಾಗಿತ್ತು. ಹಾಗಾಗಿ ಈ ವನ್ಯಜೀವಿಗಳ ವಸ್ತುಗಳನ್ನು ಪರಂಪರೆಯ ಗುರುತಾಗಿ ಇರಿಸಲಾಗಿದ್ದು, ಪಿತ್ರಾರ್ಜಿತವಾಗಿ ಪೀಳಿಗೆಗೆ ರವಾನಿಸಲಾಗಿದೆ. ಪ್ರಸ್ತುತ ಪೀಳಿಗೆಯು ಅದರ ಮೇಲೆ ಭಾವನಾತ್ಮಕ ಬಾಂಧವ್ಯವನ್ನು ಹೊಂದಿದೆ ಮತ್ತು ಇದನ್ನು ಕುಟುಂಬದ ಚರಾಸ್ತಿ ಎಂದು ಪರಿಗಣಿಸಲಾಗಿದೆ ಎಂದು ಮಾಜಿ ಸಚಿವ ಅಪ್ಪಚ್ಚು ರಂಜನ್ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದಾರೆ.

ಫೆ.13 ರವರೆಗೆ ಜಿಲ್ಲಾದ್ಯಂತ 'ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ'

ಮಡಿಕೇರಿ, ಫೆ.3– ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಜಿ.ಧನರಾಜು ಅವರ ಉಪಸ್ಥಿತಿಯಲ್ಲಿ 'ಸ್ಪರ್ಶ್ ಕುಷ್ಠರೋಗ ಜಾಗೃತಿ ಆಂದೋಲನಾ ಕಾರ್ಯಕ್ರಮ' ಅನುಷ್ಠಾನದ ಬಗ್ಗೆ ಇತ್ತೀಚೆಗೆ ಸಭೆ ನಡೆಯಿತು.

ಕಾರ್ಯಕ್ರಮದಲ್ಲಿ ಭಿತ್ತಿಪತ್ರಗಳು, ಕರಪತ್ರಗಳು ಹಾಗೂ ಬ್ಯಾನರ್ ಬಿಡುಗಡೆಗೊಳಿಸಲಾಯಿತು. ಕರಪತ್ರ ಬಿಡುಗಡೆ ಮಾಡಿದ ನಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸತೀಶ್ ಕುಮಾರ್ ಎಂ.ಕೆ. ಮಾತನಾಡಿ, ಕುಷ್ಠರೋಗದ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಸಲುವಾಗಿ ಕಾರ್ಯಕ್ರಮ ನಡೆಸಲಾಯಿತು. ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಕುಷ್ಠರೋಗದ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯ ಎಂದು ತಿಳಿಸಿದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ಅಧಿಕಾರಿ ಡಾ.ಎನ್.ಆನಂದ್ ಮಾತನಾಡಿ ಜ.30 ರಿಂದ ಫೆ.13 ರವರೆಗೆ ಜಿಲ್ಲಾದ್ಯಂತ "ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ" ಕಾರ್ಯಕ್ರಮ ನಡೆಯಲಿದೆ.

ಪ್ರತಿ ಗ್ರಾಮಗಳಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಹಾಗೂ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಂಡು ವಿದ್ಯಾರ್ಥಿಗಳಲ್ಲಿ ಕುಷ್ಠರೋಗದ ಬಗ್ಗೆ ಅರಿವು ಮೂಡಿಸಲಾಗುವುದು ಎಂದರು.

ಕೊಡಗು ಜಿಲ್ಲೆಯಲ್ಲಿ ಒಟ್ಟು 5 ಎಂ.ಬಿ ಪ್ರಕರಣಗಳಿದ್ದು ಇವರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು ಸೆಲ್ಫ್‌ಕೇರ್ ಕಿಟ್ ಹಾಗೂ ಎಂ.ಸಿ.ಆರ್ ಫುಟ್‌ವೇರ್‌ಗಳನ್ನು ಸಹ ನೀಡಿದ್ದೇವೆ ಎಂದರು. ವ್ಯಾಪಕ ಪ್ರಚಾರ ಕೈಗೊಳ್ಳಲು ಆರೋಗ್ಯ ಇಲಾಖೆಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು, ಸಮುದಾಯ ಆರೋಗ್ಯಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರಿಗೆ ಮಾಹಿತಿ ನೀಡಲಾಗುತ್ತದೆ ಎಂದರು.

ಚಾಮರಾಜನಗರದಲ್ಲಿ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸರಣಿ ಪ್ರತಿಭಟನೆ

● ಡಿ.ಕೆ.ಸುರೇಶ್ ಹೇಳಿಕೆಗೆ ಜಿಲ್ಲಾ ಬಿಜೆಪಿ ಖಂಡನೆ ● ಪೋಲಾಗುತ್ತಿರುವ ನೀರು ಸಂರಕ್ಷಣೆಗೆ ಸುವರ್ಣ ಕರವೇ ಒತ್ತಾಯ ● ಹಾಸ್ಟೆಲ್ ಮೇಲೆ ದಾಳಿ ನಡೆಸಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕುರುಬರ ಸಂಘ ಧರಣಿ





ಚಾಮರಾಜನಗರದಲ್ಲಿ ಪ್ರತ್ಯೇಕ ರಾಷ್ಟ್ರದ ಹೇಳಿಕೆ ನೀಡಿರುವ ಸಂಸದ ಡಿ.ಕೆ.ಸುರೇಶ್ ವಿರುದ್ಧ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು, ಪೋಲಾಗುತ್ತಿರುವ ಕಾವೇರಿ ನೀರು ಉಳಿಸುವಂತೆ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.3– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನಗರದಲ್ಲಿ ವಿವಿಧ ಸಂಘಟನೆಗಳಿಂದ ಶನಿವಾರ ಸರಣಿ ಪ್ರತಿಭಟನೆ ನಡೆಯಿತು.

ಪ್ರತ್ಯೇಕ ರಾಷ್ಟ್ರದ ಹೇಳಿಕೆ ನೀಡಿರುವ ಸಂಸದ ಡಿ.ಕೆ.ಸುರೇಶ್ ವಿರುದ್ಧ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರೇ, ಪೋಲಾಗುತ್ತಿರುವ ಕಾವೇರಿ ನೀರು ಉಳಿಸುವಂತೆ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಮಂಡ್ಯದ ಜಿಲ್ಲಾ ಕುರುಬರ ಸಂಘದ ವಿದ್ಯಾರ್ಥಿ ನಿಲಯದ ಮೇಲೆ ದಾಳಿ ನಡೆಸಿದವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಜಿಲ್ಲಾ ಕುರುಬರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಡಿ.ಕೆ.ಸುರೇಶ್ ವಿರುದ್ಧ ಬಿಜೆಪಿ ಪ್ರತಿಭಟನೆ: ಪ್ರತ್ಯೇಕ ರಾಷ್ಟ್ರದ ಹೇಳಿಕೆ ನೀಡಿರುವ ಸಂಸದ ಡಿ.ಕೆ.ಸುರೇಶ್ ವಿರುದ್ಧ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಮಾನವ ಸರಪಳಿ ರಚಿಸಿ ಕಾಂಗ್ರೆಸ್ ಪಕ್ಷ ಹಾಗೂ ಸಂಸದ ಡಿ.ಕೆ.ಸುರೇಶ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ಡಿ.ಕೆ.ಸುರೇಶ್ ಹೇಳಿಕೆ ಅವರ ಸಂಸತ್ ಸ್ಥಾನಕ್ಕೆ ಧಕ್ಕೆ ತರುವಂತಹದ್ದು. ಇದು ದೇಶದ್ರೋಹದ ಹೇಳಿಕೆ. ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸುವಾಗ ದೇಶದ ಐಕ್ಯತೆ, ಸಾರ್ವಭೌಮತೆ ಎತ್ತಿ ಹಿಡಿಯುವುದಾಗಿ ಹೇಳಿದ್ದ ಅವರು ಇದೀಗ ಆಡಿರುವ ಮಾತು ಅದಕ್ಕೆ ತದ್ವಿರುದ್ಧವಾದುದು ಎಂದ ಅವರು, ಇವರ ಹೇಳಿಕೆ ಖಂಡಿಸಿ ಪಕ್ಷವು ದೇಶಾದ್ಯಂತ ಪ್ರತಿಭಟನೆ ನಡೆಸಲಿದೆ ಎಂದರು.

ಈ ವೇಳೆ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್, ಮಾಜಿ ಶಾಸಕ ಎಸ್.ಬಾಲರಾಜು, ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷ ಪ್ರಣಯ್, ಮುಖಂಡರಾದ ರಾಮಚಂದ್ರ, ಪ್ರೀತನ್ ನಾಗಪ್ಪ, ನೂರೊಂದು ಶೆಟ್ಟಿ, ಆನಂದ ಭಗೀರಥ, ಸೂರ್ಯ ಕುಮಾರ್, ವೃಷಬೇಂದ್ರ ಸ್ವಾಮಿ, ನಟರಾಜು, ಬಸವಣ್ಣ, ಯಳಂದೂರು ಮಹೇಶ್, ಜಯಸುಂದರ್ ಇತರರಿದ್ದರು.

ನೀರು ಸಂರಕ್ಷಣೆಗೆ ಒತ್ತಾಯ: ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಹಾದು ಹೋಗಿರುವ ಕಾವೇರಿ ಕುಡಿಯುವ ನೀರಿನ ಪೈಪ್‌ಲೈನ್ ಒಡೆದು ಭಾರಿ ಪ್ರಮಾಣದಲ್ಲಿ ಪೋಲಾಗುತ್ತಿರುವ ನೀರನ್ನು ಸಂರಕ್ಷಣೆ ಮಾಡುವಂತೆ ಒತ್ತಾಯಿಸಿ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆಯಿಂದ ಧರಣಿ ನಡೆಸಲಾಯಿತು.

ಕಾವೇರಿ ನೀರು ಪೋಲಾಗುತ್ತಿರುವ ಸ್ಥಳದಲ್ಲಿ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸುರೇಶ್ ವಾಜಪೇಯಿ, ಟೌನ್ ಅಧ್ಯಕ್ಷ ಆಟೋ ಮಂಜುನಾಥ್ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ರಸ್ತೆ ತಡೆ ನಡೆಸಿ, ಜಿಲ್ಲಾ ಉಸ್ತುವಾರಿ ಸಚಿವ, ಶಾಸಕರು ಹಾಗೂ ನಗರಸಭೆ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆ ರಾಜ್ಯಾಧ್ಯಕ್ಷ ಸುರೇಶ್ ವಾಜಪೇಯಿ, ಟೌನ್ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿ ಕಳೆದ 7 ತಿಂಗಳಿಂದ ಕಾವೇರಿ ನೀರು ಪೋಲಾಗುತ್ತಿದೆ. ಇದನ್ನು ನಿಲ್ಲಿಸುವಂತೆ ನಗರಸಭೆಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ರಸ್ತೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು ಸೇರಿದಂತೆ 42 ಇಲಾಖೆಯ ಅಧಿಕಾರಿಗಳು ಸಂಚರಿಸುತ್ತಾರೆ. ಈ ಬಗ್ಗೆ ಗಮನಹರಿಸುವಲ್ಲಿ ನಗರಸಭೆ ಸಂಪೂರ್ಣ ವಿಫಲವಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಪೋಲಾಗುತ್ತಿರುವ ಕಾವೇರಿ ನೀರನ್ನು ನಿಲ್ಲಿಸಿ ಉಳಿಸಬೇಕು ಎಂದು ಒತ್ತಾಯಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೌರಾಯುಕ್ತ ರಾಮದಾಸ್ ಮಾತನಾಡಿ, ಹಳೇ ಪೈಪ್‌ಲೈನ್‌ನಿಂದ ಸಮಸ್ಯೆ ಉಂಟಾಗಿದ್ದು, ಹೊಸ ಪೈಪ್‌ಲೈನ್ ಮಾಡಲಾಗುತ್ತಿದೆ. ತಕ್ಷಣ ಕಾವೇರಿ ನೀರು ಪೋಲಾಗದಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಚಾ.ಗು. ನಾಗರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ಸೋಮನಾಯಕ, ಕುಮಾರ್, ಸಿದ್ದು, ಗಣೇಶ್, ಮಹದೇವಪ್ರಸಾದ್ ಇತರರಿದ್ದರು.

ಹಾಸ್ಟೆಲ್ ಮೇಲೆ ದಾಳಿ ನಡೆಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ



ಮಂಡ್ಯ ಜಿಲ್ಲಾ ಕುರುಬರ ಸಂಘದ ವಿದ್ಯಾರ್ಥಿ ನಿಲಯದ ಮೇಲೆ ದಾಳಿ ಹಾಗೂ ಸಂಗೊಳ್ಳಿ ರಾಯಣ್ಣ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವಚಿತ್ರವುಳ್ಳ ಫ್ಲೆಕ್ಸ್‌ಗಳಿಗೆ ಹಾನಿ ಮಾಡಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಜಿಲ್ಲಾ ಕುರುಬರ ಸಂಘದ ಆಶ್ರಯದಲ್ಲಿ ಜಿಲ್ಲೆಯ ಎಲ್ಲಾ ತಾಲೂಕಿನ ಕುರುಬರ ಸಂಘಗಳು, ಸಂಗೊಳ್ಳಿ ರಾಯಣ್ಣ ಯುವ ವೇದಿಕೆ ಹಾಗೂ ಸಿದ್ದರಾಮಯ್ಯ ಅಭಿಮಾನಿ ಬಳಗ, ಜಿಲ್ಲಾ ಅಹಿಂದ ಸಂಘಟನೆಗಳಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಂಜೇಗೌಡರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿದರು.

ಕುರುಬರ ಸಂಘದ ಅಧ್ಯಕ್ಷ ನಂಜೇಗೌಡ ಮಾತನಾಡಿ, ಕೆರಗೋಡು ಗ್ರಾಮದ ಧ್ವಜ ಸ್ತಂಭದ ವಿಚಾರವಾಗಿ ಪ್ರತಿಭಟಿಸುತ್ತಿದ್ದ ಪ್ರತಿಭಟನಾಕಾರರು ಬೆಂಗಳೂರು ಮತ್ತು ಮೈಸೂರು ಮುಖ್ಯ ರಸ್ತೆಯಲ್ಲಿರುವ ಮಂಡ್ಯ ಜಿಲ್ಲಾ ಕುರುಬರ ಸಂಘದ ವಿದ್ಯಾರ್ಥಿ ನಿಲಯಕ್ಕೆ ಅತಿಕ್ರಮ ಪ್ರವೇಶ ಮಾಡಿ ಯಾರದೋ ಕುಮ್ಮಕ್ಕಿನಿಂದ ಕಿಟಕಿ ಬಾಗಿಲುಗಳ ಗಾಜುಗಳನ್ನು ಪುಡಿಪುಡಿ ಮಾಡಿರುವುದಲ್ಲದೆ ಅಲ್ಲಿ ಹಾಕಿದ್ದ ಸಂಗೊಳ್ಳಿ ರಾಯಣ್ಣ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಭಾವಚಿತ್ರವುಳ್ಳ ಫ್ಲೆಕ್ಸ್‌ಗಳನ್ನು ಹರಿದು ಹಾಕಿ ವಿಕೃತಿ ಮೆರೆದಿದ್ದಾರೆ. ಸಹೋದರರಂತೆ ಜೀವನ ಸಾಗಿಸುತ್ತಿದ್ದ ಮಂಡ್ಯ ನಾಗರಿಕರ ಬದುಕಿನಲ್ಲಿ ಕೋಮು ದಳ್ಳುರಿಯ ವಿಷಬೀಜ ಬಿತ್ತಿ ಜಾತಿ ಸಂಘರ್ಷಕ್ಕೆ ದಾರಿ ಮಾಡುವ ರೀತಿ ವರ್ತಿಸಿದ್ದಾರೆ. ಈ ಒಂದು ಘಟನೆ ರಾಜ್ಯಾದ್ಯಂತ ಇರುವ ಹಿಂದುಳಿದ ವರ್ಗದ ಕುರುಬ ಸಮುದಾಯಕ್ಕೆ ಅತ್ಯಂತ ನೋವು ತಂದಿದೆ ಆದ್ದರಿಂದ ಕಿಡಿಗೇಡಿಗಳನ್ನು ಬಂಧಿಸಿ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಶಿವಲಿಂಗೇಗೌಡ, ಉಪಾಧ್ಯಕ್ಷ ನಟರಾಜು ಬಸಪ್ಪನಪಾಳ್ಯ, ಪಾಪಣ್ಣೇಗೌಡ ತಾಲೂಕು ಸಂಘದ ಆರ್.ಉಮೇಶ್, ಮಾಜಿ ಅಧ್ಯಕ್ಷ ಜನ್ನೂರು ಮಹದೇವು, ಗೌರವಾಧ್ಯಕ್ಷ ರಾಜಶೇಖರ್, ಉಪಾಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಕೆ.ಪಿ.ನಾಗರಾಜು, ಮಾಜಿ ಉಪಾಧ್ಯಕ್ಷ ರವಿಕುಮಾರ್, ಎಪಿಎಂಸಿ ನಿರ್ದೇಶಕ ಗುರುಸ್ವಾಮಿ, ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಜಿಲ್ಲಾಧ್ಯಕ್ಷ ಬೆಳ್ಳೇಗೌಡ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಸೋಮಣ್ಣ, ಲಿಂಗಣ್ಣ, ಕೊಳ್ಳೇಗಾಲ ತಾಲೂಕು ಸಂಘದ ಅಧ್ಯಕ್ಷ ರಾಚೇಗೌಡ, ಯಳಂದೂರು ತಾಲೂಕು ಕೊಂಡೇಗೌಡ, ಪ್ರದೇಶ ಕುರುಬರ ಸಂಘದ ನಿರ್ದೇಶಕ ಪುಟ್ಟಸ್ವಾಮಿ, ಸ್ವಾಮಿ, ಸೋಮಶೇಖರ್, ಪಿ. ರಾಮಸ್ವಾಮಿ, ಬಿ.ಸ್ವಾಮಿ, ಮಹೇಶ್, ರೇವಣ್ಣ, ಕುಮಾರ್ ಇತರರಿದ್ದರು.

ಕರ್ತವ್ಯ ಲೋಪ: ಪಿಡಿಓ ಅಮಾನತು


ಚಾಮರಾಜನಗರ, ಫೆ.3– ಕರ್ತವ್ಯ ಲೋಪ ಹಿನ್ನೆಲೆಯಲ್ಲಿ ಯಳಂದೂರು ತಾಲೂಕಿನ ಅಗರ ಪಿಡಿಓ ಎಸ್.ಮಹದೇವಸ್ವಾಮಿ ಅವರನ್ನು ಅಮಾನತುಗೊಳಿಸಿ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಶನಿವಾರ ಆದೇಶ ಹೊರಡಿಸಿದ್ದಾರೆ. ಮಹದೇವಸ್ವಾಮಿ ಅವರು 15ನೇ ಹಣಕಾಸು ಆಯೋಗದ ಅನುದಾನ ದುರುಪಯೋಗ, ಇನ್ನಿತರ ಕರ್ತವ್ಯ ಲೋಪ ಎಸಗಿದ್ದು, ಮುಂದಿನ ಆದೇಶದವರೆಗೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಿರುವುದಾಗಿ ಆದೇಶದಲ್ಲಿ ತಿಳಿಸಲಾಗಿದೆ.

ಸಿ.ಗುರುಸ್ವಾಮಣ್ಣ ನಿಧನ



ಕೊಳ್ಳೇಗಾಲ, ಫೆ.3– ತಾಲೂಕಿನ ಕೊಂಗರಹಳ್ಳಿ ಗ್ರಾಮದ ವೀರಶೈವ ಲಿಂಗಾಯತ ಸಮುದಾಯದ ಹಿರಿಯ ಮುಖಂಡ ಸಿ.ಗುರುಸ್ವಾಮಣ್ಣ(82) ಶನಿವಾರ ನಿಧನರಾದರು. ಮೃತರು ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಫೆ.4ರಂದು ಭಾನುವಾರ ಮಧ್ಯಾಹ್ನ ಸ್ವಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉರುಕಾತೇಶ್ವರಿ ದೇವಾಲಯದ ಕೀ, ಹುಂಡಿ ಹಣ ಹಸ್ತಾಂತರಿಸುವಂತೆ ಹೈಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಕೆ



ಸುದ್ದಿಗೋಷ್ಠಿಯಲ್ಲಿ ಉಮ್ಮತ್ತೂರು ಗ್ರಾಮದ ಮುಖಂಡ ಬಸವನಾಯಕ ಮಾತನಾಡಿದರು.

ಚಾಮರಾಜನಗರ: ತಾಲೂಕಿನ ಉಮ್ಮತ್ತೂರು ಉರುಕಾತೇಶ್ವರಿ ದೇವಾಲಯದ ಟ್ರಸ್ಟ್‌ಗೆ ದೇವಾಲಯದ ಕೀ ಹಾಗೂ ಹುಂಡಿ ಹಣ ಹಸ್ತಾಂತರಿಸುವಂತೆ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ, ಗ್ರಾಮದ ಎಲ್ಲಾ ಕೋಮಿನ ಮುಖಂಡರು ಮೇಲ್ಮನವಿ ಸಲ್ಲಿಸಿದ್ದೇವೆ ಎಂದು ಮುಖಂಡ ಬಸವನಾಯಕ ತಿಳಿಸಿದರು.


ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.18ರಂದು ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ, ಆದೇಶಕ್ಕೆ ತಡೆ ನೀಡುವಂತೆ ಜ.29ರಂದು ಗ್ರಾಮದ ಜಯಶಂಕರ್ ಮತ್ತಿತರರು ಮೇಲ್ಮನವಿ ಸಲ್ಲಿಸಿದ್ದೇವೆ. ಅಲ್ಲದೇ ಈ ಆದೇಶದ ವಿರುದ್ಧ ರಾಜ್ಯ ಸರ್ಕಾರವೂ ಮೇಲ್ಮನವಿ ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

ಈ ಹಿಂದೆ ರಾಜ್ಯ ಸರ್ಕಾರ ಈ ದೇವಾಲಯವನ್ನು ಮುಜರಾಯಿ ಇಲಾಖೆ ವಶಕ್ಕೆ ಪಡೆದು ಆದೇಶ ಹೊರಡಿಸಿದಾಗ, ಟ್ರಸ್ಟ್‌ನವರು ದೇವಾಲಯದ ಬೀಗದ ಕೀ ಕೊಡದೆ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದ್ದರು. ಆಗ ಜಿಲ್ಲಾಡಳಿತ ದೇವಾಲಯದ ಬೀಗ ಒಡೆದು ದೇವಾಲಯವನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತ್ತು. ಈಗ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇರುವುದರಿಂದ ಟ್ರಸ್ಟ್‌ನವರು ಕಾನೂನನ್ನು ಗೌರವಿಸಬೇಕು. ಅಪ್ರಬುದ್ಧತೆಯಿಂದ, ಅವಿವೇಕದಿಂದ, ದುರಹಂಕಾರದಿಂದ ದೇವಾಲಯದ ಬೀಗ ಒಡೆದು ಹಾಕುತ್ತೇವೆ ಎಂದು ಹೇಳುತ್ತಿರುವುದು ಖಂಡನೀಯ ಎಂದರು.

ತಹಶೀಲ್ದಾರ್ ಅವರು ದೇವಾಲಯದ ಬೀಗದ ಕೀ ಕೊಡದಿದ್ದರೆ ಬೀಗ ಒಡೆಯುವುದಾಗಿ ಟ್ರಸ್ಟ್‌ನವರು ಹೇಳುತ್ತಿರುವುದು ಪ್ರಚೋದನಕಾರಿ ಹೇಳಿಕೆಯಾಗಿದೆ. ಒಂದು ವೇಳೆ ಅವರು ಬೀಗ ಒಡೆದರೆ, ಗ್ರಾಮದಲ್ಲಿ ಅಶಾಂತಿ, ಘರ್ಷಣೆ ಉಂಟಾಗುವ ಸಂಭವವಿದೆ. ಇದಕ್ಕೆ ಟ್ರಸ್ಟ್‌ನವರೇ ಹೊಣೆಗಾರರಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗ್ರಾಮದ ವೀರಶೈವ ಮುಖಂಡ ಪುಟ್ಟಣ್ಣ ಮಾತನಾಡಿದರು. ಈ ವೇಳೆ ಲಿಂಗಾಯತ ಸಮಾಜದ ರೇವಣ್ಣ, ಒಕ್ಕಲಿಗ ಸಮಾಜದ ಎಸ್.ಪ್ರಭುಸ್ವಾಮಿ, ದಲಿತ ಸಮಾಜದ ಸಿದ್ದರಾಜು, ಕುಂಬಾರ ಸಮಾಜದ ಸಿದ್ದರಾಜು, ಉಪ್ಪಾರ ಸಮಾಜದ ಮಹೇಶ್ ಸುದ್ದಿಗೋಷ್ಠಿಯಲ್ಲಿದ್ದರು.

ಬೈಕ್‌ಗಳ ನಡುವೆ ಡಿಕ್ಕಿ: ಯುವಕ ಸಾವು



ಜಯಸೂರ್ಯ

ಚಾಮರಾಜನಗರ: ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಯುವಕ ಸಾವನ್ನಪ್ಪಿ, ಮತ್ತಿಬ್ಬರು ಗಾಯಗೊಂಡಿರುವ ಘಟನೆ ನಗರದ ನಂಜನಗೂಡು ರಸ್ತೆಯ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ಬಳಿ ಶನಿವಾರ ಬೆಳಗ್ಗೆ ನಡೆದಿದೆ.

ನಗರದ ನಿವಾಸಿ ಜಯಸೂರ್ಯ(21) ಸಾವನ್ನಪ್ಪಿದವರು. ಘಟನೆಯಲ್ಲಿ ವಿಘ್ನೇಶ್(ಮದನ್) ಹಾಗೂ ಮಲ್ಲಯ್ಯನಪುರ ಗ್ರಾಮದ ಪ್ರಭುಸ್ವಾಮಿ ಗಾಯಗೊಂಡು ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಮೂವರೂ ಬದನಗುಪ್ಪೆ ಬಳಿಯ ಕೈಗಾರಿಕಾ ಪ್ರದೇಶದ ಉದ್ಯೋಗಿಗಳಾಗಿದ್ದು, ಜಯಸೂರ್ಯ ಹಾಗೂ ವಿಘ್ನೇಶ್ ಚಾ.ನಗರದಿಂದ ಬದನಗುಪ್ಪೆ ಕೈಗಾರಿಕಾ ಪ್ರದೇಶಕ್ಕೆ ತೆರಳುತ್ತಿದ್ದರು. ಇದೇ ವೇಳೆ ಪ್ರಭುಸ್ವಾಮಿ ರಾತ್ರಿ ಪಾಳಿ ಕೆಲಸ ಮುಗಿಸಿ ಊರಿಗೆ ಬರುತ್ತಿದ್ದರು. ಈ ವೇಳೆ ನಂಜನಗೂಡು ರಸ್ತೆಯ ನೂತನ ರಾಷ್ಟ್ರೀಯ ಹೆದ್ದಾರಿ ಬೈಪಾಸ್‌ನಲ್ಲಿ ಪ್ರಭುಸ್ವಾಮಿ ಮಲ್ಲಯ್ಯನಪುರಕ್ಕೆ ತೆರಳಲು ಬಲಕ್ಕೆ ಬೈಕ್ ತಿರುಗಿಸಿದ ವೇಳೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಈ ವೇಳೆ ತೀವ್ರ ಗಾಯಗೊಂಡ ಜಯಸೂರ್ಯ ಸ್ಥಳದಲ್ಲೇ ಸಾವನ್ನಪ್ಪಿದರೇ, ಗಾಯಗೊಂಡ ವಿಘ್ನೇಶ್ ಹಾಗೂ ಪ್ರಭುಸ್ವಾಮಿ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಈ ಸಂಬಂಧ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ರಾಜೇಶ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿದರು. ಈ ಸಂಬಂಧ ನಗರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಸುತ್ತೂರು ಜಾತ್ರಾ ಮಹೋತ್ಸವ

ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಮಾದರಿಗಳಿರುತ್ತವೆ. ಸರ್ಕಾರದ ಅಭಿವೃದ್ಧಿ ಇಲಾಖೆಗಳು, ಕೈಗಾರಿಕಾ ಸಂಸ್ಥೆಗಳು ಹಾಗೂ ಮಹಿಳಾ ಉದ್ಯಮಿಗಳು ಪಾಲ್ಗೊಳ್ಳಲಿದ್ದಾರೆ. ವೈದ್ಯಕೀಯ ಹಾಗೂ ತಾಂತ್ರಿಕ ವಸ್ತುಪ್ರದರ್ಶನ ಇರಲಿದೆ ಎಂದು ಮಾಹಿತಿ ನೀಡಿದರು.

ಸಾಮೂಹಿಕ ವಿವಾಹ : ಫೆ.7ರಂದು ನಡೆಯುವ ಉಚಿತ ಸಾಮೂಹಿಕ ವಿವಾಹದಲ್ಲಿ ಜಾತಿ–ಮತ ಭೇದವಿಲ್ಲದೆ ಸರ್ವಧರ್ಮಗಳ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಅಂತರ್ಜಾತಿ, ವಿಶೇಷ ಚೇತನರು ಹಾಗೂ ಹೊರ ರಾಜ್ಯಗಳ ವಧು–ವರರು ಸಹ ಪಾಲ್ಗೊಳ್ಳಲಿದ್ದಾರೆ. ವಿವಾಹಗಳ ನೋಂದಣಿಯನ್ನು ಮಾಡಿಸಲಾಗುತ್ತದೆ. ವಧುವಿಗೆ ಸೀರೆ, ಕುಪ್ಪಸ, ಮಾಂಗಲ್ಯ ಹಾಗೂ ಕಾಲುಂಗುರ, ವರನಿಗೆ ಪಂಚೆ, ವಲ್ಲಿ, ಷರ್ಟ್ ನೀಡಲಾಗುತ್ತದೆ. ಸಾಮೂಹಿಕ ವಿವಾಹ ವ್ಯವಸ್ಥೆಯಲ್ಲಿ ಈವರೆಗೆ 3000ಕ್ಕೂ ಹೆಚ್ಚು ಮಂದಿ ಸತಿ–ಪತಿಗಳಾಗಿದ್ದಾರೆ. ವಧು–ವರರು ವಿವಾಹದ ದೃಢೀಕರಣ ಪತ್ರ ಹಾಗೂ ನೋಂದಣಿ ಪತ್ರಗಳನ್ನು ಸಲ್ಲಿಸಿ, ಸರ್ಕಾರ ನೀಡುವ ಪ್ರೋತ್ಸಾಹಧನವನ್ನು ಪಡೆದುಕೊಳ್ಳಬಹುದಾಗಿದೆ.

ಚಿತ್ರಕಲೆ, ಗಾಳಿಪಟ ಸ್ಪರ್ಧೆ, ಚಿತ್ರಸಂತೆ: 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಭಾಗಗಳಲ್ಲಿ, ಸ್ಥಳದಲ್ಲೇ ವಿವಿಧ ವಿಷಯಗಳ ಕುರಿತು ಚಿತ್ರ ರಚಿಸುವ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ ಮತ್ತು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಗಾಳಿಪಟ ಸ್ಪರ್ಧೆ ಆಯೋಜಿಸಲಾಗಿದೆ. ರಾಜ್ಯ ಹಾಗೂ ಹೊರರಾಜ್ಯ ಕಲಾವಿದರುಗಳ ಕಲಾಕೃತಿಗಳ ಪ್ರದರ್ಶನ, ಮಾರಾಟ ಹಾಗೂ ಸ್ಥಳದಲ್ಲೇ ಸಾರ್ವಜನಿಕರ ಭಾವಚಿತ್ರ ರಚನೆ ಮಾಡಿ ಮಾರಾಟ ಮಾಡುವ ವ್ಯವಸ್ಥೆ ಜಾತ್ರೆಯ ಎಲ್ಲಾ ದಿನಗಳಲ್ಲಿಯೂ ಇರುತ್ತದೆ.

ಕುಸ್ತಿ ಪಂದ್ಯಾವಳಿ : ಫೆ.9ರಂದು ರಾಷ್ಟ್ರಮಟ್ಟದ ನಾಡ ಕುಸ್ತಿ ಪಂದ್ಯಗಳು ನಡೆಯಲಿವೆ. ಈ ಬಾರಿ ಎರಡು ಮಾರ್ಫಿಟ್ ಕುಸ್ತಿಗಳಿರುತ್ತವೆ. ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ವಿಜೇತರಿಗೆ 'ಸುತ್ತೂರು ಕೇಸರಿ' ಪ್ರಶಸ್ತಿ ಹಾಗೂ ಸ್ಥಳೀಯ ಉತ್ತಮ ಕುಸ್ತಿ ಸ್ಪರ್ಧೆ ವಿಜೇತರಿಗೆ 'ಸುತ್ತೂರು ಕುಮಾರ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕಟ್ಟಡ ಉದ್ಘಾಟನೆ : ಫೆ.10ರಂದು ಸುತ್ತೂರಿನ ಮಠದ ಮುಂಭಾಗ ನೂತನವಾಗಿ ನಿರ್ಮಿಸಿರುವ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅತಿಥಿಗೃಹ ಉದ್ಘಾಟನೆಗೊಳ್ಳಲಿದೆ.

ಕ್ಯಾನ್ಸರ್ ತಪಾಸಣಾ ಶಿಬಿರ : ಫೆ.6ರಿಂದ 10ರವರೆಗೆ 5 ದಿನಗಳ ಕಾಲ ಕ್ಯಾನ್ಸರ್ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಕ್ಯಾನ್ಸರ್ ತಡೆಗಟ್ಟುವ ಬಗ್ಗೆ ಸಲಹೆ, ಸೂಚನೆ ಹಾಗೂ ವಿವಿಧ ರೀತಿಯ ಕ್ಯಾನ್ಸರ್‌ಗಳ ಬಗ್ಗೆ ಪರೀಕ್ಷೆಗಳನ್ನು ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿದೆ.

ದೋಣಿ ವಿಹಾರ, ದೇಸಿ ಆಟ: ಸಾರ್ವಜನಿಕರ ಮನೋರಂಜನೆಗಾಗಿ ಜಾತ್ರೆಯ ಎಲ್ಲ ದಿನಗಳಲ್ಲಿ ದೋಣಿ ವಿಹಾರ ಏರ್ಪಡಿಸಲಾಗಿದೆ. ಜತೆಗೆ ಪುರುಷರಿಗೆ ಫೆ.8ರಂದು, ಮಹಿಳೆಯರಿಗೆ ಫೆ.9ರಂದು, ಜೆಎಸ್‌ಎಸ್ ಸಂಸ್ಥೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಫೆ.7ರಿಂದ 10ರವರೆಗೆ. ದೇಸಿ ಆಟಗಳಾದ ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಕುಂಟೆಬಿಲ್ಲೆ, ಅಳಿಗುಳಿಮನೆ, ಆಣೆಕಲ್ಲು, ಚದುರಂಗ, ಬುಗುರಿ, ಚೌಕಬಾರದ ಜತೆಗೆ 50 ಕೆಜಿ ಭಾರದ ಚೀಲ ಹೊತ್ತು ಓಡುವುದು, ಕಲ್ಲುಗುಂಡು ಎತ್ತುವುದು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವ ಸ್ಪರ್ಧೆ ಆಯೋಜಿಸಲಾಗಿದೆ. ವಿಜೇತರಾದವರಿಗೆ ನಗದು ಬಹುಮಾನ, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿಪತ್ರ ನೀಡಲಾಗುತ್ತದೆ.

53ನೇ ದನಗಳ ಪರಿಷೆ: ಪ್ರತಿ ವರ್ಷದಂತೆ ಈ ವರ್ಷವೂ ದನಗಳ ಜಾತ್ರೆ ಏರ್ಪಡಿಸಲಾಗಿದೆ. ರೈತರು ಎತ್ತು, ಹಸು, ಹೋರಿಗಳನ್ನು ಕೊಂಡುಕೊಳ್ಳಲು ಹಾಗೂ ಮಾರಾಟ ಮಾಡಲು ಅವಕಾಶವಿರುತ್ತದೆ. ಪಶುಪಾಲನಾ ಹಾಗೂ ಪಶುವೈದ್ಯಕೀಯ ಇಲಾಖೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ನಡೆಸಲಾಗುತ್ತದೆ.

ಉತ್ತಮ ರಾಸುಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತದೆ.

ಕಪಿಲಾರತಿ, ಸಾಂಸ್ಕೃತಿಕ ಮೇಳ: ಫೆ.10ರ ತೆಪ್ಪೋತ್ಸವದಂದು ನಂಜನಗೂಡಿನ ಯುವ ಬ್ರಿಗೇಡ್ ಸಹಯೋಗದಲ್ಲಿ ಕಪಿಲಾರತಿ ಏರ್ಪಡಿಸಲಾಗಿದೆ. ಜೆಎಸ್‌ಎಸ್ ಅಂತರಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ 3,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಭರತನಾಟ್ಯ, ಸಾಮೂಹಿಕ ನೃತ್ಯ, ಶಾಸ್ತ್ರೀಯ ಸಂಗೀತ, ವಚನಾಧಾರಿತ ನೃತ್ಯ, ಸಾಮೂಹಿಕ ಗಾಯನ ಸ್ಪರ್ಧೆಗಳ ಮೂಲಕ ಸುಮಾರು 400ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಗದ್ದುಗೆಯ ಆವರಣದಲ್ಲಿ ನಗರಪ್ರದೇಶಗಳ ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರಿಂದ ಗಾಯನ, ನೃತ್ಯ ಹಾಗೂ ನಾಟಕ ಪ್ರದರ್ಶನ ವಿರಲಿದೆ. ಜತೆಗೆ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳ ಕಲಾತಂಡಗಳು ಕಲಾಪ್ರದರ್ಶನ ನೀಡಲಿವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಶಿವಕುಮಾರಸ್ವಾಮಿ, ಉದಯಶಂಕರ್ ಇದ್ದರು.

ಪ್ರಸಾದ, ವಸತಿ ವ್ಯವಸ್ಥೆ

ಪ್ರಸಾದ ಸಮಿತಿಯ ಸಂಚಾಲಕ ಡಾ.ಸುಬ್ಬಪ್ಪ ಮಾತನಾಡಿ, ಈ ವರ್ಷದ ಜಾತ್ರಾ ಮಹೋತ್ಸವಕ್ಕೆ 25 ಲಕ್ಷಕ್ಕೂ ಹೆಚ್ಚು ಜನರು ಆಗಮಿಸುವ ಸಾಧ್ಯತೆ ಇದೆ. ಇದಕ್ಕಾಗಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತಾದಿಗಳಿಗೆ ಪ್ರತಿನಿತ್ಯ ಬೆಳಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಒಟ್ಟು 6 ದಿನಗಳ ಪ್ರಸಾದ ತಯಾರಿಕೆಗೆ 1000 ಕ್ವಿಂಟಾಲ್ ಅಕ್ಕಿ, 180 ಕ್ವಿಂಟಲ್ ತೊಗರಿಬೇಳೆ, 1500 ಕ್ಯಾನ್ ರಿಫೈನ್ಸ್ ಅಡುಗೆ ಎಣ್ಣೆ, 12 ಟನ್ ಬೆಲ್ಲ, 4000 ಕೆ.ಜಿ. ಖಾರದಪುಡಿ, 250 ಕ್ವಿಂಟಲ್ ಸಕ್ಕರೆ, 500 ಕೆ.ಜಿ. ನಂದಿನಿ ತುಪ್ಪ, 800 ಕೆ.ಜಿ. ದ್ರಾಕ್ಷಿ, ಗೋಡಂಬಿ, 8000 ಲೀ ಹಾಲು, 28,000 ಲೀ ಮೊಸರು, 25,000 ತೆಂಗಿನಕಾಯಿ, 5000 ಕೆಜಿ ಉಪ್ಪಿನಕಾಯಿ ಬಳಸಲಾಗುತ್ತದೆ. ಬೆಳಗಿನ ಪ್ರಸಾದಕ್ಕೆ ವಿವಿಧ ದಿನಗಳಂದು ಬೆಲ್ಲದ ಅನ್ನ, ಅಕ್ಕಿನುಚ್ಚಿನ ಉಪ್ಪಿಟ್ಟು, ಕೇಸರಿಬಾತ್, ಖಾರಾಬಾತ್, ಸಿಹಿ ಪೊಂಗಲ್, ಖಾರಾ ಪೊಂಗಲ್, ಹುಳಿಗೊಜ್ಜು, ಚಿತ್ರಾನ್ನ, ಬೆಲ್ಲದ ಸಜ್ಜಿಗೆ ನೀಡಲಾಗುತ್ತದೆ. ಮಧ್ಯಾಹ್ನ ಹಾಗೂ ರಾತ್ರಿ ಪಾಯಸ, ಸಿಹಿ ಬೂಂದಿ, ತರಕಾರಿ ಹುಳಿ, ಅನ್ನ, ಸಾಂಬಾರ್, ಮಜ್ಜಿಗೆ ವಿತರಿಸಲಾಗುತ್ತದೆ. ವಿಶೇಷ ದಿನದಂದು ಗೋಧಿ ಪಾಯಸ, ಮೈಸೂರು ಪಾಕ್ ಮತ್ತು ಬಿಸಿಬೇಳೆ ಬಾತ್ ನೀಡಲಾಗುತ್ತದೆ. ಜತೆಗೆ ವಸತಿ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.





ರೈತರಿಗಾಗಿ ಕೃಷಿ ಬ್ರಹ್ಮಾಂಡ



ಈ ವರ್ಷ 'ಹನಿ ಹನಿಗೂ ಭರಪೂರ ತೆನೆ' ಶೀರ್ಷಿಕೆಯಡಿ ಸಾಂಪ್ರದಾಯಿಕ ಹಾಗೂ ಆಧುನಿಕ ತಂತ್ರಜ್ಞಾನಾಧಾರಿತ ಕೃಷಿಮೇಳ ಆಯೋಜಿಸಲಾಗಿದೆ. ಒಂದು ಎಕರೆ ಕೃಷಿ ಬ್ರಹ್ಮಾಂಡ, ನೆರಳುಮನೆಯಲ್ಲಿ ಬೆಳೆದ ಹಲವಾರು ದೇಸಿ ಹಾಗೂ ವಿದೇಶಿ ತರಕಾರಿಗಳು, ಏಕದಳ, ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ವಾಣಿಜ್ಯ ಬೆಳೆಗಳು, ಮೇವಿನ ಬೆಳೆಗಳು, ವಿವಿಧ ಫಲಪುಷ್ಪಗಳು, ತೋಟಗಾರಿಕೆ ಬೆಳೆಗಳು. ರೇಷ್ಮೆ ಕೃಷಿ ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳನ್ನು ಅನುಸರಿಸಿ ಬೆಳೆದಿರುವ ಸುಮಾರು 300 ಬೆಳೆಗಳು ಹಾಗೂ ವಿವಿಧ ತಳಿಗಳ ಪ್ರಾತ್ಯಕ್ಷಿಕೆಯ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ದೇಸಿ ತಳಿಗಳ ಹಸು, ಕುರಿ, ಮೇಕೆ, ಕೋಳಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜತೆಗೆ ಫೆ.9ರಂದು ಕೃಷಿ ಜಮೀನಿನಲ್ಲಿ ನೀರಿನ ಸದ್ಬಳಕೆ ವಿಚಾರಸಂಕಿರಣ ಏರ್ಪಡಿಸಲಾಗಿದ್ದು, ರೈತರು ಹಾಗೂ ಅವರ ಮಕ್ಕಳಿಗಾಗಿ ಕೃಷಿ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಮಂಜುನಾಥ್ ತಿಳಿಸಿದರು.

ಜಾಗ ಗುರುತಿಸಲು 2 ದಿನ ಕಾಲಾವಕಾಶ

ಗ್ರಾಮದಲ್ಲಿ ಶಾಂತಿ ಕಾಪಾಡಬೇಕು. ಕಾನೂನು ಪ್ರಕಾರ ಸರ್ಕಾರಿ ಜಾಗದಲ್ಲಿ ರಾಷ್ಟ್ರಧ್ವಜ ಹಾಗೂ ಕನ್ನಡ ಧ್ವಜ ಹಾರಿಸಲು ಮಾತ್ರ ಅವಕಾಶವಿದೆ. ಅದು ಬಿಟ್ಟು ಬೇರೆ ಯಾವುದೇ ಧ್ವಜ ಹಾರಿಸಲು ಅವಕಾಶವಿಲ್ಲ. ಕಾನೂನಿನ ಬಗ್ಗೆ ತಿಳಿದುಕೊಳ್ಳಿ ಎಂದು ತಿಳಿ ಹೇಳಿದರು ಎನ್ನಲಾಗಿದೆ. ಜೊತೆಗೆ ನೀವೇ ಒಂದು ಸ್ಥಳವನ್ನು ಗುರುತಿಸಿ ಕೊಟ್ಟರೆ, ಆ ಜಾಗವನ್ನು ಪರಿಶೀಲಿಸಿ ಕಾನೂನು ಪ್ರಕಾರ ಜಿಲ್ಲಾಡಳಿತದಿಂದಲೇ ಮುಂದಿನ ಕ್ರಮ ವಹಿಸಲಾಗುವುದು. ಆದ್ದರಿಂದ ಇನ್ನೆರಡು ದಿನಗಳಲ್ಲಿ ನೀವೇ ಮಾತುಕತೆ ನಡೆಸಿ ನಿರ್ಧಾರ ತಿಳಿಸಿ ಎಂದು ಗ್ರಾಮಸ್ಥರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಧ್ವಜ ವಿವಾದಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಚೋದನೆ, ಗಾಳಿ ಸುದ್ದಿಗಳಿಗೆ ಕಿವಿಗೊಡಬೇಡಿ. ಗ್ರಾಮದಲ್ಲಿ ಶಾಂತಿ–ಸೌಹಾರ್ದತೆ ಕಾಪಾಡಬೇಕು. ಕಾನೂನು ಬಾಹಿರ ಕೃತ್ಯಗಳಲ್ಲಿ ಭಾಗಿಯಾಗಬಾರದು ಎಂದು ಮನವಿ ಮಾಡಿದ್ದಾರೆ. ಸಭೆಯಲ್ಲಿ ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಸೇರಿದಂತೆ ಗ್ರಾಮಸ್ಥರಿದ್ದರು.

ಮನೆ ಮನೆಗೆ ಕೇಸರಿ ಧ್ವಜ ಹಂಚಿ ಅಭಿಯಾನ

ಹನುಮ ಧ್ವಜ ವಿಚಾರದಲ್ಲಿ ವಿವಾದದ ಕೇಂದ್ರಬಿಂದುವಾಗಿದ್ದ ಕೆರಗೋಡು ಗ್ರಾಮದಲ್ಲಿ ಇದೀಗ ಕೇಸರಿ ಧ್ವಜ ಹಾರಿಸುವ ಅಭಿಯಾನಕ್ಕೆ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್ ಚಾಲನೆ ನೀಡಿದರು. ಬಿಜೆಪಿಯಿಂದ ಕೇಸರಿ ಧ್ವಜ ಅಭಿಯಾನ ಆರಂಭವಾಗಿದ್ದು, ಮನೆ ಮನೆಗಳ ಮೇಲೆ ಕೇಸರಿ ಧ್ವಜ ಹಾರಿಸುವ ಅಭಿಯಾನದ ಅಂಗವಾಗಿ ಪ್ರತೀ ಮನೆಗೆ ಕೇಸರಿ ಧ್ವಜ ನೀಡಲಾಯಿತು. ಅಭಿಯಾನಕ್ಕೆ ಚಾಲನೆಗೂ ಮೊದಲು ಗ್ರಾಮದ ಅಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಆಂಜನೇಯ ಸ್ವಾಮಿಯ ಮುಂದೆ ಹನುಮಧ್ವಜ ಇಟ್ಟು ಪೂಜೆ ಸಲ್ಲಿಸಿದ ಬಿಜೆಪಿ ಕಾರ್ಯಕರ್ತರು ಬಳಿಕ ಮನೆ ಮನೆಗೆ ಕೇಸರಿ ಬಾವುಟ ಹಂಚಿದರು. ಬಳಿಕ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಈ ಅಭಿಯಾನ ಕೇವಲ ಕೆರಗೋಡಿಗೆ ಮಾತ್ರ ಸೀಮಿತವಾಗಿಲ್ಲ. ಇಡೀ ಮಂಡ್ಯ ಜಿಲ್ಲೆಯಾದ್ಯಂತ ಕೇಸರಿ ಬಾವುಟಗಳನ್ನು ಮನೆ ಮನೆಗಳಲ್ಲಿ ಹಾರಿಸಲು ಹಂಚಲಾಗುವುದು ಎಂದರು.

'ಪರಿದೃಶ್ಯ' ಅಂತಾರಾಷ್ಟ್ರೀಯ ಕಿರುಚಿತ್ರ ಸಾಕ್ಷ್ಯಚಿತ್ರೋತ್ಸವಕ್ಕೆ ಚಾಲನೆ

ಮುಂದಿನ ದಿನಗಳಲ್ಲಿ ರೋಬೋಟ್, ಡ್ರೋನ್ ಬಳಕೆ ಹೆಚ್ಚುವ ಸಾಧ್ಯತೆ: ಚಿತ್ರ ನಿರ್ದೇಶಕ ಪ್ರಕಾಶ ಬೆಳವಾಡಿ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಶನಿವಾರ ನಡೆದ 'ಪರಿದೃಶ್ಯ' ಅಂತರರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರೋತ್ಸವವನ್ನು ನಿರ್ದೇಶಕ ಪ್ರಕಾಶ್ ಬೆಳವಾಡಿ ಉದ್ಘಾಟಿಸಿದರು. ಚಿತ್ರದಲ್ಲಿ ಮೈಸೂರು ಸಿನಿಮಾ ಸೊಸೈಟಿ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಶರಣಪ್ಪ ವಿ ಹಲಸೆ, ಸಹ ಸಂಚಾಲಕರಾದ ಪದ್ಮಾವತಿ ಎಸ್.ಭಟ್ ಅವರನ್ನು ಕಾಣಬಹುದು.

ಮೈಸೂರು,ಫೆ.3(ಎಂಟಿವೈ)– ಮುಂಬರುವ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ರೋಬೋಟ್ ಸೇರಿದಂತೆ ಕೃತಕ ಬುದ್ಧಿಮತ್ತೆ ಬಳಕೆ ಹೆಚ್ಚಾಗುವ ಸಾಧ್ಯತೆಯಿದ್ದು, ಅದಕ್ಕೆ ಅನುಗುಣವಾಗಿ ನಾವು ಜೀವನ ನಡೆಸಬೇಕು ಎಂದು ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಸಲಹೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮೈಸೂರು ಸಿನಿಮಾ ಸೊಸೈಟಿ ಹಾಗೂ ಭಾರತೀಯ ಚಿತ್ರ ಸಾಧನದ ಸಂಯುಕ್ತಾಶ್ರಯದಲ್ಲಿ ಶನಿವಾರ ಆಯೋಜಿಸಿದ್ದ 'ಪರಿದೃಶ್ಯ' ಅಂತರರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ಬಳಕೆ ಹೆಚ್ಚಾಗುತ್ತಿದೆ. ಮುಂದಿನ ದಿನಗಳಲ್ಲಿ ಶಾಲಾ–ಕಾಲೇಜುಗಳ ಬೋಧನೆ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲೂ ರೋಬೋಟ್ ಬಳಕೆ ಹೆಚ್ಚಾಗಬಹುದು. ಹಾಲಿವುಡ್‌ನಲ್ಲಿ ಕೃತಕ ಬುದ್ಧಿಮತ್ತೆ ವಿರೋಧಿಸಿ 11,500ಕ್ಕೂ ಹೆಚ್ಚು ಮಂದಿ ಚಿತ್ರನಿರ್ದೇಶಕರು, ಫಿಲಂ ಮೇಕರ್‌ಗಳು ಪ್ರತಿಭಟನೆ ಮಾಡಿದ್ದರು. ಕೃತಕ ಬುದ್ಧಿಮತ್ತೆಯಿಂದಾಗಿ ಕ್ರಿಯಾತ್ಮಕ ಹಾಗೂ ರಚನಾತ್ಮಕತೆಗೆ ತೊಡಕಾಗುತ್ತದೆ ಎಂದು ಹಾಲಿವುಡ್ ಚಿತ್ರ ನಿರ್ದೇಶಕರು ಪ್ರತಿಭಟನೆ ಮಾಡಿದ್ದಾರೆ ಎಂದರು.

ಚಲನಚಿತ್ರಗಳಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಶಾಲೆಗೆ ಮಕ್ಕಳನ್ನು ಸೇರಿಸುವ ಜನರು, ಇದಕ್ಕೆ ಕಾರಣ ಚಲನಚಿತ್ರದಲ್ಲಿ ಇರುವ ಒಪ್ಪಲಾಗದ ವಿಷಯವನ್ನು ಬಲವಂತವಾಗಿ ಜನರಿಗೆ ತುಂಬಲು ಮಾಡುವ ಪ್ರಯತ್ನದಿಂದ ಬೇಸತ್ತು ತಮ್ಮ ಮಕ್ಕಳನ್ನು ಫಿಲಂ ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ವಿಶ್ಲೇಷಿಸಿದರು.

ಇಸ್ರೇಲ್ ಹಾಗೂ ಪ್ಯಾಲೆಸ್ತೀನ್ ನಡುವೆ ನಡೆದ ಯುದ್ಧದಲ್ಲಿ ಡ್ರೋನ್‌ಗಳಿಂದಲೇ ಏರ್ ಸ್ಟ್ರೈಕ್ ಮಾಡಲಾಯಿತು. ಮುಂದಿನ ದಿನಗಳಲ್ಲಿ ಡ್ರೋನ್ ಬಳಕೆ ಹೆಚ್ಚಾಗುತ್ತದೆ. ಯುದ್ಧಗಳಲ್ಲಿ ರೊಬೋಟ್‌ಗಳು ಪಾಲ್ಗೊಳ್ಳುತ್ತವೆ. ರೋಬೋಟ್‌ಗಳ ನಡುವೆಯೇ ಯುದ್ಧ ನಡೆಯುತ್ತಿದೆ. ಭಾರತ ಯುದ್ಧದ ಉದ್ದೇಶಕ್ಕಾಗಿ ಬಳಸುವ ಡ್ರೋನ್‌ಗಳನ್ನು ಅಮೇರಿಕಾದಿಂದ ತರಿಸಿಕೊಳ್ಳಲು ಕ್ಯಾಬಿನೆಟ್‌ನಲ್ಲಿ ಅನುಮತಿ ಸಿಕ್ಕಿದೆ ಎಂದರು.

ನನಗೆ 21 ವರ್ಷ ವಯಸ್ಸಾಗಿದ್ದಾಗ 1982–83ರಲ್ಲಿ ಮೊದಲ ಬಾರಿಗೆ ಟಿವಿ ನೋಡಿದ್ದೆ. ಇಂಜಿನಿಯರಿಂಗ್ ಓದುತ್ತಿದ್ದಾಗ ವರ್ಷಕ್ಕೆ 2 ಸಿನಿಮಾ ನೋಡುತ್ತಿದ್ದೆವು. ಆಗ ವರ್ಷಕ್ಕೆ 5ರಿಂದ 6 ಗಂಟೆ ಮಾತ್ರ ದೃಶ್ಯ ಮೀಡಿಯಾ ವೀಕ್ಷಿಸುತ್ತಿದ್ದೆವು. ಆದರೆ, ಈಗ ಕಂಪ್ಯೂಟರ್‌ಗಿಂತ ಸೂಪರ್ ಸ್ಪೀಡ್‌ನಲ್ಲಿ ಕೆಲಸ ಮಾಡುವ ಮೊಬೈಲ್ ಬಂದಿವೆ. ಜನ ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 1 ಗಂಟೆ ವೇಳೆಗಾಗಲೇ ಸತತ 5 ಗಂಟೆ ಮೊಬೈಲ್ ವೀಕ್ಷಣೆ ಮಾಡಿರುತ್ತಾರೆ. ಇನ್ನಷ್ಟು ಮಂದಿ ಮೊಬೈಲ್ ಬಳಕೆಗೆ ದಾಸರಾಗಿದ್ದು, ದಿನವೊಂದಕ್ಕೆ 12 ಗಂಟೆಗೂ ಹೆಚ್ಚು ಸಮಯ ಮೊಬೈಲ್ ನೋಡುತ್ತಿರುತ್ತಾರೆ. ಇದರಿಂದ ಜನರ ಏಳಿಗೆಗೆ ತೊಡಕಾಗುತ್ತಿದೆ ಎಂದು ವಿಷಾದಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಶರಣಪ್ಪ ವಿ ಹಲಸೆ ಮಾತನಾಡಿ, ವಿಶ್ವದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಇಂದು ಮಿಂಚಿನ ವೇಗದಲ್ಲಿ ಸಾಧನೆ ಆಗುತ್ತಿದೆ. ಇಂತಹ ಸಂದರ್ಭದಲ್ಲಿ ನಾವು ಹೇಗೆ ಸಾಗಬೇಕು ಎಂದು ಅವಲೋಕಿಸಬೇಕು. ಪರಿದೃಶ್ಯ ಕಿರುಚಿತ್ರೋತ್ಸವದಲ್ಲಿ ಕಿರುಚಿತ್ರ ನಿರ್ಮಾಣ ಹೇಗಿರಬೇಕು. ಕಿರುಚಿತ್ರದ ಮೂಲಕ ಪರಿಣಾಮಕಾರಿಯಾಗಿ ಸಂದೇಶ ಸಾರುವ ಕುರಿತು ಸೇರಿದಂತೆ ಇನ್ನಿತರ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಸಿನಿಮಾ ಸೊಸೈಟಿ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ವಹಿಸಿದ್ದರು. ವಿವಿಧ ಶಾಲಾ–ಕಾಲೇಜುಗಳಿಂದ ವಿದ್ಯಾರ್ಥಿಗಳು ಆಗಮಿಸಿದ್ದರು.

ಬಿಸಿಯೂಟ ಕಾರ್ಮಿಕರ ಗೌರವ ಧನ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ



ಬಿಸಿಯೂಟ ಕಾರ್ಮಿಕರ ಗೌರವಧನ ಹೆಚ್ಚಿಸುವಂತೆ ಆಗ್ರಹಿಸಿ ಮೈಸೂರು ಜಿಪಂ ಕಚೇರಿ ಮುಂಭಾಗ ಶನಿವಾರ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘ ಪ್ರತಿಭಟನೆ ನಡೆಸಿತು.

ಮೈಸೂರು, ಫೆ.3(ಜಿಎ)–ಪ್ರಸಕ್ತ ರಾಜ್ಯ ಬಜೆಟ್‌ನಲ್ಲಿ ಬಿಸಿಯೂಟ ಕಾರ್ಮಿಕರಿಗೆ 6000 ರೂ ಗೌರವಧನ ಹೆಚ್ಚಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ವಿವಿಧ ಸರಕಾರಿ ಹಾಗೂ ಅನುದಾನಿತ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಅಪೌಷ್ಟಿಕತೆ ನೀಗಿಸಲು ಬಿಸಿಯೂಟ ಕಾರ್ಯಕ್ರಮ ಅತ್ಯಂತ ಪರಿಣಾಮಕಾರಿಯಾಗಿದೆ. ಈ ಕಾರ್ಯಕ್ರಮ ಯಶಸ್ವಿಯಾಗಲು ಬೆನ್ನೆಲುಬಾಗಿರುವವರು ಮಹಿಳಾ ಸಿಬ್ಬಂದಿಗಳು. ರಾಜ್ಯದಲ್ಲಿ 47,250 ಮುಖ್ಯ ಅಡುಗೆಯವರು, 71,336 ಅಡುಗೆ ಸಹಾಯಕರು ಸೇರಿ ಒಟ್ಟು 1,18,586 ಅಡುಗೆ ತಯಾರಕರು ಕೆಲಸ ಮಾಡುತ್ತಿದ್ದಾರೆ. ಕಡಿಮೆ ವೇತನಕ್ಕೆ ದುಡಿಯುವ ಇವರ ವೇತನ ಸಕಾಲದಲ್ಲಿ ಪಾವತಿಯಾಗುತ್ತಿಲ್ಲ. ಸೇವಾ ಹಿರಿತನದ ಭತ್ಯೆ ಇಲ್ಲ. ಕೆಲಸದ ನಿಯಮಾವಳಿಗಳ ಸ್ಪಷ್ಟ ನಿರ್ದೇಶನವಿದ್ದರೂ ಡಿ ಗ್ರೂಪ್ ದರ್ಜೆ ನೌಕರರಂತೆ ದುಡಿಸಿಕೊಳ್ಳಲಾಗುತ್ತಿದೆ. ಇದೀಗ ವಯೋನಿವೃತ್ತಿಯಾಗುತ್ತಿರುವ ಕಾರ್ಮಿಕರಿಗೆ ಯಾವುದೇ ಇಡುಗಂಟಿನ ಸಹಕಾರವಾಗಲಿ, ನಿವೃತ್ತಿ ವೇತನವಾಗಲಿ ಇಲ್ಲ. ಶಾಸನಬದ್ಧವಾಗಿ ದೊರಕಬೇಕಾದ ವೇತನ ಸಹಿತ ಹೆರಿಗೆ ರಜೆ, ವೈದ್ಯಕೀಯ ಸೌಲಭ್ಯಗಳೂ ದೊರೆಯುತ್ತಿಲ್ಲ ಎಂದು ಕಿಡಿಕಾರಿದರು.

ಚುನಾವಣಾ ಸಂದರ್ಭದ ಭರವಸೆಯಂತೆ ಈ ಬಾರಿಯ ಬಜೆಟ್‌ನಲ್ಲಿ ಮಾಸಿಕ 6 ಸಾವಿರ ರೂ ಗೌರವಧನ ನೀಡಬೇಕು. ಬಿಸಿಯೂಟ ಕಾರ್ಯಕರ್ತೆಯರಿಗೆ ವರ್ಷದಲ್ಲಿ 12 ತಿಂಗಳು ಗೌರವಧನ ನೀಡಬೇಕು. ಬಾಕಿ ಉಳಿದಿರುವ ಗೌರವಧನವನ್ನು ಈ ಕೂಡಲೇ ಬಿಡುಗಡೆ ಮಾಡಬೇಕು. ಸರ್ಕಾರಿ ಶಾಲೆಗಳಲ್ಲಿ ಹಲವಾರು ವರ್ಷಗಳಿಂದ ಮಧ್ಯಾಹ್ನದ ಬಿಸಿ ಊಟದ ಅಡುಗೆ ತಯಾರು ಮಾಡುವ ಮುಖ್ಯ ಅಡುಗೆಯವರು, ಅಡುಗೆ ಸಹಾಯಕರನ್ನು ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯ ಅನ್ವಯ ಶೆಡ್ಯೂಲ್‌ನಲ್ಲಿ ತಂದು ಆ ಹುದ್ದೆಗೆ ನಿಗದಿಪಡಿಸಿರುವಷ್ಟು ಮಾಸಿಕ ವೇತನ, ಇಪಿಎಫ್, ಇಎಸ್‌ಐ ಸೌಲಭ್ಯ ನೀಡಬೇಕು. ಶಾಸನಬದ್ಧ ಸೌಕರ್ಯಗಳಾದ ವಾರದ ರಜೆ, ರಾಷ್ಟ್ರೀಯ ಹಬ್ಬದ ರಜೆ, ಹೆರಿಗೆ ರಜೆಗಳನ್ನು ನೀಡಬೇಕು. ಸುರಕ್ಷಿತ ನಿವೃತ್ತಿ ಬದುಕು ಖಾತ್ರಿಪಡಿಸುವುದಕ್ಕಾಗಿ, ನಿವೃತ್ತಿ ವೇತನಕ್ಕೆ ಒಳಪಡಿಸಿ, ಅಲ್ಲಿಯವರೆಗೆ 5 ಲಕ್ಷ ಇಡುಗಂಟು ನೀಡಬೇಕು ಮತ್ತು ಜೀವ ವಿಮೆಗೆ ಒಳಪಡಿಸಿ ಇಲಾಖೆಯಿಂದ ಪ್ರೀಮಿಯಂ ಪಾವತಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷೆ ರಾಜೇಶ್ವರಿ, ರಾಜ್ಯ ಕಾರ್ಯದರ್ಶಿ ಸುಧಾ ಪಿ.ಎಸ್, ಮಹದೇವಮ್ಮ, ಕುಮಾರಿ, ಸೌಮ್ಯಾ, ಉಮಾ, ಪಾರ್ವತಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಇಂದು ಮಕ್ಕಳ ನಾಟಕ ಪ್ರದರ್ಶನ, ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ



ತ್ರಿಪುರಾಂತಕ ರಾಮಲಿಂಗಯ್ಯ ಹನುಮಂತೇಶ್ ಪ್ರನುಶ ಕಿರಣ್ ಅನನ್ಯ

ಮೈಸೂರು, ಫೆ.3–ಅದಮ್ಯ ರಂಗಶಾಲೆಯ ವತಿಯಿಂದ ಫೆ.4ರಂದು ಸಂಜೆ 5.30ಕ್ಕೆ ನಗರದ ಜಯಲಕ್ಷ್ಮಿಪುರಂನ ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ಆವರಣದಲ್ಲಿರುವ ಶ್ರೀ ಕುವೆಂಪು ರಂಗಮಂದಿರದಲ್ಲಿ 'ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ ಹಾಗೂ ಮಕ್ಕಳ ನಾಟಕ ಪ್ರದರ್ಶನ' ಸಮಾರಂಭ ನಡೆಯಲಿದೆ ಎಂದು ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ. ಸಮಾರಂಭವನ್ನು ಪ್ರಸಿದ್ಧ ಮಹಾಕವಯತ್ರಿ ಡಾ.ಲತಾ ರಾಜಶೇಖರ್ ಉದ್ಘಾಟಿಸಿ, ಆ ಬಳಿಕ ಪ್ರಶಸ್ತಿ ಪ್ರದಾನ ಮಾಡುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಶ್ರಾಂತ ಉಪ ನಿರ್ದೇಶಕ ಮ.ಗು. ಸದಾನಂದಯ್ಯ ಅಧ್ಯಕ್ಷತೆ ವಹಿಸುವರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಪ್ರಶಸ್ತಿ ಪುರಸ್ಕೃತರ ಕುರಿತು ಅಭಿನಂದನಾ ನುಡಿಗಳನ್ನಾಡುವರು. ಮುಖ್ಯ ಅತಿಥಿಯಾಗಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎನ್. ಸಂತೋಷ್‌ಕುಮಾರ್ ಪಾಲ್ಗೊಳ್ಳುವರು.

'ಗಾಂಧಿ ಸದ್ಭಾವನಾ ಪ್ರಶಸ್ತಿ' ಪುರಸ್ಕೃತರು: ಪ್ರಸಿದ್ಧ 'ಮೈಸೂರು ಮಿತ್ರ' ಅಂಕಣಕಾರ ಜಿ.ಎಲ್. ತ್ರಿಪುರಾಂತಕ (ಅಂಕಣ ಸಾಹಿತ್ಯ), ಮಂಡ್ಯದ ಅನಿಕೇತನ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ರಾಮಲಿಂಗಯ್ಯ (ಶಿಕ್ಷಣ ಕ್ಷೇತ್ರ), ಮೈಸೂರಿನ ವಿಜಯ ನಗರದ ಪುಣ್ಯಕೋಟಿ ಸೇವಾ ಟ್ರಸ್ಟಿನ ಅಧ್ಯಕ್ಷ ಹನುಮಂತೇಶ್ (ಸಮಾಜಸೇವಾ ಕ್ಷೇತ್ರ) ಅವರು 'ಗಾಂಧಿ ಸದ್ಭಾವನಾ ಪ್ರಶಸ್ತಿ' ಸ್ವೀಕರಿಸುವರು.

ಇದೇ ಸಂದರ್ಭದಲ್ಲಿ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಉತ್ತಮ ಸ್ವಯಂ ಸೇವಕ ವಿದ್ಯಾರ್ಥಿಗಳಾದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಹೆಚ್.ಎಸ್.ಪ್ರನುಶ, ರಾಮನಗರ ಜಿಲ್ಲೆಯ ಆರ್.ಕಿರಣ್, ಮಂಡ್ಯ ಜಿಲ್ಲೆಯ ಸಂತೆಬಾಚಹಳ್ಳಿಯ ಎಸ್.ಎಂ.ಅನನ್ಯ ಅವರಿಗೆ 'ಅದಮ್ಯ ಚೇತನ ಪ್ರಶಸ್ತಿ' ಪ್ರದಾನ ಮಾಡಲಾಗುವುದು.

ಪ್ರಶಸ್ತಿ ಪ್ರದಾನದ ಬಳಿಕ ಅದಮ್ಯ ರಂಗಶಾಲೆಯ ಮಕ್ಕಳಿಂದ ಪಂಚತಂತ್ರ ಕಥೆಯಾಧಾರಿತ 'ರಂಗಣ್ಣನ ರಂಪಾಟ' ನಾಟಕ ಪ್ರದರ್ಶನ ನಡೆಯಲಿದೆ.

2ನೇ ಟೆಸ್ಟ್: ಭಾರತಕ್ಕೆ 171 ರನ್‌ಗಳ ಮುನ್ನಡೆ

ಚೊಚ್ಚಲ ದ್ವಿಶತಕ ಸಿಡಿಸಿ ಮಿಂಚಿದ ಯಶಸ್ವಿ ಜೈಸ್ವಾಲ್


ವಿಶಾಖಪಟ್ಟಣ, ಫೆ3– ಯಶಸ್ವಿ ಜೈಸ್ವಾಲ್ ಅವರ ಚೊಚ್ಚಲ ದ್ವಿಶತಕ ಹಾಗೂ ಜಸ್‌ಪ್ರೀತ್ ಬುಮ್ರಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ ಭಾರತ 2ನೇ ದಿನದಾಟದ ಅಂತ್ಯಕ್ಕೆ 171 ರನ್‌ಗಳ ಮುನ್ನಡೆ ಕಾಯ್ದುಕೊಂಡಿದೆ.

ಶನಿವಾರ 336 ರನ್‌ಗಳಿಂದ ಪ್ರಥಮ ಇನಿಂಗ್ಸ್ ಮುಂದುವರಿಸಿದ ಭಾರತ 112 ಓವರ್‌ಗಳಲ್ಲಿ 396 ರನ್‌ಗಳಿಗೆ ಆಲೌಟಾಯಿತು. ಇಂದು ಸಹ ಇಂಗ್ಲೆಂಡ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಯಶಸ್ವಿ ಜೈಸ್ವಾಲ್ ಟೆಸ್ಟ್ ವೃತ್ತಿ ಜೀವನದ ಚೊಚ್ಚಲ ದ್ವಿಶತಕ ಸಿಡಿಸಿ ಮಿಂಚಿದರು. ಅಂತಿಮವಾಗಿ 290 ಎಸೆತಗಳಲ್ಲಿ 7 ಸಿಕ್ಸ್ ಹಾಗೂ 19 ಬೌಂಡರಿ ಒಳಗೊಂಡ 209 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ರವಿಚಂದ್ರನ್ ಅಶ್ವಿನ್ 20, ಕುಲದೀಪ್ ಯಾದವ್ 8, ಬೂಮ್ರಾ 6 ರನ್ ಗಳಿಸಿದರು. ಇಂಗ್ಲೆಂಡ್ ಪರ ಜೇಮ್ಸ್ ಆಂಡರ್ಸನ್, ಶೋಯೆಬ್ ಬಶೀರ್, ರೆಹಾನ್ ಅಹ್ಮದ್ ತಲಾ 3, ಟಾಮ್ ಹಾರ್ಟ್ಲಿ ಒಂದು ವಿಕೆಟ್ ಕಬಳಿಸಿದರು.

ಬಳಿಕ ಪ್ರಥಮ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್‌ಗೆ ಝಾಕ್ ಕ್ರಾವ್ಲಿ ಹಾಗೂ ಬೆನ್ ಡಕೆಟ್ ಉತ್ತಮ ಆರಮಭ ಒದಗಿಸಿದರು. ಆದರೆ ಡಕೆಟ್ 21 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಅರ್ಧಶತಕ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ಝಾಕ್ ಕ್ರಾವ್ಲಿ 76 ರನ್ ಗಳಿಸಿ ಔಟಾದರು. ನಂತರ ಬಂದ ಓಲ್ಲೀ ಪೋಪ್ 23, ಜಾನಿ ಬೈರ್‌ಸ್ಟೋ 25, ನಾಯಕ ಬೆನ್ ಸ್ಟೋಕ್ಸ್ 47, ಟಾಮ್ ಹಾರ್ಟ್ಲಿ 21ರನ್ ಗಳಿಸಿದರಾದರೂ ದೊಡ್ಡ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಇಂಗ್ಲೆಂಡ್ ಜಸ್‌ಪ್ರೀತ್ ಬುಮ್ರಾ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿ 253ರನ್‌ಗಳಿಗೆ ಆಲೌಟಾಯಿತು. ಆ ಮೂಲಕ ಪ್ರಥಮ ಇನಿಂಗ್ಸ್‌ನಲ್ಲಿ 143 ರನ್‌ಗಳ ಹಿನ್ನಡೆಯನ್ನು ಅನುಭವಿಸಿತು. ಭಾರತದ ಪರ ಜಸ್‌ಪ್ರೀತ್ ಬುಮ್ರಾ 6, ಕುಲ್ದೀಪ್ ಯಾದವ್ 3 ಹಾಗೂ ಅಕ್ಷರ್ ಪಟೇಲ್ ಒಂದು ವಿಕೆಟ್ ಪಡೆದರು.

ನಂತರ ದ್ವಿತೀಯ ಇನ್ನಿಂಗ್ಸ್ ಆರಂಭಿಸಿರುವ ಭಾರತ 2ನೇ ದಿನದಂತ್ಯಕ್ಕೆ 28 ರನ್ ಗಳಿಸಿದ್ದು, ಮೂರನೇ ದಿನಕ್ಕೆ 15 ರನ್‌ಗಳಿಸಿ ಯಶಸ್ವಿ ಜೈಸ್ವಾಲ್, 13 ರನ್ ಗಳಿಸಿ ನಾಯಕ ರೋಹಿತ್ ಶರ್ಮಾ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ

ಪಂಜಾಬ್ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ರಾಜೀನಾಮೆ



ಚಂಡೀಗಢ, ಫೆ.3– ಪಂಜಾಬ್ ಗವರ್ನರ್ ಮತ್ತು ಚಂಡೀಗಢದ ಆಡಳಿತಾಧಿಕಾರಿ ಬನ್ವಾರಿಲಾಲ್ ಪುರೋಹಿತ್ ಅವರು ವೈಯಕ್ತಿಕ ಕಾರಣಗಳನ್ನು ಉಲ್ಲೇಖಿಸಿ ಶನಿವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ನನ್ನ ವೈಯಕ್ತಿಕ ಕಾರಣಗಳು ಮತ್ತು ಇತರ ಕೆಲವು ಬದ್ಧತೆಗಳಿಂದಾಗಿ, ನಾನು ಪಂಜಾಬ್ ರಾಜ್ಯಪಾಲರ ಹುದ್ದೆಗೆ ಮತ್ತು ಕೇಂದ್ರಾಡಳಿತ ಪ್ರದೇಶ ಚಂಡೀಗಢದ ಆಡಳಿತಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡುತ್ತೇನೆ. ದಯವಿಟ್ಟು ನನ್ನ ರಾಜೀನಾಮೆಯನ್ನು ಅಂಗೀಕರಿಸಿ ಎಂದು ಪುರೋಹಿತ್ ತಮ್ಮ ರಾಜೀನಾಮೆ ಪತ್ರದಲ್ಲಿ ಬರೆದಿದ್ದಾರೆ.

ಪುರೋಹಿತ್ ಅವರು ಶುಕ್ರವಾರ ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದರು. ಚಂಡೀಗಢದ ಮೇಯರ್ ಚುನಾವಣೆಯಲ್ಲಿ ಬಿಜೆಪಿಯು ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳನ್ನು ಉಳಿಸಿಕೊಂಡ ಕೆಲವೇ ದಿನಗಳ ನಂತರ ಪುರೋಹಿತ್ ಅವರು ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದರು. ಮೇಯರ್ ಚುನಾವಣೆಯಲ್ಲಿ ಬ್ಯಾಲೆಟ್ ಪೇಪರ್‌ಗಳನ್ನು ಟ್ಯಾಂಪರಿಂಗ್ ಮಾಡಿದ್ದಾರೆ ಎಂದು ಕಾಂಗ್ರೆಸ್–ಎಎಪಿ ಮೈತ್ರಿ ಆರೋಪಿಸಿತ್ತು

ರಾಗೌರ 'ಎರಡು ನಾಟಕಗಳು; ಪಂಪ ಪುನರಾವಲೋಕನ' ಕೃತಿಗಳ ಬಿಡುಗಡೆ

ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಘೋಷಿಸಿ ಘನತೆ ಹಾಳು ಮಾಡಿದರು; ಪ್ರೊ.ಜಯಪ್ರಕಾಶಗೌಡರ ಬೇಸರ



ಹಿರಿಯ ಸಾಹಿತಿ ಡಾ.ರಾಮೇಗೌಡ(ರಾಗೌ) ರಚಿತ 'ಎರಡು ನಾಟಕಗಳು', 'ಪಂಪಪುನರಾವಲೋಕನ' ಪುಸ್ತಕಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಡಿ.ಎಂ. ಪರಮಶಿವಮೂರ್ತಿ ಹಾಗೂ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡರು ಶನಿವಾರ ಬಿಡುಗಡೆಗೊಳಿಸಿದರು.

ಮೈಸೂರು, ಫೆ3(ಎಸ್‌ಪಿಎನ್)–ಹಿರಿಯ ಸಾಹಿತಿ ಡಾ.ರಾಮೇಗೌಡ(ರಾಗೌ) ರಚಿತ 'ಎರಡು ನಾಟಕಗಳು', 'ಪಂಪ ಪುನರಾವಲೋಕನ' ಪುಸ್ತಕಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಡಿ.ಎಂ. ಪರಮಶಿವಮೂರ್ತಿ ಹಾಗೂ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯ ಪ್ರಕಾಶಗೌಡ ಶನಿವಾರ ಬಿಡುಗಡೆಗೊಳಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕಸಾಪ ಆವರಣದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಘಟಕ ಹಾಗೂ ಮೈಸೂರು ಸಂವಹನ ಪ್ರಕಾಶನ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿ ಮಾತನಾಡಿದರು.

ರಾಗೌ ಶಾಂತಪ್ರಿಯ ವ್ಯಕ್ತಿ: ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಮಾತನಾಡಿ, ರಾಗೌ ಅತ್ಯಂತ ಶಾಂತಪ್ರಿಯ ವ್ಯಕ್ತಿ. ಅವರು ಶೈಕ್ಷಣಿಕ ವಲಯವನ್ನು ಬಿಟ್ಟು ಬೇರೆ ಯಾರ ಬಗ್ಗೆಯೂ ಮಾತನಾಡುವುದಿಲ್ಲ. ಕಳೆದ ಹದಿನೈದು ವರ್ಷಗಳಿಂದ ಯಾವುದೇ ಸಭೆ, ಸಮಾರಂಭಗಳಲ್ಲಿ ವಿಷಯವನ್ನು ಬಿಟ್ಟು, ಸಭ್ಯತೆ ಮೀರಿ ಮಾತನಾಡಿದವರಲ್ಲ. ಅಲ್ಲದೆ, ಪ್ರಶಸ್ತಿ–ಪುರಸ್ಕಾರ, ಅಧಿಕಾರದ ಬೆನ್ನುಹತ್ತಿದವರಲ್ಲ. ತಾವಾಯಿತು, ತಮ್ಮ ಕೆಲಸವಾಯಿತು ಎಂಬ ಧಾಟಿಯಲ್ಲಿ ಸಾರ್ಥಕ ಜೀವನ ಸಾಗಿಸುತ್ತಿದ್ದಾರೆ ಎಂದು ತಿಳಿಸಿದರು.

ವಿವಿಗಳ ಘನತೆಗೆ ಮಸಿ ಬಳಿಯುವ ಕೆಲಸ: ರಾಜ್ಯ ಸರ್ಕಾರ, ಜಿಲ್ಲೆಗೆ ಒಂದರಂತೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುತ್ತಿದೆ. ಆದರೆ, ಅದರ ಪದನಾಮದ ಘನತೆಗೆ ತಕ್ಕಂತೆ ನಡೆಸಿಕೊಂಡು ಹೋಗುವ ಯೋಗ್ಯತೆ ಸರ್ಕಾರಕ್ಕಿಲ್ಲ. ಜಾನಪದ ವಿವಿ ಸ್ಥಾಪಿಸಿ, ಹಲವು ವರ್ಷ ಕಳೆದರೂ, ಸರ್ಕಾರದಿಂದ ಅನುದಾನ ಬಿಡುಗಡೆ ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅನೇಕ ಶೈಕ್ಷಣಿಕ ಕೆಲಸಗಳು ಅರ್ಧಕ್ಕೆ ನಿಂತಿವೆ. ಇನ್ನು ಇತರೆ ವಿವಿಗಳ ಹಣೆಬರಹವೂ ಇದೆ ಕಥೆ ಎಂದ ಅವರು, ರಾಗೌ ಜಾನಪದ ವಿದ್ವಾಂಸರಾಗಿದ್ದು, ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ವಿದ್ವಾಂಸರೆಂದು ಕರೆಸಿಕೊಳ್ಳಲು ಇರುವ ಎಲ್ಲಾ ಅರ್ಹತೆಗಳು ಅವರಲ್ಲಿವೆ. ಆದರೂ ಅವರ ಸಾಧನೆಗೆ ಸಲ್ಲಬೇಕಾದ ಗೌರವ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕುಲಪತಿ ಪ್ರೊ.ಡಿ.ಎಂ.ಪರಮಶಿವಮೂರ್ತಿ ಮಾತನಾಡಿ, ಸಾಹಿತ್ಯ ಎಂಬುದು ಅತ್ಯಂತ ಶ್ರೀಮಂತವಾಗಿದ್ದು, ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಕೃತಿಗಳು ಸರ್ವಕಾಲಕ್ಕೂ ಸಲ್ಲುತ್ತವೆ. ಪುಸ್ತಕದಲ್ಲಿ ಅಡಕವಾಗಿರುವ ಆದರ್ಶಗಳನ್ನು ನಮ್ಮ ಜೀವನದಲ್ಲಿ ಮೈಗೂಡಿಸಿಕೊಂಡಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಮೈಸೂರು, ಧಾರವಾಡ ಸಾಹಿತಿಗಳ ಬೀಡು: ಮೈಸೂರು, ಧಾರವಾಡದಲ್ಲಿ ಹೆಚ್ಚು ಸಾಹಿತಿಗಳು ವಾಸವಾಗಿರುವುದು ವಿಶೇಷ. ಇವೆರಡು ನಗರಗಳನ್ನು ಸಾಹಿತಿಗಳ ಬೀಡು ಎಂದು ಸಾಹಿತ್ಯವಲಯದಲ್ಲಿ ಕರೆಯುತ್ತಾರೆ. ಪಂಪನ ಸಾಹಿತ್ಯವನ್ನು ರಾಗೌ ಗಂಭೀರವಾಗಿ ಪರಿಗಣಿಸಿ, ಪುನರಾಲೋಕನ ಮಾಡಿರುವುದು ಪ್ರಸ್ತುತ ಸನ್ನಿವೇಶಕ್ಕೆ ಅಗತ್ಯವಾಗಿದೆ ಎಂದರು.

ಪಂಪ ಪುನರಾವಲೋಕನ' ಶೀರ್ಷಿಕೆಯನ್ನು ಬಿಟ್ಟು ಬೇರೆ ಶೀರ್ಷಿಕೆಯನ್ನು ನೀಡಿದ್ದರೆ ಚೆನ್ನಾಗಿತ್ತು ಎಂದು ಅಭಿಪ್ರಾಯಪಟ್ಟ ಅವರು, ಒಂದು ಸಾವಿರ ವರ್ಷಗಳ ಹಿಂದೆ ಸಮಾಜ ಹೇಗಿತ್ತು ಎಂಬುದರ ಬಗ್ಗೆ ಈ ಕೃತಿ ಬೆಳಕು ಚೆಲ್ಲುತ್ತದೆ. ಪಂಪನ ಕುಟುಂಬವು ತಲೆಮಾರುಗಳಿಂದ ಸಂಪ್ರದಾಯವಾದಿ ಹಿಂದೂಗಳಾಗಿದ್ದರೂ, ಆದರೆ, ಅವರ ತಂದೆ ಅಭಿರಾಮದೇವರಾಯ ಹಿಂಸೆಯನ್ನು ವಿರೋಧಿಸಿ ಅವರ ಇಡೀ ಕುಟುಂಬ ಜೈನಧರ್ಮಕ್ಕೆ ಮತಾಂತರಗೊಂಡ ಸನ್ನಿವೇಶವನ್ನು ಎಳೆಎಳೆಯಾಗಿ ಬಿಡಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ 'ಪಂಪ ಪುನರಾವಲೋಕನ' ಕುರಿತು ಹಾಗೂ ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ 'ಎರಡು ನಾಟಕಗಳು' ಕುರಿತು ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರಕಾಶಕ ಡಿ.ಎನ್.ಲೋಕಪ್ಪ, ಗೌರವಕಾರ್ಯದರ್ಶಿ ಲತಾಮೋಹನ್, ಕೋಶಾಧ್ಯಕ್ಷ ಜಿ.ಪ್ರಕಾಶ್, ಸಂಘಟನಾ ಕಾರ್ಯದರ್ಶಿ ಮೈನಾ.ಲೋಕೇಶ್, ಜಂಟಿ ಕಾರ್ಯದರ್ಶಿ ಕೆ.ಕೆಂಪಣ್ಣ ಉಪಸ್ಥಿತರಿದ್ದರು.

ಸುತ್ತೂರು ಜಾತ್ರೆ


ಅಂದು → ← ಇಂದು







> ರಾಜ್ಯದ ಯಾವ ಜಾತ್ರೆಯಲ್ಲಿಯೂ ನಡೆಯದಂತಹ ಕಾರ್ಯಕ್ರಮಗಳು ಸುತ್ತೂರು ಜಾತ್ರೆಯಲ್ಲಿ ನಡೆಯುತ್ತವೆ ಎಂದರೆ ತಪ್ಪಾಗಲಾರದು. ಸಂಸ್ಥೆಯ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ನಡೆಯುವ ಕ್ರೀಡಾಕೂಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದವರ ಮನಸೂರೆಗೊಳ್ಳುತ್ತಿವೆ. ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಆಗಮಿಸುವ ಸುಮಾರು 800 ಭಜನಾ ತಂಡಗಳ ಸ್ಪರ್ಧೆ ಹಾಗೂ ಸುಮಾರು 52 ವರ್ಷಗಳ ಹಿಂದೆ ಪ್ರಾರಂಭವಾದ ದನಗಳ ಪರಿಷೆ ಇಂದಿಗೂ ಸ್ಪರ್ಧಾತ್ಮಕ ರೀತಿಯಲ್ಲಿ ನಡೆಯುತ್ತಿವೆ. ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಸೋಬಾನೆ ಪದ, ಮಕ್ಕಳಿಗೆ ಗ್ರಾಮೀಣ ಆಟೋಟಗಳ ಸ್ಪರ್ಧೆ, ಚಿತ್ರಕಲೆಗಾಗಿ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ, ಗ್ರಾಮೀಣ ಪ್ರದೇಶದ ರೈತಾಪಿ ಜನರಿಗಾಗಿ ಏರ್ಪಡಿಸುವ ಕೃಷಿಮೇಳ, ವಸ್ತುಪ್ರದರ್ಶನದ ಮೂಲಕ ಗ್ರಾಮೀಣ ರೈತರಿಗೆ ಕೃಷಿ ಬಗ್ಗೆ, ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ಅರಿವು ಮೂಡಿಸಲಾಗುತ್ತದೆ.


ಎಸ್.ಎಂ.ಜಂಭುಕೇಶ್ವರ
ಹಿರಿಯ ಛಾಯಾಗ್ರಾಹಕರು ಹಾಗೂ ಪತ್ರಕರ್ತರು


ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನಲ್ಲಿರುವ ಸುತ್ತೂರು ಗ್ರಾಮ ಭತ್ತ ಬೆಳೆಯುವ ಪ್ರದೇಶವಾದರೂ 50 ವರ್ಷಗಳ ಹಿಂದೆ ಅಲ್ಲಿನ ಜನ ಬಹಳಷ್ಟು ಹಿಂದುಳಿದವರಾಗಿದ್ದರು. ಸಾವಿರ ವರ್ಷಗಳಷ್ಟು ಪುರಾತನವಾದ ಶ್ರೀ ಶಿವರಾತ್ರೀಶ್ವರ ಮಠ, ಆದಿ ಜಗದ್ಗುರುಗಳ ಗದ್ದುಗೆ, ಸೋಮೇಶ್ವರ ದೇವಸ್ಥಾನಗಳು ಅಲ್ಲಿದ್ದರೂ ಗ್ರಾಮದ ಜನ ತಾವಾಯಿತು, ತಮ್ಮ ಕೆಲಸವಾಯಿತು ಎಂದು ಭಾವಿಸಿ ಶ್ರೀಮಠ ಹಾಗೂ ಗದ್ದುಗೆ ಕಡೆಗೆ ತಲೆ ಹಾಕುತ್ತಿದ್ದುದು ಆಗೊಮ್ಮೆ ಈಗೊಮ್ಮೆ.

ಸುತ್ತೂರಿನಲ್ಲಿ 1968ರಿಂದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾಮಹೋತ್ಸವವು ಸರಳವಾಗಿ ಪ್ರಾರಂಭವಾಯಿತು. ಆಗ ಜಾತ್ರೆಯಲ್ಲಿ ಊರಿನ ಜನ ಭಾಗವಹಿಸುವುದು ವಿರಳಾತಿವಿರಳ. ಸಂಸ್ಥೆಯ ಸಿಬ್ಬಂದಿ ವರ್ಗ ಹಾಗೂ ಸೀಮಿತ ಭಕ್ತಾದಿಗಳಿಂದ ನಡೆಯುತ್ತಿದ್ದುದನ್ನು ನೋಡಿದ್ದೇನೆ. ಮೈಸೂರಿನಿಂದಲೇ ಅರ್ಚಕರು, ಓಲಗದವರು, ಕಾರ್ಯಕರ್ತರು ಮೊದಲ್ಗೊಂಡು ಎಲ್ಲರೂ ಒಂದು ಬಸ್ಸಿನಲ್ಲಿ ಹೊರಟು ನಂಜನಗೂಡು ಮುಖಾಂತರ ಸುತ್ತೂರು ತಲುಪಲು ಸುಮಾರು ಒಂದೂವರೆ ಘಂಟೆ ಬೇಕಾಗುತ್ತಿತ್ತು. ರಥೋತ್ಸವದ ದಿವಸ ಮೈಸೂರಿನಿಂದ ಬೆಳಗ್ಗೆ ಹೊರಟ ಬಸ್ಸು ಸುತ್ತೂರಿಗೆ ತಲುಪುವುದು ಸ್ವಲ್ಪ ತಡವಾದರೆ ರಥ ಹೊರಡುವುದು ತಡವಾಗುತ್ತಿತ್ತು. ಮೈಸೂರಿನಿಂದ ಬಂದ ಜನರು ರಥವನ್ನು ಎಳೆಯಬೇಕಿತ್ತು. ರಥ ಎಳೆಯಲೂ ಜನರು ಇರುತ್ತಿರಲಿಲ್ಲ ಎಂದರೆ ಈಗ ಆಶ್ಚರ್ಯವಾಗುತ್ತದೆ. ಹೆಚ್ಚೆಂದರೆ 150 ರಿಂದ 200 ಜನ ಮಾತ್ರ ರಥದ ಜೊತೆಗೆ ಇರುತ್ತಿದ್ದರು.

ಅಂದು ಚಿಕ್ಕದಾಗಿ ಪ್ರಾರಂಭವಾದ ಜಾತ್ರೆಗೆ ಮಾಜಿ ಶಾಸಕರು ಹಾಗೂ ವಕೀಲರೂ ಆದ ಎಚ್.ಗಂಗಾಧರನ್ ಅವರ ಪರಿಶ್ರಮದಿಂದ ಕ್ರಮೇಣ ಹೆಚ್ಚು ಹೆಚ್ಚು ಭಕ್ತರು ಸೇರಲಾರಂಭಿಸಿದರು. ಆಗ ಮೂರು ದಿನ ಮಾತ್ರ ನಡೆಯುತ್ತಿದ್ದ ಜಾತ್ರೆ ವಿವಿಧ ಪೂಜಾ ಕಾರ್ಯಕ್ರಮಗಳಿಂದಾಗಿ ಕ್ರಮೇಣ ಐದು ದಿನಗಳಿಗೆ ವಿಸ್ತಾರಗೊಂಡಿತು. ಅಕ್ಕಪಕ್ಕದ ಹಳ್ಳಿಗಳ ಜನರನ್ನು ಸೇರಿಸುವ ಸಲುವಾಗಿ ಆಯಾಯ ಗ್ರಾಮಗಳ ಮುಖಂಡರನ್ನು ಕರೆದು ಐದು ದಿನಗಳೂ ಬೇರೆ ಬೇರೆ ಗ್ರಾಮದಿಂದ ಪೂಜಾ ಸೇವಾರ್ಥ ಎಂದು ತಿಳಿಸಿ ಆ ಮುಖಾಂತರ ಹೆಚ್ಚಿನ ಗ್ರಾಮದ ಜನರು ಜಾತ್ರೆಯ ದಿನಗಳಲ್ಲಿ ಭಾಗವಹಿಸುವಂತೆ ಮಾಡಲಾಯಿತು. ಇಷ್ಟಾದರೂ ಸುತ್ತೂರಿನ ಜನ ಮಾತ್ರ ಜಾತ್ರೆಯಿಂದ ದೂರವಿರುತ್ತಿದ್ದರು. ಕಾಲ ಕ್ರಮೇಣ ಅವರನ್ನೂ ಜಾತ್ರೆಯಲ್ಲಿ ಭಾಗವಹಿಸುವಂತೆ ಮಾಡಲಾಯಿತು.

1984ರಲ್ಲಿ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಕಬಿನಿ ನದಿಗೆ ನಿರ್ಮಿಸಲಾದ ಸೇತುವೆ ಪೂರ್ಣಗೊಂಡು, ಅದರ ಉದ್ಘಾಟನೆಯಿಂದಾಗಿ ಮೈಸೂರಿನಿಂದ ಸುತ್ತೂರಿಗೆ ಹೊಸಕೋಟೆ ಮೂಲಕ 30 ರಿಂದ 40 ನಿಮಿಷಗಳಲ್ಲಿ ತಲುಪಲು ಸಹಕಾರಿಯಾಯಿತು. ನಂತರ ಮೈಸೂರು, ಹದಿನಾರು, ಹೊಸಕೋಟೆ ಕಡೆಯಿಂದ ಬರುವ ಭಕ್ತರ ಸಂಖ್ಯೆ ಹೆಚ್ಚಾಯಿತು.

ಈಗಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದೂರದೃಷ್ಟಿಯಿಂದಾಗಿ ಸಂಸ್ಥೆಯ ನೌಕರ ವರ್ಗದ ಕಾರ್ಯಕರ್ತರ ಪಡೆಯನ್ನು ಬಹಳ ವ್ಯವಸ್ಥಿತವಾಗಿ ಸಜ್ಜುಗೊಳಿಸಲಾಗಿದೆ. ಒಂದೊಂದು ವಿಭಾಗಕ್ಕೂ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸುವ ಸಂಸ್ಥೆಯ ನೌಕರ ವರ್ಗದ ಎಂಟತ್ತು ತಂಡವುಳ್ಳ ಗುಂಪನ್ನು ಗುರುತಿಸಿ ಸುಮಾರು 30 ಸಮಿತಿಗಳನ್ನು ಮಾಡಲಾಗಿದೆ. ಪ್ರಮುಖವಾಗಿ ಮಹಾದಾಸೋಹ, ಸಾಮೂಹಿಕ ವಿವಾಹ, ಕ್ರೀಡಾಕೂಟ, ವಸ್ತುಪ್ರದರ್ಶನ, ರಥೋತ್ಸವ, ತೆಪ್ಪೋತ್ಸವ, ಕೃಷಿವಿಭಾಗ, ದನಗಳ ಪರಿಷೆ, ನಾಟಕಗಳ ವಿಭಾಗ, ಕಾರ್ಯಕ್ರಮಗಳ ನಿರ್ವಹಣೆ, ಬಾಣ ಬಿರುಸುಗಳು, ಅತಿಥಿಗಳ ಸತ್ಕಾರ, ಪತ್ರಕರ್ತರ ಜವಾಬ್ದಾರಿ, ವೇದಿಕೆ ಜವಾಬ್ದಾರಿ – ಹೀಗೆ ಹತ್ತು ಹಲವು ಸಮಿತಿಗಳನ್ನು ಮಾಡುವ ಮುಖಾಂತರ ರಥೋತ್ಸವದ ಯಶಸ್ಸಿಗೆ ಎಲ್ಲರೂ ಕಾರಣ ರಾಗುತ್ತಾರೆ.



ಹಿಂದೆ ನಡೆಯುತ್ತಿದ್ದ ರಥೋತ್ಸವದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ವಕೀಲರಾದ ಹೆಚ್.ಗಂಗಾಧರನ್ ಇನ್ನಿತರರು.



ಹಿಂದೆ ಸುತ್ತೂರಿನ ತೆಂಗಿನ ತೋಪಿನಲ್ಲಿ ನಡೆಯುತ್ತಿದ್ದ ದಾಸೋಹದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಉಪಸ್ಥಿತಿ.

ಜಾತ್ರೆ ಪ್ರಾರಂಭದ ಮೂರು ತಿಂಗಳು ಮುಂಚಿತವಾಗಿ ಆಯಾ ಸಮಿತಿಗಳ ಕೆಲಸ ಪರಮಪೂಜ್ಯ ಜಗದ್ಗುರುಗಳ ನೇತೃತ್ವದಲ್ಲಿ ಪ್ರಾರಂಭವಾಗುತ್ತದೆ. ಸಭೆಯಲ್ಲಿ ಹಿಂದಿನ ವರ್ಷದ ಲೋಪದೋಷಗಳನ್ನು ಈ ವರ್ಷಕ್ಕೆ ಸರಿಪಡಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಸಮಿತಿಯವರಿಗೆ ನೀಡಲಾಗುತ್ತದೆ. ಹೀಗಾಗಿ ಕಳೆದ 15–20 ವರ್ಷಗಳಿಂದ ರಥೋತ್ಸವ ಯಶಸ್ವಿಯಾಗಿ ಅದ್ಧೂರಿಯಾಗಿ ನಡೆದುಕೊಂಡು ಬರುತ್ತಿದೆ.


ಪ್ರಾರಂಭದ ವರ್ಷಗಳಲ್ಲಿ ಜಾತ್ರಾ ರಥೋತ್ಸವಕ್ಕೆ ಬಂದ ಭಕ್ತರಿಗೆ ಮಾತ್ರ ತೆಂಗಿನ ತೋಪಿನಲ್ಲಿ ಊಟದ ವ್ಯವಸ್ಥೆ ಇರುತ್ತಿತ್ತು. ರಾಜೇಂದ್ರ ಶ್ರೀಗಳವರು ಊಟದ ಸಮಯದಲ್ಲಿ ಭಕ್ತರ ಮಧ್ಯೆ ಓಡಾಡುತ್ತಾ ಪ್ರೀತಿಯಿಂದ ವಿಚಾರಿಸುತ್ತಿದ್ದುದನ್ನು ಮರೆಯುವ ಹಾಗಿಲ್ಲ. ಇನ್ನುಳಿದ ಎರಡು–ಮೂರು ದಿನಗಳಲ್ಲಿ ರಾತ್ರಿಯ ಸಮಯದಲ್ಲಿ ಉತ್ಸವದ ಮೆರವಣಿಗೆಯಲ್ಲಿ ಹೋಗಿ ವಾಪಸ್ಸು ಗದ್ದುಗೆಗೆ ಬಂದರೆ ಕಾರ್ಯಕರ್ತರಿಗೆ ಊಟದ ವ್ಯವಸ್ಥೆ ಇರುತ್ತಿರಲಿಲ್ಲ. ಈಗಿನ ಜಗದ್ಗುರುಗಳು ಅಧಿಕಾರ ಸ್ವೀಕರಿಸಿದ ನಂತರ ಮಹಾದಾಸೋಹದ ಹೆಸರಿನಲ್ಲಿ ಬರುವ ಭಕ್ತರಿಗೆ 6 ದಿನಗಳೂ ಸಹ ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಪುಷ್ಕಳವಾದ ಭೋಜನ ಮತ್ತು ರಾತ್ರಿ ಊಟದ ವ್ಯವಸ್ಥೆಯನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಆರು ದಿನಗಳ ಈಗಿನ ಮಹಾಪ್ರಸಾದ ವ್ಯವಸ್ಥೆಗೆ 1000 ಕ್ವಿಂಟಾಲ್ ಅಕ್ಕಿ, 180 ಕ್ವಿಂಟಾಲ್ ತೊಗರಿ ಬೇಳೆ, 1500 ಟಿನ್ ರಿಫೈಂಡ್ ಆಯಿಲ್, 12 ಟನ್ ಬೆಲ್ಲ, 40 ಕ್ವಿಂಟಾಲ್ ಕಾರದ ಪುಡಿ, 250 ಕ್ವಿಂಟಾಲ್ ಸಕ್ಕರೆ, 5 ಕ್ವಿಂಟಾಲ್ ನಂದಿನಿ ತುಪ್ಪ, 8000 ಲೀಟರ್ ಹಾಲು, 28000 ಲೀಟರ್ ಮೊಸರು, 16 ಕ್ವಿಂಟಾಲ್ ಗೋಡಂಬಿ ದ್ರಾಕ್ಷಿ, 5 ಕ್ವಿಂಟಾಲ್ ಉಪ್ಪಿನಕಾಯಿ, 25000 ತೆಂಗಿನಕಾಯಿಗಳು, ಇದರ ಜೊತೆಗೆ ರಾಶಿರಾಶಿ ತರಕಾರಿಯನ್ನು ಹೊಂದಿಸಲಾಗುತ್ತದೆ. 6 ದಿನಗಳ ಜಾತ್ರೆಗೆ ಸರಾಸರಿ ಆರರಿಂದ ಎಂಟು ಲಕ್ಷ ಭಕ್ತರು ಬಂದು ಹೋಗುವರು. ಜೊತೆಗೆ ದೂರದಿಂದ ಬರುವ ಭಕ್ತರಿಗೆ ಉಳಿದುಕೊಳ್ಳುವುದಕ್ಕಾಗಿ ತಾತ್ಕಾಲಿಕವಾಗಿ ಕುಟೀರಗಳನ್ನು ನಿರ್ಮಿಸಿ ಕೊಡಲಾಗುತ್ತದೆ. ಹಿಂದೆ ಜಾತ್ರೆಯಿಂದ ದೂರವಿದ್ದ ಗ್ರಾಮಸ್ಥರು ಈಗ ಆರು ದಿನಗಳ ಕಾಲ ತಮ್ಮ ತಮ್ಮ ಮನೆಯ ಓಲೆಗೆ ಬೆಂಕಿ ಹಾಕುವುದಿಲ್ಲವಂತೆ; ಜಾತ್ರೆಗೆ ಬಂದವರು ಬೆಳಗ್ಗೆ ನದಿಯಲ್ಲಿ ಸ್ನಾನ ಮಾಡಿ ಬೆಳಗಿನ ಉಪಾಹಾರ ಸೇವಿಸಿ, ಜಾತ್ರೆಯಲ್ಲಿ ಸುತ್ತಾಡಿಕೊಂಡು ಬಂದರೆ ಮಧ್ಯಾಹ್ನದ ಭೋಜನ ಮತ್ತು ವಸ್ತುಪ್ರದರ್ಶನ ಸುತ್ತಾಡಿಕೊಂಡು ಬಂದರೆ ರಾತ್ರಿಯ ಊಟ ಮುಗಿದು ಹೋಗುತ್ತದೆ. ನಂತರ ಅವರು ಇಷ್ಟವಾದ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳ ವೀಕ್ಷಣೆ, ರಾತ್ರಿ ಸೊಗಸಾದ ನಿದ್ರೆ, ಇನ್ನೇನು ಬೇಕು? ಯಾವ ಚಿಂತೆ ಇಲ್ಲದೆ ಗ್ರಾಮೀಣ ಪ್ರದೇಶದ ಜನ ಸುತ್ತೂರು ಜಾತ್ರೆಯಲ್ಲಿ ಭಾಗವಹಿಸುತ್ತಾರೆ.

ರಾಜ್ಯದ ಯಾವ ಜಾತ್ರೆಯಲ್ಲಿಯೂ ನಡೆಯದಂತಹ ಕಾರ್ಯಕ್ರಮಗಳು ಸುತ್ತೂರು ಜಾತ್ರೆಯಲ್ಲಿ ನಡೆಯುತ್ತವೆ ಎಂದರೆ ತಪ್ಪಾಗಲಾರದು. ಸಂಸ್ಥೆಯ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ನಡೆಯುವ ಕ್ರೀಡಾಕೂಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದವರ ಮನಸೂರೆಗೊಳ್ಳುತ್ತಿವೆ. ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಆಗಮಿಸುವ ಸುಮಾರು 800 ಭಜನಾ ತಂಡಗಳ ಸ್ಪರ್ಧೆ ಹಾಗೂ ಸುಮಾರು 52 ವರ್ಷಗಳ ಹಿಂದೆ ಪ್ರಾರಂಭವಾದ ದನಗಳ ಪರಿಷೆ ಇಂದಿಗೂ ಸ್ಪರ್ಧಾತ್ಮಕ ರೀತಿಯಲ್ಲಿ ನಡೆಯುತ್ತಿವೆ. ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಸೋಬಾನೆ ಪದ, ಮಕ್ಕಳಿಗೆ ಗ್ರಾಮೀಣ ಆಟೋಟಗಳ ಸ್ಪರ್ಧೆ, ಚಿತ್ರಕಲೆಗಾಗಿ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ, ಗ್ರಾಮೀಣ ಪ್ರದೇಶದ ರೈತಾಪಿ ಜನರಿಗಾಗಿ ಏರ್ಪಡಿಸುವ ಕೃಷಿಮೇಳ, ವಸ್ತುಪ್ರದರ್ಶನದ ಮೂಲಕ ಗ್ರಾಮೀಣ ರೈತರಿಗೆ ಕೃಷಿ ಬಗ್ಗೆ, ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ಅರಿವು ಮೂಡಿಸಲಾಗುತ್ತದೆ.

ಪ್ರಮುಖವಾಗಿ ಇಂದು ಸಾಮಾನ್ಯ ಜನರಿಗೆ ಮಕ್ಕಳ ವಿವಾಹ ಮಾಡುವುದು ಬಹಳ ಶ್ರಮದ ಕೆಲಸ ಆಗಿದೆ. ಆ ಕಾರಣದಿಂದಾಗಿ ಸಾಮೂಹಿಕ ವಿವಾಹ ಏರ್ಪಡಿಸುವ ಮೂಲಕ ಜಾತಿ–ಮತ ಭೇದವಿಲ್ಲದೆ ಪ್ರತಿವರ್ಷ 250 ರಿಂದ 300 ಜೊತೆಯಂತೆ ಇಲ್ಲಿಯವರೆಗೆ ಸುಮಾರು 3000 ಜೊತೆ ಸತಿ–ಪತಿಗಳಾಗಿ ಸುಖ ಸಂಸಾರ ನಡೆಸುತ್ತಿದ್ದಾರೆ. ತೆಪ್ಪೋತ್ಸವದ ಸಂದರ್ಭದಲ್ಲಿ ಏರ್ಪಡಿಸುವ ಬಾಣಬಿರುಸುಗಳ ನೋಟವಂತೂ ಅದ್ಭುತವಾಗಿದೆ. ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಮೇಲೆ ನಿಂತು ಸಾವಿರಾರು ಜನರು ನೋಡಿ ಆನಂದಿಸುತ್ತಾರೆ. ಗ್ರಾಮೀಣ ಪ್ರದೇಶದ ಪ್ರಮುಖ ಆಕರ್ಷಣೆ ಎಂದರೆ ಕುಸ್ತಿಯಾಟ. ಅದನ್ನು ಮೊದಲು ಗದ್ದಿಗೆ ಮುಂದಿನ ಕಟ್ಟೆಯ ಮೇಲೆ ನಡೆಸುತ್ತಿದ್ದರು. ಈಗ ದೊಡ್ಡ ಪ್ರಮಾಣದಲ್ಲಿ ಹತ್ತಾರು ಸಾವಿರ ಜನರ ಮುಂದೆ ನಡೆಯುತ್ತಿದೆ.

ಸುತ್ತೂರು ಜಾತ್ರಾ ಮಹೋತ್ಸವ ಪ್ರಾರಂಭದ ದಿನದಿಂದಲೂ ಕೇವಲ ರಸ್ತೆಯುದ್ದಕ್ಕೂ ಮಾತ್ರ ನಡೆಯುತ್ತಿದೆ. ಆಗ ಸುತ್ತೂರಿಗೆ ಬರುವ ಭಕ್ತರ ಸಂಖ್ಯೆ ಕಡಿಮೆ ಇದ್ದುದರಿಂದ ಸಮಸ್ಯೆ ಇರಲಿಲ್ಲ, ಆದರೆ ಕಳೆದ ಎಂಟು ಹತ್ತು ವರ್ಷಗಳಿಂದ ಇಲ್ಲಿಗೆ ಆಗಮಿಸುವ ಗಣ್ಯರು ಹಾಗೂ ಭಕ್ತಾದಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು ಜಾತ್ರೆಗಾಗಿ ಒಂದು ದೊಡ್ಡ ಮೈದಾನ ನಿರ್ಮಾಣ ಮಾಡಬೇಕಾಗಿದೆ. ಇಲ್ಲವೆಂದರೆ ಕಳೆದ ವರ್ಷದಲ್ಲಿ ಆದ ನೂಕುನುಗ್ಗಲು ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಹಾಗೂ ಈಗಿರುವ ಮಹಾದಾಸೋಹದ ಸ್ಥಳವನ್ನು ಬೇರೆ ಕಡೆಗೆ ಸ್ಥಳಾಂತರಿಸಿದರೆ ಮಾತ್ರ ಕರ್ತೃ ಗದ್ದುಗೆಗೆ ಗಣ್ಯರು, ಅತಿಥಿಗಳು ಭಕ್ತಾದಿಗಳು ಸುಗಮವಾಗಿ ಆಗಮಿಸಿ ದರ್ಶನ ಮಾಡಬಹುದಾಗಿದೆ. ಇವುಗಳ ಬಗ್ಗೆ ಪೂಜ್ಯರು ಪರಿಶೀಲಿಸಿ, ಮುಂದಿನ ಹತ್ತಾರು ವರ್ಷಗಳಲ್ಲಿ ಭಕ್ತರು ಆಗಮಿಸುವ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ತೀರ್ಮಾನ ಕೈಗೊಂಡರೆ ಒಳ್ಳೆಯದು.

ಅಂದು ನೂರಾರು ಭಕ್ತರಿಂದ ಪ್ರಾರಂಭವಾದ ಸುತ್ತೂರು ಜಾತ್ರೆಗೆ ಇಂದು ರಾಜ್ಯದ ನಾನಾ ಕಡೆಯಿಂದ ಲಕ್ಷ ಲಕ್ಷ ಜನ ಆಗಮಿಸುತ್ತಿರುವುದು ಸಂತಸದ ವಿಷಯ. ಈ ಜಾತ್ರೆ ಕೇವಲ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನಡೆಯುವ ಜಾತ್ರೆಯಂತಿರದೆ ಜನಸಾಮಾನ್ಯರಿಗೆ ಜಾಗೃತಿ ಮೂಡಿಸುವಂತಹ ಕೆಲಸ ಮಾಡು ತ್ತಿರುವುದು ಸಮಾಜ ಮೆಚ್ಚುವಂತಹ ಕೆಲಸವಾಗಿರುವುದು ವಿಶೇಷ.



ಮೊದಲೆಲ್ಲಾ ಸುತ್ತೂರಿನ ಗದ್ದುಗೆಯ ಮುಂದೆ ಕುಸ್ತಿ ಪಂದ್ಯಾವಳಿ ನಡೆಯುತ್ತಿತ್ತು.



ವಾರಭವಿಷ್ಯ

4.2.2024 ರಿಂದ 10.2.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಕರ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಜ–ಧನುಸ್ಸು, ಮಕರ, ಬುಧ–ಮಕರ, ಗುರು–ಮೇಷ, ಶುಕ್ರ–ಧನುಸ್ಸು, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಿಮ್ಮ ಧ್ಯೇಯ ಸಾಧನೆಗೆ ಅವಿರತ ಪ್ರಯತ್ನದ ಅಗತ್ಯವಿದೆ. ಕೆಲವೊಂದು ಕಳವಳಕಾರಿ ಸನ್ನಿವೇಶಗಳನ್ನು ಎದುರಿಸಬೇಕಾದೀತು. ಖರ್ಚು–ವೆಚ್ಚಗಳಲ್ಲಿ ಜಿಗುಟುತನ ತೋರುವುದು ಒಳ್ಳೆಯದು. ವಾರ ಮಧ್ಯಾನಂತರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಪ್ರಗತಿಯ ಮಾರ್ಗದಲ್ಲಿ ಉಂಟಾಗಿದ್ದ ಅಡೆತಡೆಗಳನ್ನು ದೂರ ಮಾಡಲು ಕಾನೂನಿನ ಮೊರೆ ಹೋಗಬೇಕಾದೀತು.

ಶ್ರೀ ಸಂಕಷ್ಟಹರ ಗಣಪತಿ ಸ್ತೋತ್ರ. ಶುಭ ಸಂಖ್ಯೆ–4.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಈ ವಾರದಲ್ಲಿ ಸಂಯಮದಿಂದಲೂ, ಶಾಂತ ಮನಸ್ಸಿನಿಂದಲೂ ನಿರ್ಣಯ ತೆಗೆದುಕೊಳ್ಳುವ ಧೋರಣೆಯನ್ನು ಅವಲಂಬಿಸಿದರೆ ಕಷ್ಟಗಳಿಂದ ಪಾರಾಗುವಿರಿ. ಕೈ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು. ನೆರೆಹೊರೆಯ ಸಂಬಂಧಗಳು ಕೆಡದಂತೆ ಎಚ್ಚರ ವಹಿಸಿ. ದೂರ ಪ್ರಯಾಣದ ಸಮಯದಲ್ಲಿ ಅಡಚಣೆಗಳು ಉಂಟಾದೀತು. ವಾರದ ಕಡೆಗೆ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ಜ್ವಾಲಾಮಾಲ ತ್ರಿಪುರ ಸುಂದರಿ ದರ್ಶನ. ಶುಭ ಸಂಖ್ಯೆ–3.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ನಿಮ್ಮ ಕರ್ತೃತ್ವ ಸಿದ್ಧಿಯಾಗುವ ಸಮಯ ಬಂದಿದೆ. ಗುರು ಬಲವಿದೆ. ಆರ್ಥಿಕ ಗಳಿಕೆ ಉತ್ತಮವಾಗಿರುತ್ತದೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು–ವರ ದೊರೆಯುವ ಸಂಭವ. ನಿಮ್ಮ ಮಾನ ಸನ್ಮಾನಗಳಲ್ಲಿ ವೃದ್ಧಿಯಾಗುವುದು. ನಿಮ್ಮ ಕಾರ್ಯಕ್ಷೇತ್ರದಲ್ಲಿ ಸಹೋದ್ಯೋಗಿಗಳೊಂದಿಗೆ ಹೊಂದಿಕೊಂಡು ಹೋಗುವ ಧೋರಣೆ ಇರಲಿ. ಪಿತ್ತ ಜನಿತ ಕಾಯಿಲೆ ಕಾಡಬಹುದು.

ಶ್ರೀ ಸತ್ಯನಾರಾಯಣ ದರ್ಶನ. ಶುಭ ಸಂಖ್ಯೆ–9.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ಸಪ್ತಾಹದಲ್ಲಿ ಗ್ರಹಗಳ ಬಲ ಅಷ್ಟು ಪೂರಕವಾಗಿಲ್ಲ. ನಿಮಗೆ ಸಾಧ್ಯವಾಗದಂತಹ ಜವಾಬ್ದಾರಿಗಳನ್ನು ಸ್ವೀಕರಿಸದಿರಿ. ಮಹತ್ವದ ಕೆಲಸಗಳನ್ನು ಕೆಲ ಸಮಯ ಮುಂದೂಡುವುದು ಜಾಣತನ. ಮನೆಯಲ್ಲಿ ಭಿನ್ನಾಭಿಪ್ರಾಯಗಳು ಉಂಟಾದೀತು. ತಾಳ್ಮೆಯಿಂದ ನಿಭಾಯಿಸಿ. ವಾರದ ಉತ್ತರಾರ್ಧದಲ್ಲಿ ಸ್ವಲ್ಪ ಅನುಕೂಲತೆಯನ್ನು ಕಾಣುವಿರಿ. ಮಿತ್ರ ಪರಿಜನರ ಮಿಲನ ಮನಸ್ಸಿಗೆ ಮುದ ನೀಡುವುದು.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–5.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಮಿತ್ರ ಪರಿವಾರದಿಂದ ಅಪೇಕ್ಷೆ ಪಟ್ಟ ಸಹಾಯ ಸಹಕಾರಗಳು ದೊರೆಯುವುದು. ಜಮೀನು ಸೇರಿದಂತೆ ಇನ್ನಿತರೆ ಆಸ್ತಿ ವ್ಯವಹಾರಗಳು ನಿಮ್ಮ ಪರ ನಡೆಯುವುದು. ನಿಮ್ಮ ವಿರೋಧಿಗಳ ಮೇಲೆ ವಿಜಯವನ್ನು ಸಾಧಿಸುವಿರಿ. ಮನೆಯ ಮುಂದೆ ಚಪ್ಪರ, ಶಾಮಿಯಾನ ಹಾಕುವ ಶುಭ ಸಂಕೇತವಿದೆ. ಪಾರ್ಟನರ್‌ಶಿಪ್ ವ್ಯವಹಾರಗಳಲ್ಲಿ ಒಮ್ಮತ ಇರುವುದಿಲ್ಲ. ನಷ್ಟವನ್ನು ಅನುಭವಿಸುವಿರಿ. ಆರೋಗ್ಯ ಉಪೇಕ್ಷೆ ಮಾಡಬೇಡಿ.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ–6.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಪೂರ್ವಾರ್ಧದಲ್ಲಿ ಕೆಲವು ಅಹಿತಕರ ಘಟನೆಗಳಿಂದ ಮನಸ್ಸು ವಿಚಲಿತವಾಗುವುದು. ಅನ್ಯರ ಹಂಗು ನಿಮಗೆ ಇಷ್ಟವಾಗದು. ಗುಪ್ತ ಕಾರ್ಯಗಳನ್ನು ಎಸಗಿ ತೊಂದರೆಗೆ ಸಿಲುಕುವಿರಿ. ಸಹವಾಸಗಳನ್ನು ಚೆನ್ನಾಗಿ ಇಟ್ಟುಕೊಂಡರೆ ನಿಮಗೆ ಶ್ರೇಯಸ್ಸು ಆಗುವುದು. ಸನ್ಮಾರ್ಗಿಗಳ ಮಾರ್ಗದರ್ಶನ ಪಡೆದು ನಿಮ್ಮ ಒಳಿತಿಗಾಗಿ ಶ್ರಮಿಸಿ. ವಾರಾಂತ್ಯಕ್ಕೆ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಯಾದೀತು.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ಕರ್ತೃತ್ವ ಶಕ್ತಿ ಪರಕಾಷ್ಠೆಯಲ್ಲಿ ಇರುತ್ತದೆ. ಹೊಸ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸುವಿರಿ. ಆಸ್ತಿ ವಿಷಯದಲ್ಲಿ ಉಂಟಾಗಿದ್ದ ಗೊಂದಲಗಳು ವರಿಷ್ಠರ ಮಧ್ಯ ಪ್ರವೇಶದಿಂದ ಪರಿಹಾರವಾಗುತ್ತವೆ. ಪಂಚಮ ಶನಿ ಇರುವುದರಿಂದ ಹೊಸ ಪರಿಚಿತರನ್ನು ಸಾರಾಸಗಟಾಗಿ ನಂಬದಿರಿ. ನಿಮ್ಮ ಬ್ಯಾಂಕ್ ವಿವರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–1.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಆತುರದಿಂದ ಯಾವ ಕೆಲಸವೂ ಸಮರ್ಪಕವಾಗಿ ಆಗುವುದಿಲ್ಲ. ಸರಳ ಮಾರ್ಗದಿಂದ ಹೋದರೆ ಕೆಲಸಗಳು ತಡವಾದರೂ ಅಡಚಣೆ ಇಲ್ಲದೆ ಸಂಪನ್ನವಾಗುವುದು. ಹಣಕಾಸು ಪರಿಸ್ಥಿತಿ ಸುಧಾರಿಸುವುದು. ಆದರೆ ಹೊಸ ಹೂಡಿಕೆಗಳು ನಷ್ಟದ ಹಾದಿ ಆಗುವುದು. ಹೊಸ ಪ್ರಸ್ತಾವಗಳನ್ನು ಆಳವಾಗಿ ಅಭ್ಯಾಸ ಮಾಡಿಯೇ ನಿರ್ಣಯ ಮಾಡಿ. ವಾರಾಂತ್ಯಕ್ಕೆ ಮನೆಗೆ ಅತಿಥಿ ಅಭ್ಯಾಗತರ ಆಗಮನದಿಂದ ಖರ್ಚು.

ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ–2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರ ಪೂರ್ತಿ ಅನುಕೂಲಕರ ವಾತಾವರಣ ಇರುತ್ತದೆ. ನಿಮ್ಮ ವರಮಾನದಲ್ಲಿ ಹೆಚ್ಚಳವನ್ನು ಕಾಣುವಿರಿ. ದ್ವಿದಳ ಧಾನ್ಯ ವ್ಯಾಪಾರ ಯಶಸ್ವಿಯಾಗಿ ನಡೆದು ಹೆಚ್ಚಿನ ಲಾಭವಾಗುವುದು. ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗುವುದರಿಂದ ಧನ್ಯತಾಭಾವ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಲೆಕ್ಕ ಪರಿಶೋಧಕರಿಗೆ ದೊಡ್ಡ ಕಂಪನಿಗಳ ಫೈಲ್‌ಗಳು ದೊರೆಯಲಿದೆ.

ಶ್ರೀ ರಾಯರ ಸೇವೆ. ಶುಭ ಸಂಖ್ಯೆ–8

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

'ತಾಳಿದವನು ಬಾಳಿಯಾನು' ಎಂಬ ನಾಣ್ಣುಡಿಯಂತೆ ಯಾವ ಮಾತಿಗೂ ದುಡುಕದೆ ತಾಳ್ಮೆಯಿಂದ ವರ್ತಿಸಿ. ಕೊಡು–ತರುವ ವ್ಯವಹಾರಗಳನ್ನು ಚೆನ್ನಾಗಿ ವಿಮರ್ಶೆ ಮಾಡುವುದು ಜಾಣತನ. ವಾರದ ಉತ್ತರಾರ್ಧಕ್ಕೆ ವ್ಯಾಪಾರ–ವ್ಯವಹಾರಗಳಲ್ಲಿ ಹಾಗೂ ಹೈನುಗಾರಿಕೆ ವೃತ್ತಿಯಿಂದ ಹೆಚ್ಚಿನ ಧನಲಾಭವಾಗುವುದು. ದೂರ ಪ್ರಯಾಣಗಳು ಸಂಭವಿಸಬಹುದು. ಎಚ್ಚರಿಕೆಯಿಂದ ಪ್ರಯಾಣ ಮಾಡಿ.

ಶ್ರೀ ಶನಿಸ್ತೋತ್ರ ಜಪಿಸಿ. ಶುಭ ಸಂಖ್ಯೆ–3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಹಿಂದೆ ನಡೆದ ಅಪ್ರಿಯ ಘಟನೆಗಳನ್ನು ಮರೆತು ಮುಂದೆ ಸಾಗಬೇಕಿದೆ. ಧನ ಮತ್ತು ಯಶ ಪ್ರಾಪ್ತಿಯಿಂದ ಸಂತಸದ ಸಮಯ. ಸರ್ಕಾರಿ ನೌಕರರಿಗೆ ವರಿಷ್ಠರ ಕೃಪೆ ದೊರೆಯಲಿದೆ. ಕೈಗೆತ್ತಿಕೊಂಡ ಕೆಲಸಗಳಲ್ಲಿ ಪ್ರಗತಿ ಕಂಡು ಬರುತ್ತದೆ. ಆರ್ಥಿಕ ಸಮಸ್ಯೆಗಳು ಬಗೆಹರಿಯುವ ಸೂಚನೆಗಳಿವೆ. ಸೋದರ ಸಂಬಂಧಿಗಳ ಸಹಕಾರದಿಂದ ಆಸ್ತಿ ವಿಚಾರಗಳು ಸುಖಾಂತ್ಯವಾಗಲಿದೆ.

ಶ್ರೀ ನಾರಾಯಣನಾಮ ಸ್ತುತಿ. ಶುಭ ಸಂಖ್ಯೆ–6.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಿರುದ್ಯೋಗಿಗಳಿಗೆ ತಮ್ಮ ಸುದೀರ್ಘ ಪರಿಶ್ರಮದ ಫಲವಾಗಿ ನೌಕರಿ ದೊರೆಯುವ ಸಾಧ್ಯತೆ ಇದೆ. ವಿವಾಹ ಸಂಬಂಧಿ ಮಾತುಕತೆಗಳು ಫಲಪ್ರದವಾಗುವುದು. ವ್ಯಾಪಾರ–ವೃತ್ತಿಗಳಲ್ಲಿ ನಿರೀಕ್ಷಿತ ಲಾಭ ದೊರೆಯುತ್ತದೆ. ಗಣ್ಯ ವ್ಯಕ್ತಿಗಳಿಂದ ಅಪರೂಪದ ಆಹ್ವಾನ ದೊರೆಯಲಿದೆ. ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಉಂಟಾಗಿದ್ದ ಅಮಾನತು ಇತ್ಯಾದಿ ಸಮಸ್ಯೆಗಳು ನಿವಾರಣೆ ಆಗುವುದು.

ಶ್ರೀ ದತ್ತಾತ್ರೇಯ ಪೂಜೆ. ಶುಭ ಸಂಖ್ಯೆ–2.

ಗುಂಪು ಘರ್ಷಣೆ ನಡೆದಿದ್ದ ಹಲ್ಲರೆ ಗ್ರಾಮಕ್ಕೆ ಶಾಸಕದ್ವಯರ ಭೇಟಿ



ಹಲ್ಲರೆ ಗ್ರಾಮಕ್ಕೆ ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ ಭೇಟಿ ನೀಡಿ ಸಾಂತ್ವನ ಹೇಳಿದರು.

ನಂಜನಗೂಡು/ಮಲ್ಲುಂಡಿ, ಫೆ.3– ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಅಂಬೇಡ್ಕರ್ ನಾಮಫಲಕದ ವಿಚಾರವಾಗಿ ನಡೆದ ಗುಂಪು ಘರ್ಷಣೆ ಹಿನ್ನೆಲೆಯಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು ಹಾಗೂ ದರ್ಶನ್ ಧ್ರುವನಾರಾಯಣ್ ಶನಿವಾರ ಗ್ರಾಮಕ್ಕೆ ಭೇಟಿ ನೀಡಿ ತೊಂದರೆಗೊಳಗಾದ ಎರಡೂ ಸಮಾಜಗಳ ಜನರಿಗೆ ಸಾಂತ್ವನ ಹೇಳಿದರು.

ಶಾಸಕದ್ವಯರು ಪರಿಶಿಷ್ಟ ಜಾತಿ ಹಾಗೂ ಪಂಗಡದ ಬಡಾವಣೆಗಳಿಗೆ ಭೇಟಿ ನೀಡಿ, ಗಲಭೆಯಿಂದ ಹಾನಿಗೊಳಗಾದ ಮನೆ ಹಾಗೂ ವಾಹನಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು. ಅಲ್ಲದೇ ಎರಡೂ ಸಮಾಜಗಳ ಕುಟುಂಬದ ಪುರುಷರು ಜೈಲಿನಲ್ಲಿರುವುದರಿಂದ 1 ತಿಂಗಳಿಗೆ ಆಗುವಷ್ಟು ಆಹಾರ ಪದಾರ್ಥಗಳನ್ನು ತಾಲೂಕು ಆಡಳಿತದಿಂದ ವಿತರಿಸುವಂತೆ ತಹಸೀಲ್ದಾರ್‌ಗೆ ಸೂಚನೆ ನೀಡಲಾಗಿದ್ದು, ಈ ಸೋಮವಾರ ವಿತರಣೆ ಆಗಲಿದೆ ಎಂದರು. ನಂತರ ಗ್ರಾಪಂ ಕಚೇರಿಯಲ್ಲಿ ಎರಡೂ ಸಮಾಜಗಳ ಮುಖಂಡರ ಸಭೆ ನಡೆಸಿ, ಗ್ರಾಮದಲ್ಲಿ ನಡೆದ ಘರ್ಷಣೆ ಸಂಬಂಧ ಮಾಹಿತಿ ಪಡೆದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಗ್ರಾಮದಲ್ಲಿ ಈ ಹಿಂದೆ ಎರಡು ಸಮಾಜಗಳು ಸೌಹಾರ್ದಯುತವಾಗಿ ಬಾಳ್ವೆ ನಡೆಸುತ್ತಿದ್ದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನ ಸಂವಿಧಾನದ 2 ಕಣ್ಣುಗಳಿದ್ದಂತೆ. ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದ ಚೌಕಟ್ಟಿನಲ್ಲಿ ಎಲ್ಲರಿಗೂ ಸಮಾನವಾಗಿ ಬದುಕುವ ಅವಕಾಶ ಕಲ್ಪಿಸಿದ್ದಾರೆ. ಗ್ರಾಪಂನಿಂದ ಪ್ರಧಾನಮಂತ್ರಿ ಕಚೇರಿವರೆಗೂ ಅಂಬೇಡ್ಕರ್ ಭಾವಚಿತ್ರ ಅಳವಡಿಸಿರುತ್ತಾರೆ. ಅಂತಹ ಮಹನೀಯರ ನಾಮಫಲಕ ಅಳವಡಿಸಬಾರದೆಂದು ಕೆಲವು ಕಿಡಿಗೇಡಿಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇಂತಹ ಘಟನೆಗೆ ಕಾರಣರಾಗಿದ್ದಾರೆ ಎಂದು ಆರೋಪಿಸಿದರು.

ತಪ್ಪು ಮಾಡಿರುವವರು ಎಷ್ಟೆ ಪ್ರಭಾವಿಗಳಾದರೂ ಶಿಕ್ಷೆ ಕೊಡಿಸುತ್ತೇವೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಹೆಚ್ಚಿನ ಗಮನ ಹರಿಸಲಾಗುವುದು. ಎರಡೂ ಸಮಾಜಗಳ ಜನರು ನ್ಯಾಯಾಲಯದಿಂದ ಜಾಮೀನು ಪಡೆಯಲು ಸಹಕಾರ ನೀಡಲಾಗುವುದು. ನಂತರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಅಧ್ಯಕ್ಷತೆಯಲ್ಲಿ ಶಾಂತಿ ಸಭೆ ನಡೆಸಿ, ಸೌಹಾರ್ದಯುತವಾಗಿ ಪ್ರಕರಣಕ್ಕೆ ತೆರೆ ಎಳೆಯಲಾಗುವುದು ಎಂದರು.

ಶಾಸಕ ದರ್ಶನ್ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡೂ ಕಡೆಯವರ ಮೇಲೆ ಮೊಕದ್ದಮೆ ದಾಖಲಾಗಿದೆ. ಗಲಭೆ ನಡೆದ ನಂತರ ಗ್ರಾಮಕ್ಕೆ ಭೇಟಿ ನೀಡಿ, ಜನರಿಗೆ ಸಾಂತ್ವನ ಹೇಳಿದ್ದೇನೆ. ಗಲಾಟೆಯಿಂದ ಪ್ರಾಣಾಪಾಯ ಸಂಭವಿಸಿಲ್ಲ ಸಣ್ಣಪುಟ್ಟ ಗಾಯಗಳಾಗಿವೆ. ಒಬ್ಬರಿಗೆ ಕಾಲಿಗೆ ಪೆಟ್ಟಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಫಿಜಿಯೋ ತೆರಪಿ ಚಿಕಿತ್ಸೆ ನೀಡಲು ಸೂಚಿಸಲಾಗಿದೆ. ಗ್ರಾಮದಲ್ಲಿ ಮತ್ತೆ ಅಹಿತಕರ ಘಟನೆಗಳು ನಡೆಯದಂತೆ ಕ್ರಮವಹಿಸಲಾಗಿದೆ ಎಂದರು.

ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕಾಂಗ್ರೆಸ್ ಮುಖಂಡ ಹೆಚ್.ಸಿ.ಬಸವರಾಜು, ದಸಂಸ ರಾಜ್ಯ ಸಂಚಾಲಕ ಬೆಟ್ಟಯ್ಯ ಕೋಟೆ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಮುಖಂಡರಾದ ದೊರೆಸ್ವಾಮಿ ನಾಯಕ, ಬಂಗಾರು ನಾಯಕ, ಹೆಡತಲೆ ನಾಗರಾಜು, ಮಹೇಶ್, ವಕೀಲ ನಾಗರಾಜಯ್ಯ, ಶಿವಕುಮಾರ್, ದೇವರಾಜ, ಅರುಣ್ ಕುಮಾರ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಜಿಪಂ ಕಾರ್ಯದರ್ಶಿ ಕೃಷ್ಣರಾಜು, ತಾಪಂ ಇಓ ಜೆರಾಲ್ಡ್ ರಾಜೇಶ್, ಡಿವೈಎಸ್‌ಪಿ ರಘು ಸೇರಿದಂತೆ ಹಲವರಿದ್ದರು.

ಸಂವಿಧಾನ ಜಾಗೃತಿ ರಥಕ್ಕೆ ಅದ್ದೂರಿ ಸ್ವಾಗತ



ಚಪ್ಪರದಹಳ್ಳಿ ಗ್ರಾಮಕ್ಕೆ ಶನಿವಾರ ಆಗಮಿಸಿದ ಸಂವಿಧಾನ ಜಾಗೃತಿ ರಥಕ್ಕೆ ಅದ್ದೂರಿ ಸ್ವಾಗತ ಕೋರಲಾಯಿತು.

ಬೆಟ್ಟದಪುರ, ಫೆ.3– ಸಂವಿಧಾನ ದಿನಾಚರಣೆ ಹಿನ್ನೆಲೆಯಲ್ಲಿ ಚಪ್ಪರದಹಳ್ಳಿ ಗ್ರಾಮಕ್ಕೆ ಶನಿವಾರ ಆಗಮಿಸಿದ ಸಂವಿಧಾನ ಜಾಗೃತಿ ರಥಕ್ಕೆ ಅದ್ದೂರಿ ಸ್ವಾಗತ ಕೋರಲಾಯಿತು.

ಇಲ್ಲಿನ ಗ್ರಾಪಂ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಹಾಗೂ ಸಂವಿಧಾನ ಪೀಠಿಕೆಯ ಭಾವಚಿತ್ರಕ್ಕೆ ಗಣ್ಯರು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಬಳಿಕ ಎಲ್ಲರಿಗೂ ಸಂವಿಧಾನ ಪೀಠಿಕೆ ಬೋಧಿಸಲಾಯಿತು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಶಶಿಕಲಾ, ಸದಸ್ಯ ಸಿ.ಪಿ.ಸುರೇಶ, ವೈದ್ಯಾಧಿಕಾರಿ ಡಾ.ಸಂದೀಪ್, ಪಿಡಿಓ ಶ್ರೀದೇವಿ, ಗ್ರಾಮ ಆಡಳಿತಾಧಿಕಾರಿ ಪ್ರದೀಪ್, ಕಾರ್ಯದರ್ಶಿ ಕುಮಾರ್, ಎಫ್‌ಡಿಎ ಮಂಜುನಾಥ್, ಬಿಲ್ ಕಲೆಕ್ಟರ್ ರಮಣಯ್ಯ, ಮುಖ್ಯಶಿಕ್ಷಕ ಶಿವಾನಂದ ಸೇರಿದಂತೆ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಮುಖಂಡರು ಇದ್ದರು.

ಇಂದು ತಿ.ನರಸೀಪುರ ಟಿಎಪಿಸಿಎಂಎಸ್ ಚುನಾವಣೆ

ವಿವಿಧ ಪಕ್ಷಗಳ ಬೆಂಬಲಿತರಿಂದ ಉಮೇದುವಾರಿಕೆ ಸಲ್ಲಿಕೆ

ತಿ.ನರಸೀಪುರ, ಫೆ.3– ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಭಾನುವಾರ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ವಿವಿಧ ಪಕ್ಷಗಳ ಬೆಂಬಲಿತ ಅಭ್ಯರ್ಥಿಗಳು ಶನಿವಾರ ನಾಮಪತ್ರ ಸಲ್ಲಿಸಿದರು.

ಪಟ್ಟಣದ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಕಚೇರಿಯಲ್ಲಿ ಸಹಾಯಕ ಚುನಾವಣಾಧಿಕಾರಿ ರಾಜು ಅವರಿಗೆ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದರು. ಕಳೆದ 3 ದಿನಗಳಿಂದ ನಾಮಪತ್ರ ಸಲ್ಲಿಕೆಗೆ ಅವಕಾಶ ಮಾಡಿಕೊಡಲಾಗಿತ್ತು ಅಂತಿಮವಾಗಿ ಒಟ್ಟು 36 ನಾಮಪತ್ರಗಳು ಸಲ್ಲಿಕೆಯಾದವು.

'ಎ' ತರಗತಿಯಿಂದ 4 ಹಾಗೂ 'ಬಿ' ತರಗತಿಯಿಂದ 8 ನಿರ್ದೇಶಕರ ಸ್ಥಾನಗಳಿಗೆ ನಿರ್ದೇಶಕರ ಆಯ್ಕೆ ನಡೆಯಬೇಕಿದ್ದು, ಈ ಪೈಕಿ ಸಾಮಾನ್ಯ ವರ್ಗಕ್ಕೆ 2, ಸಾಮಾನ್ಯ ಮಹಿಳಾ ವರ್ಗಕ್ಕೆ 2, ಹಿಂದುಳಿದ ವರ್ಗ 'ಎ' ಮತ್ತು 'ಬಿ'ಗೆ ತಲಾ ಒಂದು ಸ್ಥಾನ, ಪ.ಜಾತಿ ಮತ್ತು ವರ್ಗಕ್ಕೆ ತಲಾ ಒಂದೊಂದು ಸ್ಥಾನ ಮೀಸಲಿರಿಸಲಾಗಿದೆ.

'ಎ' ತರಗತಿಯಿಂದ ಟಿ.ವಾಸುದೇವ್, ಎಂ.ಚಂದ್ರಶೇಖರ್, ಮಲ್ಲಣ್ಣ ಬಿ.ಎನ್. ಮಹೇಶ್, ಹೊನ್ನನಾಯಕ, ವೈ.ಎನ್. ಶಂಕರೇಗೌಡ, ಎಸ್.ಮಹದೇವಪ್ಪ ಹಾಗೂ ಷಡಕ್ಷರಿ ನಾಮಪತ್ರ ಸಲ್ಲಿಸಿದರೇ, 'ಬಿ' ತರಗತಿಯಿಂದ ಬಿ.ಎಂ.ಶಾಂತರಾಜು, ಬೆಗು.ಶಿವಸ್ವಾಮಿ, ಸಿ.ಮಹದೇವ, ರಾಮಸ್ವಾಮಿ, ಡಿ.ಕೋಮಲ, ಎಂ.ಎಸ್.ಬಸವರಾಜು, ಸಿ.ನಾಗಪ್ಪ, ಎಂ.ಎನ್.ಸೋಮಣ್ಣ, ಕೆ.ಎನ್.ಸುನೀಲ್, ಎಂ.ಎಂ.ಸೋಮಣ್ಣ, ಟಿ.ಪಿ.ಸುಬ್ರಹ್ಮಣ್ಯ, ಸೋಮಣ್ಣ ಎಂ.ಕೆಮಹೇಶ್, ಬಿ.ಶಿವಸ್ವಾಮಿ, ಸುಮ, ಎಸ್.ನಿರ್ಮಲ, ವೀರೇಂದ್ರ, ದಿನೇಶ್ ಕುಮಾರ್, ರೇಖಾ, ಬಿ.ವೀರಭದ್ರಪ್ಪ, ಮರಿಗೌಡ, ಕೆ.ಎಂ.ಜಯರಾಮು, ಪಿ.ರಾಧ, ಲಕ್ಷ್ಮಮ್ಮ, ಹೆಚ್.ಮಹದೇವು, ಎಸ್.ನಾಗರಾಜು ಹಾಗೂ ಸಿದ್ದರಾಮು ನಾಮಪತ್ರ ಸಲ್ಲಿಸಿದ್ದಾರೆ.

ಯಾರಿಗೆ ಅಧಿಕಾರ?: ಈ ಬಾರಿ ಕಾಂಗ್ರೆಸ್ ವ್ಯವಸಾಯೋತ್ಪನ್ನ ಸಮಿತಿಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಕಾರ್ಯತಂತ್ರ ರೂಪಿಸಿದೆ ಹಾಲಿ ಅಧ್ಯಕ್ಷ ಸುಬ್ರಹ್ಮಣ್ಯ ಕಾರ್ಯ ನಿರ್ವಹಿಸುತ್ತಿದ್ದು, ಶತಾಯ ಗತಾಯ ಅವರನ್ನು ಕೆಳಗಿಳಿಸಿ ಕಾಂಗ್ರೆಸ್ ಪಕ್ಷ ತನ್ನ ಅಧಿಕಾರ ಸ್ಥಾಪಿಸಲು ಹೊರಟಿದೆ. ಇದಕ್ಕಾಗಿ ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ಇನ್ನಿಲ್ಲದ ಪ್ರಯತ್ನ ನಡೆಸಿದ್ದಾರೆ. ಕಳೆದ 10 ವರ್ಷಗಳಿಂದ ಆಡಳಿತವನ್ನು ತನ್ನ ಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿರುವ ಸುಬ್ರಹ್ಮಣ್ಯರವರು ಶಂಕರೇಗೌಡರ ರಾಜಕೀಯ ನೈಪುಣತೆಗೆ ತಮ್ಮ ಸ್ಥಾನ ಬಿಟ್ಟುಕೊಡಲಿದ್ದಾರೆಯೇ ಎಂಬುದನ್ನು ಕಾದು ನೋಡಬೇಕಿದೆ.

ಮಾಜಿ ಶಾಸಕರಿಗೆ ಸೂಕ್ತ ಸ್ಥಾನಮಾನ ನೀಡಲು ಮನವಿ



ಸುದ್ದಿಗೋಷ್ಠಿಯಲ್ಲಿ ಕುರುಬರ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ಮಾತನಾಡಿದರು.

ಹುಣಸೂರು, ಫೆ.3– ಮೂರು ಬಾರಿ ಶಾಸಕರಾಗಿ ಅನೇಕ ಜನಪರ ಹಾಗೂ ರೈತಪರ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸಿ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿರುವ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕು ಎಂದು ತಾಲೂಕಿನ ಕುರುಬ ಸಮಾಜದ ಮುಖಂಡರು ಕಾಂಗ್ರೆಸ್ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ಮಾತನಾಡಿ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಾಲೂಕಿನ ಕೃಷಿ, ನೀರಾವರಿ, ಆರೋಗ್ಯ, ಶಿಕ್ಷಣ, ಪಂಚಾಯತ್ ರಾಜ್ ಇಲಾಖೆಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಅಭಿವೃದ್ಧಿ ಮಾಡಿದ್ದಾರೆ. ಕಳೆದ ಚುನಾವಣೆಯಲ್ಲಿ ಅತೀ ಕಡಿಮೆ ಅಂತರದಲ್ಲಿ ಸೋತಿದ್ದಾರೆ. ಹೀಗಾಗಿ ಹುಣಸೂರಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಲು ಹಾಗೂ ಮುಂಬರುವ ಲೋಕಸಭಾ ಚುನಾವಣಾ ತಯಾರಿಗಾಗಿ ಹೆಚ್.ಪಿ.ಮಂಜುನಾಥ್ ಅವರಿಗೆ ವಿಧಾನ ಪರಿಷತ್ ಅಥವಾ ನಿಗಮ ಮಂಡಳಿಯಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಲ್ಲಿ ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕುರುಬ ಸಮಾಜದ ಹಿರಿಯ ಮುಖಂಡರು ಹಾಗೂ ತಂಬಾಕು ಮಂಡಳಿ ಮಾಜಿ ಸದಸ್ಯ ಬಿ.ಎನ್. ಜಯರಾಮ್, ಕುರುಬ ಸಂಘದ ಉಪಾಧ್ಯಕ್ಷರಾದ ಮಹೇಶ್, ಮಹದೇವ್, ನಿರ್ದೇಶಕ ಕಾಯಿ ಶೇಖರ್, ಯುವ ಮುಖಂಡ ರಾಘು ಸೇರಿದಂತೆ ಇತರರಿದ್ದರು.

ರಾಜ್ಯದ ಜಲಾಶಯಗಳಿಗೆ ಭದ್ರತೆ ಒದಗಿಸಿ

ಪ್ರಗತಿಪರ ಸಂಘಟನೆ ಮುಖಂಡ ಗ್ರಾಮೀಣ ಮಹೇಶ್ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಸಂಘಟನೆ ಮುಖಂಡ ಮಹೇಶ್ ಮಾತನಾಡಿದರು

ಹೆಚ್.ಡಿ.ಕೋಟೆ, ಫೆ.3– ರಾಜ್ಯದ ಜಲಾಶಯಗಳಿಗೆ ನೀಡಿದ ಕೆಎಸ್‌ಐಎಸ್‌ಎಫ್ ಭದ್ರತೆ ಪಡೆಯನ್ನು ಸರ್ಕಾರ ವಾಪಸ್ ಪಡೆದಿರುವುದು ಸರಿಯಲ್ಲ. ಜಲಾಶಯಗಳ ಭದ್ರತಾ ದೃಷ್ಟಿಯಿಂದ ಮುಂದುವರಿಸಬೇಕು ಎಂದು ಪ್ರಗತಿಪರ ಸಂಘಟನೆ ಮುಖಂಡ ಗ್ರಾಮೀಣ ಮಹೇಶ್ ಒತ್ತಾಯಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಆರ್‌ಎಸ್, ಕಬಿನಿ ಸೇರಿದಂತೆ ಇನ್ನಿತರ ಜಲಾಶಯಗಳಿಗೆ ಈ ಹಿಂದೆ ಎಲ್‌ಟಿಟಿಇ ಉಗ್ರ ಸಂಘಟನೆಯು ಬಾಂಬ್ ಹಾಕುವುದಾಗಿ ಬೆದರಿಕೆ ಹಾಕಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ರಾಜ್ಯದ ಎಲ್ಲಾ ಜಲಾಶಯಗಳಿಗೂ ಕೆಎಸ್‌ಐಎಸ್‌ಎಫ್ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಆದರೆ ಇತ್ತೀಚೆಗೆ ಸ್ಥಳೀಯ ಶಾಸಕರ ಗಮನಕ್ಕೂ ತರದೆ ಏಕಾಏಕಿ ಜಲಾಶಯಗಳಿಗೆ ಒದಗಿಸಿದ್ದ ಭದ್ರತೆ ಹಿಂಪಡೆಯಲಾಗಿದೆ. ಇದರಿಂದ ಜಲಾಶಯಗಳಿಗೆ ಭದ್ರತೆ ಇಲ್ಲವಾಗಿದ್ದು, ಜನರ ಆತಂಕಕ್ಕೆ ಕಾರಣವಾಗಿದೆ. ಹಾಗಾಗಿ ಸರ್ಕಾರ ಈ ನಿರ್ಧಾರದಿಂದ ಹಿಂದೆ ಸರಿದು ಜಲಾಶಯಗಳಿಗೆ ಭದ್ರತೆ ನೀಡಬೇಕು ಎಂದು ಒತ್ತಾಯಿಸಿದರು. ಇದೇ ಸಂದರ್ಭ ರೈತ ಹೋರಾಟಗಾರ ಹೊ.ಕೆ.ಮಹೇಂದ್ರ, ವಕೀಲ ಚೌಡಳ್ಳಿ ಜವರಯ್ಯ, ಸರಗೂರು ಕಸಾಪ ಅಧ್ಯಕ್ಷ ಕೆಂಡಸ್ವಾಮಿ, ಮುಖಂಡ ಈವನ್ ರಾಜ್, ಅನೂಪ್ ಇದ್ದರು.

ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಬೇಕು: ಎಂಎಲ್‌ಸಿ ಮಂಜೇಗೌಡ



ನಂಜನಗೂಡು, ಫೆ.3– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ಸ್ವಾವಲಂಬಿಗಳಾಗಿ ಬದುಕಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಆಶ್ರಯ ಸಹಕಾರ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಗ್ರಾಮೀಣ ಹೆಣ್ಣು ಮಕ್ಕಳ ಹೈನುಗಾರಿಕೆಗೆ ಬಡ್ಡಿ ಇಲ್ಲದೆ ಸಾಲ ನೀಡಬೇಕು ಹಾಗೂ ಮಹಿಳೆಯರೇ ಪ್ರಧಾನವಾಗಿರುವ ಸಹಕಾರ ಸಂಘಗಳಿಗೆ ಶೂನ್ಯ ಬಡ್ಡಿ ದರದಲ್ಲಿ 10 ಲಕ್ಷದವರೆಗೆ ಸಾಲ ನೀಡಬೇಕು. ಮಹಿಳೆಯರು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ತಾಯಂದಿರಿಗೆ ಕೊಡುವ ಹಣ ಸದುಪಯೋಗವಾಗುತ್ತದೆ ಎಂಬ ನಂಬಿಕೆ ಸರ್ಕಾರಕ್ಕಿದೆ. ಆದ್ದರಿಂದ ಮಹಿಳೆಯರಿಗೆ ಹೆಚ್ಚು ಯೋಜನೆಗಳನ್ನು ನೀಡುತ್ತಿದ್ದಾರೆ ಎಂದ ಅವರು ಮಹಿಳೆಯರಿಗೆ ಕಾನೂನಿನ ಅರಿವು ಇರಬೇಕು. ಇಂದು ಕಾನೂನು ಪಾಲಿಸುವರು ಕಡಿಮೆಯಾಗಿದ್ದಾರೆ. ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ. ಸಂಘದ ವತಿಯಿಂದ ಅರಿವು ಕಾರ್ಯಾಗಾರ, ಆರೋಗ್ಯ ತಪಾಸಣಾ ಶಿಬಿರ, ಜಾಗೃತಿ ಶಿಬಿರಗಳನ್ನು ಆಯೋಜಿಸಿ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್, ಆಶ್ರಯ ಸಹಕಾರ ಸಂಘದ ಸುಮತಿ ಆರ್., ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ನಿವೃತ್ತ ಉಪ ನಿರ್ದೇಶಕಿ ರಾಧಾ ಇದ್ದರು.



ಬೆಟ್ಟದಪುರ ಸಮೀಪದ ಭುವನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಿಂದ ಕೊಣಸೂರು ಗ್ರಾಮದ ಕೆ.ಸಿ.ಮಹೇಶ್ ಅವರು 240 ಮತ ಪಡೆದು ಜಯಗಳಿಸಿದ್ದಾರೆ. ಇವರ ಗೆಲುವಿಗೆ ಸಚಿವ ವೆಂಕಟೇಶ್, ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ಗ್ರಾಪಂ ಅಧ್ಯಕ್ಷ ಪಿ.ದೇವರಾಜು, ಸದಸ್ಯರಾದ ಮಂಜುನಾಥ್, ಸಂಘದ ಮಾಜಿ ಅಧ್ಯಕ್ಷ ಮಲ್ಲೇಶ್ ಮಾಜಿ ಜಿಪಂ ಸದಸ್ಯ ಕೆ.ಸಿ.ರಾಜಶೇಖರಯ್ಯ ಸೇರಿದಂತೆ ಹಲವರು ಅಭಿನಂದನೆ ಸಲ್ಲಿಸಿದ್ದಾರೆ.

ಬಾಲ ಕಾರ್ಮಿಕ ಪದ್ಧತಿ ತೊಲಗಿಸುವಲ್ಲಿ ವಿದ್ಯಾರ್ಥಿಗಳ ಪಾತ್ರ ಪ್ರಮುಖ

ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ್

ಹುಣಸೂರು, ಫೆ.3– ಬಾಲ ಕಾರ್ಮಿಕ ಪದ್ಧತಿ ತೊಲಗಿಸುವಲ್ಲಿ ಸಾರ್ವಜನಿಕರಷ್ಟೆ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿದ್ದು, ತಮ್ಮ ಸಹಪಾಠಿಗಳು ಶಾಲೆ ಬಿಟ್ಟು ಬೇರೆಡೆ ಕೆಲಸ ಮಾಡುತ್ತಿದ್ದಲ್ಲಿ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಿ ತಿಳಿಸುವಂತೆ ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ್ ತಿಳಿಸಿದರು.

ನಗರದ ಚಿಕ್ಕಹುಣಸೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ನಗರಸಭೆ ಸಂಯುಕ್ತಾಶ್ರಯದಲ್ಲಿ ಕಿಶೋರ ಕಾರ್ಮಿಕ ಕಾಯ್ದೆ ಹಾಗೂ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ ಕುರಿತ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣವೇ ಶಕ್ತಿ, ಶಿಕ್ಷಣವೇ ಆಸ್ತಿ ಎಂದು ಅಂಬೇಡ್ಕರರು ಪ್ರತಿಪಾದಿಸಿದ್ದಾರೆ. ಆದರೆ ಬಡವರ ಮಕ್ಕಳು ಶಾಲೆಗೆ ಬರಬೇಕಾದವರು ಹೋಟೆಲ್, ಗ್ಯಾರೇಜ್, ಕೂಲಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಕಾರ್ಮಿಕ ಕಾಯ್ದೆಗೆ ವಿರೋಧವಾಗಿದೆ. ಅವರ ಭವಿಷ್ಯದ ದೃಷ್ಟಿಯಿಂದ ಮನವೊಲಿಸಿ ಶಾಲೆಗೆ ಕರೆ ತರುವ ಪುಣ್ಯದ ಕೆಲಸ ಮಾಡಿ, ಅಲ್ಲದೆ ಮಕ್ಕಳ ಸಹಾಯವಾಣಿ 1098ಕ್ಕೆ ಮಾಹಿತಿ ನೀಡಿದಲ್ಲಿ ನಿಮ್ಮ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದರು.

ತಾಲೂಕು ಮಹಿಳಾ ಸಂರಕ್ಷಣಾಧಿಕಾರಿ ಜಯಂತಿ, ನಗರಸಭೆ ಆಯುಕ್ತೆ ಶರ್ಮಿಳಾ, ವಕೀಲರ ಸಂಘದ ಅಧ್ಯಕ್ಷ ಶಿವಣ್ಣೇಗೌಡ, ಕಾರ್ಯದರ್ಶಿ ಸಂದೀಪ್, ಮುಖ್ಯಶಿಕ್ಷಕ ಧನಂಜಯ್, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಹರೀಶ್ ಮಾತನಾಡಿದರು. ತಾಲೂಕು ಕಾರ್ಮಿಕ ನಿರೀಕ್ಷಕ ಟಿ.ವಿ.ಲಕ್ಷ್ಮೀಶ, ನಗರಸಭೆ ಹಿರಿಯ ಆರೋಗ್ಯಾಧಿಕಾರಿ ಸತೀಶ್, ಸಮೃದ್ಧಿ ಸೇವಾ ಟ್ರಸ್ಟ್ ಅಧ್ಯಕ್ಷೆ ಸವಿತಾ, ಎಸ್‌ಡಿಎಂಸಿ ಅಧ್ಯಕ್ಷೆ ಶಕುಂತಲ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಜ್ಯ, ನೆರೆ ರಾಜ್ಯಗಳಲ್ಲೂ ಸುತ್ತೂರು ಜಾತ್ರೆ ಪ್ರಸಿದ್ಧಿ

ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ



ತಿ.ನರಸೀಪುರದಲ್ಲಿ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ಸ್ವಾಗತ ಕೋರಲಾಯಿತು.

ತಿ.ನರಸೀಪುರ, ಫೆ.3– ರಾಜ್ಯ ಮಾತ್ರವಲ್ಲದೆ, ನೆರೆ ರಾಜ್ಯಗಳಲ್ಲೂ ಸುತ್ತೂರು ಜಾತ್ರಾ ಮಹೋತ್ಸವ ಪ್ರಸಿದ್ಧಿ ಪಡೆದಿದೆ ಎಂದು ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಸಭಾ ಭವನದ ಬಳಿ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥ ಸ್ವಾಗತಿಸಿ, ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಸುತ್ತೂರು ಜಾತ್ರೆಗೆ ಯಾವುದೇ ಪ್ರಚಾರ ಬೇಕಿಲ್ಲ. ಆದರೆ ರಾಜೇಂದ್ರ ಶ್ರೀಗಳು ಜಾತ್ರೆಗೆ ಬರಲಾಗದ ಗ್ರಾಮೀಣ ಜನರು, ಮಕ್ಕಳಿಗೆ ಶ್ರೀಶಿವರಾತ್ರೀಶ್ವರರ ದರ್ಶನ ದೊರಕಿಸುವ ಉದ್ದೇಶದಿಂದ ರಥಯಾತ್ರೆ ಪ್ರಾರಂಭಿಸಿದರು. ಇದೀಗ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ಕೂಡ ಅದನ್ನು ಮುಂದುವರೆಸಿದ್ದಾರೆ. ಈ ರಥ ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸಿ ಶಿವರಾತ್ರೀಶ್ವರರ ದರ್ಶನ ನೀಡಲಿದೆ. ಜಾತಿ, ಮತ, ಬೇಧವಿಲ್ಲದೇ ಸರ್ವ ಸಮುದಾಯಗಳು ಪಾಲ್ಗೊಳ್ಳುವ ಜಾತ್ರೆ ಇದಾಗಿದೆ ಎಂದರು.

ಇಂದು ರಥವು ವಾಟಾಳು ಮಠದಲ್ಲಿ ಉಳಿಯಲಿದ್ದು, ನಾಳೆ ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸಲಿದೆ ಎಂದರು.

ಈ ವೇಳೆ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಡಾ.ಮಾದೇಶ್, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಹೋಟೆಲ್ ರಾಜಣ್ಣ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ತೋಂಟೇಶ್, ಸಾಲೂರು ಸ್ವಾಮಿ, ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ, ನಾಗೇಶ್, ಫ್ಯಾನ್ಸಿ ಮೋಹನ್, ವಕೀಲ ಜ್ಞಾನೇಂದ್ರ ಮೂರ್ತಿ, ಜಿ.ಎಲ್.ಉಮೇಶ್, ಹೆಳವರಹುಂಡಿ ಮೂರ್ತಿ, ಹಲಸಳ್ಳಿ ಮಹದೇವಸ್ವಾಮಿ, ಎಸ್‌ಎಂಆರ್ ಪ್ರಕಾಶ್, ಪಿ.ಸ್ವಾಮಿನಾಥಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಎ.ಜಿ.ವೆಂಕಟೇಶ್, ಗೊಬ್ಬರದ ಅಂಗಡಿ ರಾಜೇಶ್, ಜಿ.ಎಲ್.ಯೋಗೇಶ್, ಎನ್.ಲೋಕೇಶ್, ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಷಣ್ಮುಖ ಸ್ವಾಮಿ, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್ ಗೌಡ, ಬನ್ನಳ್ಳಿ ಶಿವಕುಮಾರ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಯಥಾಭವ (ಕ)	2 ಪ್ರದರ್ಶನಗಳು
ಅಯಲಾನ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬ್ಯಾಚ್ಯುಲರ್ ಪಾರ್ಟಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಡಕ್ಕುಪಟ್ಟಿ ರಾಮಸ್ವಾಮಿ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಫೈಟರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಂಕರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ನೋ ಶೋ
ಸ್ಕ್ರೀನ್ 2	ಕ್ರಷ್ (ಕ): ಬೆ.10.30ಕ್ಕೆ, ಬ್ಯಾಚುಲರ್ ಪಾರ್ಟಿ (ಕ): ಮ.1.05ಕ್ಕೆ, ಕಾಟೇರ (ಕ): ಮ.3.55ಕ್ಕೆ, ನೆಕ್ಸ್ಟ್ ಗೋಲ್ ವಿನ್ಸ್ (ಇಂ): ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಹನುಮಾನ್ (ಕ): ಬೆ.9.55ಕ್ಕೆ, ಫೈಟರ್ (ಹಿಂ): ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ. ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥಲ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಾಡಾನೆ ತುಳಿದು ವ್ಯಕ್ತಿ ಸಾವು

ಹುಣಸೂರು, ಫೆ.3– ಕಾಡಾನೆ ತುಳಿದು ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಮುದಗನೂರು ಗ್ರಾಮದಲ್ಲಿ ಶನಿವಾರ ನಡೆದಿದೆ.

ಗ್ರಾಮದ ನಿವಾಸಿ ಚೆಲುವಯ್ಯ(70) ಸಾವನ್ನಪ್ಪಿದವರು. ಇಂದು ಬೆಳಗ್ಗೆ ಇಲ್ಲಿನ ಕೊಳವಿಗೆ ಅರಣ್ಯ ಇಲಾಖೆ ವಸತಿ ಗೃಹದ ಬಳಿ ಕಾಣಿಸಿಕೊಂಡ ಕಾಡಾನೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು, ಗ್ರಾಮ ಸ್ಥರು ಅರಣ್ಯದೊಳಗೆ ಪ್ರಯತ್ನಿಸುತ್ತಿದ್ದರು. ಆದರೆ ಕಾಡಾನೆ ರೈಲ್ವೆ ಬ್ಯಾರಿಕೇಡ್ ದಾಟಿ ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್ ಅವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಚೆಲುವಯ್ಯ ಅವರ ಮೇಲೆ ಏಕಾಏಕಿ ದಾಳಿ ಮಾಡಿದೆ. ಈ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳು ಕೂಗಿಕೊಂಡರೂ ಕಾಡಾನೆ ಚೆಲುವಯ್ಯ ಅವರನ್ನು ತುಳಿದು ಹಾಕಿ ಪರಾರಿಯಾಗಿದೆ.

ಪ್ರತಿಭಟನೆ: ವಿಷಯ ತಿಳಿದು ಸ್ಥಳದಲ್ಲಿ ಜಮಾಯಿಸಿದ ಮುದಗನೂರು ಗ್ರಾಮಸ್ಥರು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಅರಣ್ಯ ಇಲಾಖೆ ಸಚಿವರು ಸ್ಥಳಕ್ಕಾಗಮಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಆಗಾಗ್ಗೆ ಕಾಡು ಪ್ರಾಣಿಗಳು ಉಪಟಳ ನೀಡುತ್ತಿದ್ದು, ಅರಣ್ಯದಂಚಿನ ಗ್ರಾಮಸ್ಥರು ಆತಂಕದಲ್ಲಿ ಜೀವನ ನಡೆಸುವಂತಾಗಿದೆ. ಒಂದೆಡೆ ಹುಲಿ ಕಾಟವಾದರೆ, ಮತ್ತೊಂದೆಡೆ ಆನೆ ದಾಳಿ. ನಿತ್ಯ ನರಕ ಅನುಭವಿಸುವಂತಾಗಿದೆ ಆದ್ದರಿಂದ ಸಚಿವರು ಅಲ್ಲಿವರೆಗೂ ರೈತನ ಶವವನ್ನು ಇಲ್ಲಿಂದ ತೆಗೆದುಕೊಂಡು ಹೋಗುವುದಿಲ್ಲ ಎಂದು ಪಟ್ಟು ಹಿಡಿದರು.

ಸ್ಥಳಕ್ಕೆ ನಾಗರಹೊಳೆ ಹುಲಿ ಯೋಜನೆ ನಿರ್ದೇಶಕ ಹರ್ಷ ಕುಮಾರ್ ಚಿಕ್ಕನರಗುಂದ ಮತ್ತು ಪೊಲೀಸ್ ಇಲಾಖೆ ಹಿರಿಯ ಅಧಿಕಾರಿಗಳು ಪ್ರತಿಭಟನಾಕಾರರ ಮನವೊಲಿಸಲು ಮುಂದಾದರೂ ಪ್ರತಿಭಟನಾಕಾರರು ಅರಣ್ಯ ಇಲಾಖೆ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ಮುಂದುವರೆಸಿದರು.

ಶಾಸಕರಿಂದ ಸಾಂತ್ವನ: ದೂರವಾಣಿ ಕರೆ ಮೂಲಕ ಘಟನೆ ಬಗ್ಗೆ ತಿಳಿದುಕೊಂಡೆ ಆರೋಗ್ಯ ಸಮಸ್ಯೆ ಇದ್ದಿದ್ದರಿಂದ ಸ್ಥಳಕ್ಕೆ ಭೇಟಿ ನೀಡಲು ಸಾಧ್ಯವಾಗಲಿಲ್ಲ ಬದಲಿಗೆ ತಾಲೂಕಿನ ಹಿರಿಯ ಅಧಿಕಾರಿಗಳನ್ನು ಕಳುಹಿಸಿ, ವೈಯಕ್ತಿಕ ಪರಿಹಾರ ನೀಡಿ ಸಾಂತ್ವನ ಹೇಳುವಂತೆ ತಿಳಿಸಿದ್ದೇನೆ. ನಾನು ಆರೋಗ್ಯ ಸುಧಾರಿಸಿದ ತಕ್ಷಣ ಗ್ರಾಮಕ್ಕೆ ಭೇಟಿ ನೀಡುತ್ತೇನೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿದ್ದು, ಜನ ಆತಂಕಕ್ಕೀಡಾಗಿದ್ದಾರೆ. ಸರ್ಕಾರ ತಕ್ಷಣ ಈ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕಿ ಗ್ರಾಮಸ್ಥರ ಆತಂಕ ದೂರ ಮಾಡಬೇಕು ಎಂದು ಒತ್ತಾಯಿಸಿದರು.

ಇಂಟರ್ನ್‌ಶಿಪ್‌ಗೆ ಅರ್ಜಿ ಆಹ್ವಾನ

ಮೈಸೂರು, ಫೆ3– ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2023–24ನೇ ಸಾಲಿನ TULIP: The Urban Learning Internship Programme ಅನ್ನು ಅನುಷ್ಠಾನ ಮಾಡಿದ್ದು, ಪಾಲಿಕೆ ವ್ಯಾಪ್ತಿಯಲ್ಲಿನ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮ ವಿದ್ಯಾರ್ಥಿಗಳಿಗೆ ಇಂಟರ್ ಶಿಪ್ ನೀಡಲು ಅರ್ಜಿ ಅಹ್ವಾನಿಸಲಾಗಿದೆ. ಡೇ–ಎನ್.ಯು.ಎಲ್.ಎಂ ಅಭಿಯಾನದ ಉಪಘಟಕಗಳು ಹಾಗೂ ಪಿ.ಎಂ. ಸ್ವ-ನಿಧಿ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳ ಕುರಿತು ಅಧ್ಯಯನ ಮಾಡಿ ಜ್ಞಾನ ಮತ್ತು ಕೌಶಲ್ಯ ವೃದ್ಧಿಸಲು ಅವಕಾಶ ಕಲ್ಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ https://internship.aicteindia.org/module ulb/dashboard/TulipmMain/ವೆಬ್‌ಸೈಟ್ ಅನ್ನು ಹಾಗೂ ಮೈಸೂರು ಮಹಾನಗರ ಪಾಲಿಕೆಯ ಡೇ–ನಲ್ಮ್ ವಿಭಾಗಕ್ಕೆ ಕಛೇರಿ ವೇಳೆಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು

3rd year fond remembrance



"I have fought the good fight. I have finished the race I have kept the faith. Now there is store for me the crown of righteousness, which the lord, the righteous judge, will award to me on that day" 2Timothy 4:7-8

MOM, your life was a blessing. Your memory a treasure. You are loved beyond words and missed beyond measure.

Smt. Susheela Bhagya Mani
14.11.1963 - 04.2.2021

Yours ever grieving daughters Ramya.S and Vinutha. S

WANTED

SALES EXECUTIVES
MALE - Below 40 Yrs
For: MATTRESSES MANUFACTURING COMPANY IN NAGAWALA, MYSURU
Contact: 9880512047
Email: admin@comfortsleep.in

Available

Sridevi Function Hall
Kuvempunagar, Mysuru, contact
9353186395

CAT MISSING



Name: CHINNU Age: 14 years

Indian Cat, White Colour, Missing since 30.01.2024 at 4.30am. Last seen at # 103,1st Stage, 8th Main, Hebbal Mysore. (Annapoorneswari Temple Road).

Finders Please Contact :
Vijaya : 96324 40136
Kavya : 97385 16522
Subramanya: 90086 02869
Finders will be rewarded.

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264


ಮನೆ ಮಾರಾಟಕ್ಕೆ ಇದೆ

ಮೈಸೂರಿನ ಶಾರದಾದೇವಿನಗರ ಕಾವೇರಿ ಅಪಾರ್ಟ್‌ಮೆಂಟ್‌ನಲ್ಲಿ ಎಂಐಜಿ ಮನೆ ಸಂಖ್ಯೆ 542 ಮೊದಲ ಮಹಡಿ ಬೆಲೆ 21 ಲಕ್ಷ- ನೆಗೋಷಿಯಬಲ್, ಸಂಪೂರ್ಣ ಅಲ್ಟರ್ ಆಗಿರುತ್ತದೆ.
8050560666

SITE FOR SALE

MMJ VB CITY NEAR KBL LAYOUT KRS ROAD 40X60 (1), 30X40 (3) . CONTACT:
7348891475
9206803280

ಎರಡನೇ ವರ್ಷದ ಸವಿನೆನಪು



ನಾರಾಯಣ್‌ಗೌಡ

ಸದಾ ನಿಮ್ಮ ನೆನಪಿನಲ್ಲಿರುವ, ಪತ್ನಿ ಗೀತಮ್ಮ ಮತ್ತು ಕುಟುಂಬವರ್ಗದವರು

HYLAND PROPERTIES

#775, Kalidasa Road, Vijayanagara 1st Stage, Next to MORE Super Market, Mysuru

REQUIRED
- TELE CALLERS
- SALES & MARKETING

Minimum1-2 year experience
Basic Salary : 8000 - 12000

Mob: 9108070002
Drop a resume: hylandproperties09@gmail.com

SITES FOR SALE

LVR Enclave
30x40 E/F
30x57 N/E Corner
40x70 } W/F 60 Ft. Road
40x75
40x65 S/W Corner
Near Preethi Layout
Srirampura 2nd Stage, Mysuru
9900466811, 9980270076

ಅಭಿನಂದನೆಗಳು




ನ್ಯಾಷನಲ್‌ಲೆವೆಲ್ ಡಾನ್ಸ್ ಸ್ಪರ್ಧೆಯಲ್ಲಿ ಭಾಗವಹಿಸಲು ಜಮ್ಮುಕಾಶ್ಮೀರ್‌ಗೆ ತೆರಳುತ್ತಿರುವ **ಎನ್.ಪ್ರಣವ್‌ಗೆ** ಅಭಿನಂದನೆಗಳು

ಶುಭಕೋರುವವರು: ಮಂಜುಳ, ಅನಂದ, ರಾಧ ನಾರಾಯಣ್ ಬಂಧುಮಿತ್ರರು ಹಾಗೂ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


1ನೇ ವರ್ಷದ ಸವಿನೆನಪು



ದಿ|| ಲಾರಿ ದೇವಣ್ಣನವರು

ದುಃಖಿತರು:
ಪತ್ನಿ: ಸಾವಿತ್ರಮ್ಮ ಎಂ.ಎಸ್., ಮಗಳು: ನೇತ್ರಾವತಿ, ಶ್ವೇತಾವತಿ
ಅಳಿಯ: ಮಾಕೊಂಡು, ಎಂ.ಎಂ. ಮೋಹನ್
ಮೊಮ್ಮಕ್ಕಳು: ಮನೋಜ್ ಎಂ. ಮೋಹಿತ, ಎಂ.ಎಂ. ಬೋಜಣ್ಣ
ಮೊ: 9880838306, ಹಿನಕಲ್ ಮೈಸೂರು

DOG IS MISSING



Richie (Pug)
Contact 9902297234 6363697955
WIN CASH PRICE

Dog age: 3 years
Missing from: 20-01-2024
Time of missing : 11.35am onwards
Place: BEML Layout, Srirampura 2nd stage near, Post office Mysore- 570023

ಸುಸಜ್ಜಿತವಾಗಿ ನಡೆಯುತ್ತಿರುವ ಇಟ್ಟಿಗೆ ಫ್ಯಾಕ್ಟರಿ ಬಾಡಿಗೆಗೆ ದೊರೆಯುತ್ತದೆ (ಮಣ್ಣಿನ ಸಮೇತ)

BRICK FACTORY AVAILABLE FOR RENT (WITH SOIL)
ಸಂಪರ್ಕಿಸಿ : 8296240149

STAR OF MYSORE

ನಂಜನಗೂಡಿನಲ್ಲಿ ನಮ್ಮ ಏಜೆಂಟ್

"ಸ್ಟಾರ್ ಆಫ್ ಮೈಸೂರ್" ಪತ್ರಿಕೆಗಾಗಿ ಹೆಚ್.ಎಸ್. ಚಂದ್ರು, ಸಿದ್ದೇಶ್ವರ ಸ್ಟೇಷನರಿ ಬುಕ್ ಸ್ಟಾಲ್ ಸಿಟಿಜನ್ ಸ್ಕೂಲ್ ಹಿಂಭಾಗ, ಯು.ಬಿ. ಚೇಕರಿ ಬಳಿ, ನಂಜನಗೂಡು ಮೊ: 9880509200 ಇವರನ್ನು ಸಂಪರ್ಕಿಸುವುದು.
– ಪ್ರಸರಣಾಧಿಕಾರಿ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

JNANAVAAHINI SHIKSHANA SAMSTHE, MYSORE (R)

MYSORE COLLEGE OF ENGINEERING & MANAGEMENT
(Approved by AICTE, New Delhi & Affiliated to VTU, Belagavi)
No. 1072, Big Banyan Tree, 5th km, T. Narasipura Road, NH 212, Mysore-28

EMPLOYMENT NOTIFICATION - 2024

Applications are invited from the qualified & competent professionals for the following positions

1) Professor 2) Associate Professor 3) Assistant Professor 4) Lab Instructors 5) Receptionist 6) Drivers 7) Clerk 8) Gardner 9) System admin 10) Placement Officer 11) Physical Education Director

Disciplines:
1) Computer Science and Engineering [CSE, ISE, AI & ML and DS]
2) Electronics and Communication 3) Civil Engineering
4) Mechanical Engineering
5) Basic Science (Mathematics, Physics and Chemistry)
6) Kannada 7) English 8) Constitution of India

Qualification and Pay scale as per AICTE norms. Submit hard copy or softcopy of CV, Certificates & a Passport Size photograph within 7 days of this advertisement.

E-mail.: hrmycem@gmail.com
Ph: 9108012040
Sd/- Management, MyCEM

(call timings : 10.30am to 4.30pm)
website: www.mycem.edu.in

Hi! TAXI



ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up MYSURU
9611177599

Dubai



5 Nights 6 Days
Only 6 seats are available
Last date for Booking 5th Feb 2024
PACKAGE COST: Per Person Rs.89,000/- Incl Tax
GROUP PACKAGE
DEPARTURE DATE Feb 13th 2024
For More Details Contact : 96112 06601

ನಿಸರ್ಗ ಇಕೋ ಪ್ಯಾರಡೈಸ್

HP HYLAND PROPERTIES — DTCP APPROVAL
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ

30x40 | 30x50
40x60 | 50x80

ಅತಿಹೆಚ್ಚು ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಹೈಲ್ಯಾಂಡ್ ಪ್ರಾಪರ್ಟೀಸ್ ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
90713 86615
95133 01854

STG Public School

Chinakurali,Pandavapura Taluk,Mandya district - 571455

STAFF RECRUITMENT 2024-25

POSITIONS	QUALIFICATION
VICE PRINCIPAL	MSc, B.Ed
ENGLISH Teacher (Higher Primary)	MA, B.Ed
SCIENCE Teacher (Higher Primary)	B.Sc / M.Sc, B.Ed
ART TEACHER	B F A / M F A
PE TEACHER	BPEd / MPEd
KINDERGARTEN	Graduation with Diploma in Montessori Education or Diploma in Early Childhood Care and Education
SPECIAL EDUCATOR	MSc, B.Ed in Special Education / PG Diploma in Special Education
MARKETING EXECUTIVE	Degree from a recognised University. Candidates should have min 2+ years of relevant experience in marketing preferably with Educational Institutions.
FRONT OFFICE EXECUTIVE	Degree from a recognised University. Excellent communication in Kannada & English with computer knowledge.

SALARY BEST IN THE INDUSTRY
Kindly email your resume to info@stgpublicschool.com with a passport size photograph within 5 days of publishing this advertisement or whatsApp your resume to 7022037862
FOR QUERIES CALL - 9108481695

ಹಸಿರು ನಮ್ಮ ಉಸಿರು



D.G.T.M ENGLISH MEDIUM SCHOOL

DGTM Educational Institution
NURSERY - PRIMARY - HIGH SCHOOL
Chamundivanam, Near Sterling Theatre, Vidyaranyapuram, Mysuru - 08
E-mail: dgtmschool@gmail.com Website: www.dgtmeducations.org

WALK-IN INTERVIEW

Committed, Inspiring & skillful Teachers are Informed to attend walk-in-interview on **25-02-2024 (Sunday)** at school premises from **10:00 a.m to 2:00 p.m.** with necessary documents including passport size photos. Fluency in English is a must. Additional qualification will have extra weight age.

POST	QUALIFICATION
Mathematics - 2	M.Sc. in Maths with B.Ed
Physics - 1	M.Sc. in Physics with B.Ed
Chemistry & Biology - 2	M.Sc. in Chemistry/Biology with B.Ed
English & Social Science - 2	M.A. with B.Ed in English & S.Science
Primary Teacher Kannada, English & Hindi - 5	B.Sc./B.A with B.Ed
Nursery Teacher - 2	D.Ed / NST
Computer Science - 1	Any degree with Diploma in C.S.
Drawing - 1	Any degree with Diploma in Drawing
Music Teacher - 1	Relevant

Send Your Resume
dgtmschool@gmail.com
WhatsApp No. - 9449614880
Sd/- M.V. Thyagaraj Secretary

Now on Opposite Marimallappa — Lassi Shop



INAUGURAL OFFER on feb 5th & 6th
ಫ್ರೂಟ್ ಜ್ಯೂಸ್
ANY FRESH JUICE @ Just Rs.20/-
#10 CH12, Siddesh archid, Opp Marimallapa School, Seethavillasa Road, Chamaraja Mohalla, Mysuru - 570024
MOB: 9886481265

Last 2 Sites available at Lakshmi Enclave, RT Nagar

Site No. 23
Measuring 2230 Sqft - North Facing
Site No. 34
Measuring 2652 Sqft - South Facing (60 Feet Road)
READY TO REGISTER
MUDA Khatha,
Bank loan available Upto 80%
63608 49037
for the best price offer

REQUIRED EXECUTIVE - ACCOUNTS(GST)

Our client is a reputed FMCG company in Mysuru and looking for candidates having qualification & experience as mentioned below, to be appointed as Executive-Accounts (GST).

Position	Qualification	Experience
Executive-Accounts (GST)	B. Com/BBA/BBM with or without CA Articleship	3 to 5 Years experience - familiarity with GST provisions, (filing, reconciliation, adjudication, etc.,)

- SAP knowledge would be an added advantage. Salary will be commensurate with qualification and experience and at par with industry.
- Please apply within 10 days to: **expertac698@gmail.com** mentioning "Application for Executive Accounts(GST)" in the subject.

STAR OF MYSORE

SPECIAL ISSUE

Star of Mysore is completing 46 years of service on 16th February 2024 and entering 47th year of publication. As in the past, this year too we will be publishing a Special Issue.

We request our advertisers and patrons to release their advertisements before 12th February to facilitate printing as per schedule.

HEAD OFFICE
0821-2496520 (5-LINES)
Ad Dept. - 0821-2496522 / 23
Email : ad@starofmysore.com

Maria G. Fernandes
Advt. Manager: 94485-25060
Joy Anthony Dove
Sr. Executive-Ad Sales
89516-68960
Prema
Sr. Executive Advertising
98805-49879

K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud : 98805-09200 / 99016-02226
T.N. Pura : 94483-05750
Hassan : 94484-01175
Bengaluru : 98440-46761

FLAT FOR SALE

3 BHK,
in VV Mohalla,
Prime Location with
With Car Parking
Call 74117 96800

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಬಾಲಸುಬ್ರಮಣ್ಯ ರವರ ಮಗಳು ಮತ್ತು ಶ್ರೀ. ಬಂಗಾರು ಸ್ವಾಮಿ ಬಿ. ರವರ ಧರ್ಮಪತ್ನಿ ಶ್ರೀಮತಿ. ಶಿಲ್ಪಶ್ರೀ ಬಿ., ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು, ಹೂಟಗಳ್ಳಿ, ಕೆ ಎಚ್ ಬಿ ಕಾಲೋನಿ, ಫೇಸ್-2, ಗ್ರೂಪ್-04, ಎಂಐಜಿ-01, ಮನೆ ನಂ. ಜಿ ಎಫ್ 54 ಮತ್ತು ಎಫ್ ಎಫ್ 56ರ, ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ : 08 ಮೀಟರ್ ಮತ್ತು ಉತ್ತರ ದಕ್ಷಿಣ: 16.40 ಮೀಟರ್, ಚಕ್ಕುಬಂದಿ: ಪೂರ್ವಕ್ಕೆ: ಮನೆ ನಂ. 57 ಮತ್ತು 59, ಪಶ್ಚಿಮಕ್ಕೆ: ಮನೆ ನಂ. 53 ಮತ್ತು 55, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಮನೆ.

ಸಹಿ/- ಶ್ರೀಲತಾ ಶಿಲ್ಪ, ವಕೀಲರು
email: sldlawfirm2021@gmail.com

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಅದರ ಮಾಲೀಕರಾದ ಶ್ರೀ. ಆಶೋಕಾನಂದ ಬಿನ್ ದಿ|| ರವಿಕುಮಾರ್, ಮತ್ತು ಅವರ ಧರ್ಮಪತ್ನಿ ಶ್ರೀಮತಿ ಉಷಾ, ಟಿ.ವಿ ಹಾಗೂ ಮಕ್ಕಳಾದ ಅಂಜಲಿ ಎಂ.ಎ, ಅಮಿತ್ ಎಂ.ಎ ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತಿನ ಸಂಬಂಧವಾಗಿ ಬೇರೆ ಯಾರಿಗಾದರೂ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳು ಇದ್ದಲ್ಲಿ, ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಏಳು ದಿನಗಳ ಒಳಗಾಗಿ ತಮ್ಮಲ್ಲಿರುವ ಹಕ್ಕು, ಆಸಕ್ತಿ ಮತ್ತು ಸ್ವಾಮ್ಯಗಳ ಸಂಬಂಧವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ, ದಾಖಲೆ ಸಹಿತ ಈ ಕೆಳಕಂಡ ವಿಳಾಸಕ್ಕೆ ಲಿಖಿತವಾಗಿ ತಿಳಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ, ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಕ್ರಯಕ್ಕೆ ಪಡೆಯುವರೆಂದೂ, ಆ ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಜೆ.ಟಿ.ಕೆ 1ನೇ ಹಂತ, ಕುವೆಂಪುನಗರ, ಸಿ & ಡಿ ಬ್ಲಾಕ್, 2ನೇ ಪಶ್ಚಿಮದ ಕ್ರಾಸ್, ಮನೆ ನಂ.1578, ಇದರ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 40.00 ಅಡಿ, ಉತ್ತರದಿಂದ ದಕ್ಷಿಣಕ್ಕೆ: 50.00 ಅಡಿಗಳು 2000 ಚದರ ಅಡಿಗಳು ಮತ್ತು ಇದರಲ್ಲಿ ಕಟ್ಟಿರುವ 800 ಚದರ ಅಡಿ ಆರ್ ಸಿ ಸಿ ಮೇಲ್ಛಾವಣಿ/ಕಂಡುಗಾರೆ ಹೆಂಚಿನ ಮನೆ ಉಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ: 1577, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ: 1579, ಉತ್ತರಕ್ಕೆ: ರಸ್ತೆ, ಮತ್ತು ದಕ್ಷಿಣಕ್ಕೆ : ನಿವೇಶನ ಸಂಖ್ಯೆ: 1579.

(ಹೆಚ್.ಎಂ. ಸುಧಾಕರ್)
ವಕೀಲರು, ಕಿಡಿಬಿ 51/97
ನಂ. 23, ಪೆಟ್ರೋಲ್ ಬಂಕ್ ಹಿಂಭಾಗ, ನಿವೇದಿತನಗರ, ಮೈಸೂರು Ph: 94485 58136

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರು ಕೆಳಗಿನ ಅನುಸೂಚಿ ತಯಾರಿಸುವ ಸ್ವತ್ತನ್ನು ಲೇಟ್. ಕುಮಾರ್.ಕೆ.ಆರ್ ರವರ ಧರ್ಮಪತ್ನಿ ಶ್ರೀಮತಿ. ಗಿರಿಜಾ.ಎಮ್ ಮತ್ತು ಅವರ ಮಕ್ಕಳುಗಳಾದ ಶ್ರೀಮತಿ.ರಮ್ಯಾ ಕುಮಾರ್ ಮತ್ತು ಶ್ರೀ.ಹೇಮಂತ್ ರಾಜ್ ಕುಮಾರ್‌ರವರುಗಳಿಂದ ಖರೀದಿಸಲು ಆಸಕ್ತಿ ಉಳ್ಳವರಾಗಿರುತ್ತಾರೆ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಕ್ರಯ, ದಾನ, ಭೋಗ್ಯ, ಅಡಮಾನ ಅನುವಂಶೀಯತೆ, ವಿಲ್, ಪಾಲುದಾರಿಕೆ, ಬಾಡಿಗೆ, ವರದಾನಗಳ ಅಥವಾ ಮತ್ಯಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಈ ದಿನದಿಂದ 14 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಅನುಸೂಚಿ ಸ್ವತ್ತು: ಮೈಸೂರು - 570023, ಚಾಮರಾಜ ಮೊಹಲ್ಲಾ, ಸರಸ್ವತಿಪುರಂ, ಸ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ವಾಸದ ನಿವೇಶನ ಸಂಖ್ಯೆ 850, ಪಿಐಡಿ ಸಂಖ್ಯೆ. 2C-1-5-171ರ ವಿಸ್ತೀರ್ಣ ಪೂರ್ವ ಪಶ್ಚಿಮ: 15.240 030 ಮೀಟರ್‌ಗಳು, ಉತ್ತರ ದಕ್ಷಿಣ 21.336 043 ಮೀಟರ್‌ಗಳು, ಒಟ್ಟು ವಿಸ್ತೀರ್ಣ 325.1605 ಚದರ ಮೀಟರ್ ಸ್ವತ್ತಿಗೆ ಚಕ್ಕುಬಂದಿ. ಪೂರ್ವಕ್ಕೆ : ನಿವೇಶನ ಸಂಖ್ಯೆ.851, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ.849, ಉತ್ತರಕ್ಕೆ : ನಿವೇಶನ ಸಂಖ್ಯೆ 859 & 860, ದಕ್ಷಿಣಕ್ಕೆ : ರಸ್ತೆ

ಸಹಿ/- ಶ್ರೀ.ಎಮ್.ಎಸ್.ಜಗದೀಶ್, ವಕೀಲರು
ವಿಳಾಸ: #206/A, CH-31/A, 1ನೇ ಮಹಡಿ, ಸ್ಯೂ ಕಾಂತರಾಜ್ ಅರಸ್ ರಸ್ತೆ, ಬಲ್ಲಾಳ್ ವೃತ್ತದ ಹತ್ತಿರ, ಚಾಮರಾಜಪುರಂ, ಮೈಸೂರು- 570005.
ದಿನಾಂಕ :03.02.2024
ಸ್ಥಳ: ಮೈಸೂರು

THIRUMALA PUBLIC SCHOOL

(Affiliated to CBSE, New Delhi, Aff.No:831085)
#96, Sardar Vallabhbhai Patel Nagar (Police Layout), T. Narasipura Road, Mysore - 570028

Applications are invited from Enthusiastic, Qualified and Experienced Candidates for the following posts.

POST	QUALIFICATION
Nursery Teachers	NST/NTT/Montessori Training
TGT Science	B.Sc/M.Sc with B.Ed
PRT Language Teachers (to Handle English, Hindi)	B.A with B.Ed/D.Ed/D.El.d
Art and Craft Teachers	Diploma/B.F.A/M.F.A in Arts and Craft
Computer Teachers	BCA/B.Sc/M.Sc/B.E in Computer Science
Office Assistant	Any Degree with knowledge of Accounts and Computer Skills

- Candidate should be fluent in Communicative English and well versed in Computer.
- Experienced Candidates will be given priority.
- Salary will commensurate with competence, qualification & experience.

Apply within 15 days at the address above or by email along with credentials & photo
Email: career@thirumalapublicschool.org, Ph: 9148102123